


ಸಂಚಯ

ಸಾಂಸ್ಕೃತಿಕ ಪತ್ರಿಕೆ



ಸಂಚಿಕೆ

೫೬

ಸಂಚಯ

ಸಾಂಸ್ಕೃತಿಕ ಪತ್ರಿಕೆ

ತ್ರೈಮಾಸಿಕ

ಸಂಪುಟ : ೧೧

ಸಂಚಿಕೆ : ೩ (೫೬)

ಮಾರ್ಚಿ : ೨೦೦೧

ಸಂಪಾದಕ

ಡಿ.ವಿ. ಪ್ರಹ್ಲಾದ್

ಅಚರ ಜಗದ ಚಲನದಾಸೆ
ಮೂಕ ಜಗದ ಗೀತದಾಸೆ
ನಿಯತಿ ನಿಯಮ ನಿಯತ ಜಗದ
ನಗುವಿನಾಸೆ ನಾ. - ಪು.ತಿ.ನ

ಚಂದಾವಿವರ

ಬಿಡಿ ಪ್ರತಿ : ರೂ. ೨೦/-

ವಾರ್ಷಿಕ ಚಂದಾ : ರೂ. ೮೦/-

ಎರಡು ವರ್ಷಕ್ಕೆ : ರೂ. ೧೬೦/-

ಐದು ವರ್ಷಕ್ಕೆ : ರೂ. ೪೦೦/-



ಮುಖಪುಟ ಚಿತ್ರ : ಶಂಕರ ಪಾಟೀಲರ ಕಲಾಕೃತಿ
ಸುಮಂಗಲಾ ಬಾದರದಿನ್ನಿ, ಚಂದ್ರ ಮಾಗಡಿ, ಭಗವತಿ
ಸಿ.ವಿ. ಶೇಷಾದ್ರಿ ಅವರ ಚಿತ್ರಗಳು

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೨ನೇ ಹಂತ, ೨ನೇ ಘಟ್ಟ
ಬನಶಂಕರಿ, ಬೆಂಗಳೂರು - ೫೬೦ ೦೦೮೫
ಫೋನ್ : ೦೮೦-೬೭೯೧೯೨೫

ವಿನ್ಯಾಸ : ಜಗದ್ಧಾತ್ರೀ ಗ್ರಾಫಿಕ್ಸ್, ☎ : 3323293

ಪ್ರತಿಕ್ರಿಯೆ

ಪುಟ್ಟದು ಸುಂದರ ಎಂಬಂತೆ ಈ ಸಂಚಿಕೆ. ಈ Globalisation ನ ಹೊಡೆತದಲ್ಲಿ ನಮ್ಮ ಭಾಷೆ ಸಂಸ್ಕೃತಿ ಬಳಲುವುದರಲ್ಲಿ ಸಂಶಯವಿಲ್ಲ. ಪ್ರಸ್ತುತ ಸಂಚಯದಂಥಾ ಪತ್ರಿಕೆಗಳು ಕಷ್ಟಪಟ್ಟು ಏಗಿ ಶಕ್ತ್ಯಾನುಸಾರ ನಿಂತ ನೆಲವನ್ನು ಉಳಿಸಿಕೊಳ್ಳಬೇಕಾಗಿದೆ. ನಿಮ್ಮ ಪ್ರಯತ್ನವನ್ನು ಬಹಳ ಗೌರವದಿಂದ ಬೆಂಬಲಿಸುತ್ತೇನೆ.

- ಸಿ. ನಾಗಣ್ಣ, ಮೈಸೂರು

ಹೀಗೆ ಕೂತು ಯೋಚಿಸಿದಾಗ ಅನ್ನಿಸ್ತು, ಇಂತಹ ಒದ್ದಾಟ ಚಡಪಡಿಕೆ, ಮಾಡಬೇಕೆಂಬ ಉತ್ಸಾಹ, ಮಾಡಿ ಮುಗಿಸಿದಾಗ ಸಂಚಯ ಹೊರಬಂದಾಗಿನ ನಿರಾಳತೆ ಹಾಗೂ ಅವೆಲ್ಲ ಒಟ್ಟಾಗಿ ಒಡಮೂಡಿದ ಗುಂಪು. ಸಮೂಹ ಹೇಗೆಲ್ಲಾ ರೂಪುಗೊಳ್ಳುತ್ತೆ ಅಲ್ವಾ. ಪಕ್ಕಾ ವ್ಯವಹಾರಸ್ಥರ ಥಾಟಿಯಲ್ಲೇ ಲೆಕ್ಕ ಹಾಕಿದರೂ ಸಂಚಯ ನಿಮಗೆ ಕೊಡುವ ಖುಷಿ, Relief ಮನುಷ್ಯ ಸಂಬಂಧದ ಒಡನಾಟವನ್ನು ನಾನು ಊಹಿಸಬಲ್ಲೆ.

- ಸುಧಾ ಶರ್ಮ, ಬೆಂಗಳೂರು

ಪತ್ರಿಕೆ ತುಂಬಾ ಸುಧಾರಿತ, ವಿಚಾರ ಪೂರ್ಣ ರೂಪ ಪಡೆದು ಓದುಗರ ಒಂದು ಬಳಗವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಪತ್ರಿಕೆ ಉಳಿದು ಬೆಳೆಯುವುದರೊಂದಿಗೆ ಓದುಗರೂ ಉಳಿದು - ಬೆಳೆಯಬೇಕಾದ ಪರಿಸ್ಥಿತಿ ಇದೆ. ಪತ್ರಿಕೆಯ ಹಿಂದಿನ ತಮ್ಮೆಲ್ಲರ ಶ್ರದ್ಧೆ ಮತ್ತು ಶ್ರಮಕ್ಕೆ ಅಭಿನಂದನೆಗಳು. ಪತ್ರಿಕೆಗಾಗಿ ಕಾಯುತ್ತಿರುತ್ತೇನೆ.

- ಅರುಂಧತಿ ರಮೇಶ್, ದಾವಣಗೆರೆ

ಹರೀಶ್ ಕೇರ, ರವಿಕುಮಾರ್ ಇವರ ಕವಿತೆಗಳು ನನಗೆ ತುಂಬಾ ಹಿಡಿಸಿದವು. ಕವಿಗಳಿಗೆ ಧನ್ಯವಾದಗಳು. ನಿಮ್ಮ ಕೆಲಸ ಹೀಗೆ ಉತ್ಸಾಹದಿಂದ ಮುಂದುವರೆಯಲಿ.

- ಸಿ.ಪಿ. ರವಿಕುಮಾರ್, ಬೆಂಗಳೂರು

ಚಂದಾದಾರರಲ್ಲಿ ಒಂದು ಮಾತು

ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ, ಹೊರ ಊರಿನ ಚೆಕ್ ಕಳುಹಿಸುವವರು ರೂ. 10/- ಹೆಚ್ಚಿಗೆ ಕಳುಹಿಸಿ. ಸಂಚಯ ಎನ್ನುವ ಹೆಸರಿಗೇ ನಿಮ್ಮ ಚೆಕ್ ಡೀಡಿ ಕಳುಹಿಸಬಹುದು.

ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದೂ ಬೇಡ.

ಪುಸ್ತಕ ವಿಮರ್ಶೆ / ಪರಿಚಯಕ್ಕೆ ಸಾಧ್ಯವಾದಲ್ಲಿ ಎರಡು ಪ್ರತಿ ಕಳುಹಿಸಿ

ನಿಮ್ಮ ಸ್ನೇಹಿತರನ್ನು ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿಸಿ ಸಂಚಯದ ಸ್ನೇಹವಲಯ ವಿಸ್ತರಿಸಿ.

ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.

ಈ ಸಂಚಯದಲ್ಲಿ....

ಕವಿತೆಗಳು



ಹೊಳೆದದ್ದೆ ತಾರೆ
ಉಳಿದದ್ದು ಆಕಾಶ !

ಪ್ರಿಯ ಓದುಗರೆ,

ಈಚೆಗೆ ಇಬ್ಬರು ಲೇಖಕ ಗೆಳೆಯರು ಮಾತಿಗೆ ಸಿಕ್ಕರು, ಅವರ ಜೊತೆಗಿನ ಸಂಭಾಷಣೆಯಲ್ಲಿ ಮುಖ್ಯವಾಗಿದ್ದದು, ಈ ಲೇಖಕ ಹೀಗೆ, ಅವರಾ.... ಬಿಡಿ ಅವರದ್ದೇನು ಸಾಹಿತ್ಯವೆ? ಇವರದ್ದು ಬರೀ ಜೊಳ್ಳು ಇಷ್ಟೇ ಅಂತ ಪ್ರತಿಯೊಬ್ಬ ಸಾಹಿತಿಯ ಸಾಹಿತ್ಯವನ್ನೂ ಕೇಜಿ ಗ್ರಾಮ್‌ಗಳಲ್ಲಿ ಅಳೆದು ಮುಗಿಸುತ್ತಿದ್ದರು. ಸರಿಯಪ್ಪಾ, ಅದೇ ಭೈರಪ್ಪ, ಬಲ್ಲಾಳ, ಚಿತ್ತಾಲ, ತೇಜಸ್ವಿ, ಇವರುಗಳೆಲ್ಲಾ ಮುದಿಯಾಗಿ ಇವರ ಸಾಹಿತ್ಯವೂ ಮಂಕಾಗುತ್ತಿದೆ ಅಂತ ಇಟ್ಟುಕೊಳ್ಳೋಣ. ಹೊಸ ತಲೆಮಾರಿನ ನೀವುಗಳು ಏನು ಬರೆಯುತ್ತೀರಿ ಎಷ್ಟು ಬರೆದಿದ್ದೀರಿ.... ಅಂದರೆ ಅದಕ್ಕೆ ಉತ್ತರಿಸಲು ತಡಕಾಡಿದರು, ಸಮಯವೇ ಇಲ್ಲ ಬಿಝಿ.... ಸಾಹಿತ್ಯಕಸಂದರ್ಭ ಅಂತೆಲ್ಲಾ ಸಬೂಬುಗಳನ್ನು ಕೊಟ್ಟರು, ಈ ಮನೋಭಾವದಿಂದ ಯಾರಿಗೂ ಲಾಭವಿಲ್ಲ. ಜಾಗತೀಕರಣ ಸಂಸ್ಕೃತಿಯ ಅಧಃಪತನ ಅಂತೆಲ್ಲಾ ಎಷ್ಟೇ ಬೊಂಬಡಾ ಬಜಾಯಿಸಿದರೂ ಒಬ್ಬ ಕನ್ನಡ ಲೇಖಕ ತನ್ನೊಳಗೆ ತಾನು ಮುಳುಗಿಕೊಂಡು ಸೃಜಿಸಬಲ್ಲ ವಾತಾವರಣವಂತೂ ಯಾವತ್ತೂ ಇದೆ. ಒಬ್ಬ ಹೊಸಾ ಲೇಖಕ ತನ್ನ ಬೆನ್ನ ಹಿಂದಿರುವ ಸಾಹಿತ್ಯದ ರಾಶಿಗೆ ಉತ್ತರಕೊಡಲು ಸಾಧ್ಯವಾಗುವುದು ತಾನೂ ಬರೆಯುವುದರಿಂದಲೇ. ಬರೀ ಮಾತಿನಿಂದಲ್ಲ. ಸುಮ್ಮನೆ ಪುಸ್ತಕದ ರ್‍ಯಾಕಿನೆಡೆ ಕಣ್ಣು ಹಾಯಿಸಿದರೆ ಡಿ.ವಿ.ಜಿ-ಕೃತಿಶ್ರೇಣಿ, ಕಾರಂತರ ಕಾದಂಬರಿಗಳು , ಮಾಸ್ತಿ ಕತೆಗಳು, ಬೇಂದ್ರೆ ಕಾವ್ಯ ಕಣ್ಣಿಗೆ ಧಾಳಾಗಿ ಕಾಣಸಿಗುತ್ತದೆ. ಅದೇ ನಂತರದ ತಲೆಮಾರಿನ ನವ್ಯ ಲೇಖಕರು ಶ್ರೇಷ್ಠತೆಯ ವ್ಯಸನಕ್ಕೆ ಅಂಟಿಕೊಂಡು, ಅಬ್ಬಬಾ ಎಂದರೆ ಒಬ್ಬ ಲೇಖಕನು ಜೀವಮಾನವಿಡೀ ಬರೆದ ಸಾಹಿತ್ಯ ಕೇವಲ ಐದಾರು ನೂರು ಪುಟಗಳಲ್ಲಿಮುಗಿದು ಹೋಗಿರುತ್ತದೆ. ಈಗಿನದ್ದಂತೂ ಸಮಗ್ರಗಳ ಸೀಜನ್ನು.

ಇತ್ತೀಚಿಗೆ ಮತ್ತೊಂದು ಕುತೂಹಲಕಾರಿ ಅಂಶಗ್ರಹಿಸಿದೆ ಒಬ್ಬ ಕನ್ನಡ ಲೇಖಕ ಬರೆದ ಒಂದು ಲೇಖನ ಸರಾಸರಿ ಮೂರುಸಲ ಬೇರೆ ಬೇರೆ ಕಡೆಗಳಲ್ಲಿ ಅಚ್ಚಾಗುತ್ತದೆ. (ಇದಕ್ಕೆ ಅಪವಾದಗಳನ್ನೂ ಗಮನಿಸಿದ್ದೇನೆ) ಮೊದಲಿಗೆ ಅದು ಒಂದು ಸೆಮಿನಾರು ಅಥವಾ ಭಾಷಣದಲ್ಲಿ ರೂಪುಪಡೆದು ನಂತರ ಪತ್ರಿಕೆಯೊಂದರಲ್ಲಿ, ಅಕಾಡೆಮಿ ವಾರ್ಷಿಕ ಸಂಕಲನದಲ್ಲಿ, ಆಯಾ ಲೇಖಕರ ಪುಸ್ತಕಗಳಲ್ಲಿ ಮತ್ತೂ ಭಾಗ್ಯವಿದ್ದರೆ ಅವರ ಸಮಗ್ರ ಸಂಗ್ರಹದಲ್ಲಿ.

ಇಂದು ಎಲ್ಲವೂ ಬೇಕು ಬೇಕೆನಿಸುವ ಹಪ ಹವೆಯ ಕಾಲ. ನಮ್ಮ ಮಧ್ಯಮ ವರ್ಗದ ಸ್ಲೋಗನ್ 'ಯೇ ದಿಲ್ ಮಾಂಗೇ ಮೋರ್' ಅಂತಲೇ ಆಗಿದೆ. ಭಾಷೆ ಬೆಳೆದಿರುವ ಶಿಕ್ಷಣ ಸಂಪರ್ಕ ಮಾಧ್ಯಮಗಳು ಉನ್ನತಿ ಸಾಧಿಸಿರುವ ಈ ಶತಮಾನದ ಆರಂಭದಲ್ಲಿ ಸಾಹಿತ್ಯಕ್ಕೂ 'ಯೇ ದಿಲ್ ಮಾಂಗೇ ಮೋರ್' ಅನ್ನಬೇಕಾಗಿದೆ. ಹೊಸ ಹೊಸ ಅನುಭವಗಳಿಗೆ ಎದೆಯೊಡ್ಡಿ ನಾವೆಲ್ಲರೂ ಹೆಚ್ಚು ಹೆಚ್ಚು ಬರೆಯಬೇಕಿದೆ. ಪತ್ರಿಕೆಗಳ ದೋಸೆ ಕ್ಯಾಂಪ್‌ಗಳಿಗಲ್ಲದೆ, ನವೋದಯದ ವಿಸ್ತಾರ, ನವ್ಯರ ಆತ್ಮ ವಿಮರ್ಶೆ, ಬಂಡಾಯದ ಸಮಾಜ ಮುಖಿತೆಯನ್ನು ಜೀರ್ಣಿಸಿಕೊಂಡು, ಅದೇ ರಾಶಿಗಟ್ಟಲೇ ಕವಿತೆ-ಕತೆಗಳನ್ನು ಬಿಟ್ಟು ಉಳಿದ ಪ್ರಕಾರಗಳಲ್ಲಿ ಸೃಜನ - ಸೃಜನೇತರ ಎಂಬ ಬೇಧವಿಲ್ಲದೆ ಸಂಪನ್ನಗೊಳಿಸಬೇಕಿದೆ. ಧ್ಯಾನಸ್ಥ ಮನಸ್ಸುಗಳ ಹುತ್ತಗಟ್ಟುವ ಚಿತ್ತಗಳಿಂದ ಹೊಸ ಸಾಹಿತ್ಯ ಯಾವ ಚಳುವಳಿ ಇಸಮ್ಮುಗಳ ಹಂಗಿಲ್ಲದೇ ಬೆಳೆಯಬೇಕಿದೆ. ಯಾವ ಭಾಷಣವೂ ಬರೀ ಮಾತಿನ ರಾಜ ಕಾರಣವೂ ಒಬ್ಬ ಲೇಖಕನನ್ನು ಒಂದು ಭಾಷೆಯನ್ನು ಗಟ್ಟಿಗೊಳಿಸುವುದಿಲ್ಲ, ಉಜ್ವಲಗೊಳಿಸುವುದಿಲ್ಲ.

ಮುಂದಿನದು ಪೂರ್ಣ ಚಂದ್ರತೇಜಸ್ವಿ ಕುರಿತ ವಿಶೇಷ ಸಂಚಿಕೆ, ನಿರೀಕ್ಷಿಸಿ.

ನಿಮ್ಮ

ಸಂಪಾದಕ

ಬೇಂದ್ರೆ ಜೀವನ - ಕಾವ್ಯ ; ಕೆಲವು ನೆಲೆಗಳು

ಡಿ.ಎಸ್. ಶ್ರೀನಿವಾಸ್ ಪ್ರಸಾದ್

ಬೇಂದ್ರೆಯವರ ಜೀವನ ಕಾವ್ಯದ ನೆಲೆಗಳು ಒಟ್ಟು ಬೆಳವಣಿಗೆಯಲ್ಲಿ ನಿರ್ಣಾಯಕವಾಗುವುದರ ಜೊತೆಗೆ, ಬಹಳ ಮಹತ್ವದ್ದೂ ಸಹ. ಬದುಕಿನಲ್ಲಿ ಕಂಡ ವಿಪುಲ ಭಾವ ಲಹರಿಗಳನ್ನು ತಮ್ಮ ಅನುಭವದ ತೆಕ್ಕೆಗೆ ಒಳಪಡಿಸಿಕೊಂಡು ಅದರ ಸಾಗರದಷ್ಟು ಸುವಿಶಾಲ ಸಂವೇದನೆಗಳನ್ನು ಅದೇ ಸ್ಥಿತಿಯಲ್ಲಿ ಕಾವ್ಯಾನುಭವಕ್ಕೆ ಸರಿ ಹೊಂದಿಸಿಕೊಂಡವರು ಬೇಂದ್ರೆ. ಬದುಕಿನ ಎಲ್ಲ ಭಾವ ಸಂಚಲನಗಳನ್ನು ಕಾವ್ಯದ ಸಾತತ್ಯದೊಂದಿಗೆ ಮೇಳೈಸಿ ಅನುಸಂಧಾನ ಗೊಳಿಸಿದ ಕ್ರಮವೇ ಬೇಂದ್ರೆಯವರನ್ನು ಕನ್ನಡ ಪರಂಪರೆಯಲ್ಲಿ ವಿಶಿಷ್ಟರನ್ನಾಗಿಸಿರುವುದು.

ಸೂಕ್ಷ್ಮ ಸಂವೇದನೆಗಳು ಭಾವನಾತ್ಮಕ ಸಂಬಂಧ ವಲಯಗಳು ಹೆಚ್ಚಾಗಿ ಕಾಣುವ, ಕಾಡುವ ಭಾರತೀಯ ಸಮುದಾಯದಲ್ಲಿ ತನ್ನ ವೈಯಕ್ತಿಕ ಬದುಕಿನಲ್ಲಿ ಹೆಚ್ಚೆ ಎನಿಸುವಷ್ಟು ಭಾವ ಶೋಧನೆ ಪ್ರಚೋದನೆಗಳಿಗೆ ಒಳಗಾದ ಬೇಂದ್ರೆಯವರು ಅದನ್ನು ಅದರ ಗರಿಷ್ಠ ಪ್ರಮಾಣದ ತೀವ್ರತೆಯಲ್ಲಿ ಅನುಭವಿಸಿದರು. ಹೀಗಾಗಿ ಓತ ಪ್ರೋತ ವಾದ, ಹರಿಯಬಿಟ್ಟ ಅನಿಯಂತ್ರಿತ ಭಾವನೆ ತಲ್ಲಣ ತಹತಹಗಳೆಲ್ಲವೂ ಕವಿ ತನ್ನ ಬದುಕಿನಲ್ಲಿ ಉಂಡ ಸಾಂದ್ರ ಅನುಭವಗಳ ದೃಷ್ಟಿಯಿಂದ ಸಹಜವೇ. ಕವಿ ಕಾವ್ಯದೊಳಗಡೆಯ ವಸ್ತುನಿಷ್ಠತೆಗೇ ಬದ್ಧರಾಗದೆ ಭಾವನಿಷ್ಠತೆಗೆ ಒಗ್ಗಿಕೊಂಡದ್ದು ಈ ಕಾರಣದಿಂದಲೇ.

ಮೂಲತ: ಬೇಂದ್ರೆಯವರ ಮನ:ಪ್ರಕೃತಿ ಹಾಗೂ ಕಾವ್ಯಪ್ರತಿಭೆ ಎರಡೂ ತುಂಬಿ ಹರಿದು ಚೆಲ್ಲಾಡಿಕೊಂಡಂಥದ್ದು ಅದು ಅದ್ದಿ ತೆಗೆದ ಕಾವ್ಯ. ಹೀಗಾಗಿ ಕವಿಯದ್ದು 'ದ್ರವರೂಪ'ದ ಪ್ರತಿಭೆ. ದ್ರವ್ಯಗುಣ-ಜೀವನ ಪರಸ್ಪರ ಹೊಂದಿರುವ ಅರ್ಥಪೂರ್ಣ ಸಂಬಂಧದಂತೆಯೇ ಕವಿಯ ಕಾವ್ಯ-ಜೀವನಕ್ಕೂ ಇದೇ ಗುಣಧರ್ಮದ ಸಾವಯವ ಸಂಬಂಧವಿದೆ.

ಅಂಬಿಕಾತನಯದತ್ತರ ಪ್ರತಿಭೆಯ ಸ್ವರೂಪ ಸಿದ್ಧಪಡಿಸಿದ ಸೂತ್ರೀಕರಿಸಿದ ಜಾಯಮಾನದ್ದಲ್ಲ. ಸಹಜಸ್ಫುರಣೆಯ, ಸ್ವಯಂಸ್ಫೂರ್ತಿ ಬಗೆಯದು. ಭಾಷೆ ಮತ್ತದರ ಸ್ವರೂಪದಲ್ಲಿ ಕುವೆಂಪು ಅವರಂತೆ ಭೂಯಿಷ್ಠ ಪದಗಳ ಬಳಕೆಯ ಒಂದು ಹಂತದ ಅನಿವಾರ್ಯತೆ ಈ ಕವಿಗೆ ಆಗಬೇಕಾದ್ದಿರಲಿಲ್ಲ. ಹಾಗಾಗಿ ಭಾಷೆಯ ಬಗೆಗೂ ಈ ಕವಿಗೆ ಮೇಲ್ಕಂಡ ಮಾತುಗಳೇ ಅನ್ವಯಿಸುತ್ತವೆ. ಜೊತೆಗೆ ಅಂಬಿಕಾತನಯ ದತ್ತರದ್ದು ಜಾನಪದ ಭಾಷೆ, ಧಾರವಾಡ ಶೈಲಿ ಎಂದು ಮುದ್ರೆಯೊತ್ತಿ ಬಿಡುವುದೂ ಎಲ್ಲ ಕಾವ್ಯಗಳೂ ಸರಳ, ಕ್ಲಿಷ್ಟ ಎಂದು ವ್ಯಾಖ್ಯಾನಿಸುವುದು



ಕವಿಯ ಕಾವ್ಯಗ್ರಹಿಕೆಗೆ ಸರಿಯಾದ ವಿಮರ್ಶಾ ಮಾನದಂಡಗಳಲ್ಲ.

ಕಾವ್ಯಸೃಷ್ಟಿಗೆ ಸಂಬಂಧಿಸಿದಂತೆ ಬೇಂದ್ರೆಯವರಿಗೆ ತಮ್ಮದೇ ಆದ ನಿಲುವುಗಳಿವೆ. ಕಾವ್ಯ ಅವರಿಗೆ 'ಶಾಬ್ದಿಕ ಸ್ವಪ್ನಸೃಷ್ಟಿ' ಯಾಗಿಯೂ ಕೆಲವೊಮ್ಮೆ ಮನದ ಮಗಳಾಗಿಯೂ ಕಾಣುತ್ತದೆ. ಭಾರತೀಯ ಕಾವ್ಯ ಮೀಮಾಂಸಕರ 'ಬ್ರಹ್ಮಾನಂದ ಸೋದರ' ಪರಿಕಲ್ಪನೆಯನ್ನೇ ಬೇಂದ್ರೆಯವರೂ ಬಳಸಿಕೊಂಡು **'ಬರುವ ಸೃಷ್ಟಿಯ ಬೇಳೆಯೊಡೆದಿದೆ ಶಬ್ದವಾಗಿದೆ ! ಶಬ್ದ ಕೇಳಣ್ಣಾ'** ಎನ್ನುತ್ತಾರೆ. ಕಾವ್ಯ ಕ್ರಿಯೆ ಎನ್ನುವುದು ಬೇಂದ್ರೆಯವರಿಗೆ ಅನಿರ್ವಚನೀಯವನ್ನು ವಚನದೊಳಗಿನಿಂದ ಧ್ವನಿತವಾಗುವಂತೆ ಮಾಡುವುದು . ಗರಿಯಲ್ಲಿ, ಬೇಂದ್ರೆ ಹಕ್ಕಿಗೆ ಗರಿ ಇದ್ದಂತೆ ಕವಿಗೆ ಕವನ . (ನಾದಲೀಲೆಯ) ಕವನ ಹೇಳುವ ಹಾಗೆ, ಗಾಳಿ ಹುಟ್ಟಿ ಕಲ್ಪನೆ ಕಣ್ಣು ಬಿಟ್ಟು ಎದೆ ತಟ್ಟಿದಾಗ ಹುಟ್ಟಿದ ಅಂತರಂಗ ಸ್ಪಂದದ ಫಲಶೃತಿ. ಕಲ್ಪನೆಗಳು ಗರಿ ಬಿಚ್ಚಿದಾಗಲೇ 'ನಿನ್ನ ನೀ **ಹೆತ್ತೆ ನಾನ್ನ ನಾಲಗೆಯಿದು ಬರಿಯ ಸೂಲಗಿತ್ತಿ**' ಎನ್ನುವ, ಕಾವ್ಯದ ಬಸಿರು ಅದರ ಹೆರಿಗೆಯ ಪ್ರಕ್ರಿಯೆಯಲ್ಲಿ ಕವಿ ಕಾವ್ಯ ಸಂಬಂಧ ಹೊರಗೆಳೆದ ಕವಿ **"ಹಾಸಾದ ಮಿಂಚಿನಿಂದ ಬೀಸಿದ್ದ ಸೆರಗಿನಿಂದ ಸೆಳೆದಂತೆ ಎರಡು ನೂಲು ಉಳಿದಾವ ನಾಕು ಸಾಲು."** ಎನ್ನುತ್ತಾ ತಮ್ಮ ಅದಮ್ಯ 'ತಾಯಿ' ಪ್ರತೀಕವನ್ನೇ ಕವಿತೆಯ ಹುಟ್ಟಿಗೂ ಅನ್ವಯಿಸುತ್ತಾರೆ. ಈ ರೀತಿ ಒಡಮೂಡಿದ ಕಾವ್ಯ ಮೈ ಕೈ ಗಳ ತಾಲದಿಂದ, ನಿತ್ಯ ನರ್ತನ ಚಲನೆಯಿಂದ ಪ್ರಾಸ ಪ್ರಾಸಗಳನ್ನು ಪಡೆದು ಹೊಂದುವ ಕಾವ್ಯವಿಲಾಸ. ಕಾವ್ಯ ಸೃಷ್ಟಿಯ ಈ ಬೆರಗಿನ ಅವಸ್ಥಾಂತರಗಳನ್ನು ಅನುಭವಿಸಿ ಕವಿ ತನ್ನ ನೋಡುವ, ಅರಿಯುವ ಸಹೃದಯನಿಗೆ **"ಎನ್ನ ಪಾಡೆನಗಿರಲಿ ಅದರ ಹಾಡನಷ್ಟೆ ನೀಡುವೆನು ರಸಿಕ ನಿನಗೆ ಕಲ್ಲು ಸಕ್ಕರೆಯಂಥ ನಿನ್ನೆದೆಯು"** ಕರಗಿದರೆ ಆ ಸವಿಯ ಹಣಿಸು ನನಗೆ ಎನ್ನುವ ಕಾವ್ಯಾದಿಸುವ ನಿಮಂತ್ರಣವೀಯುತ್ತಾರೆ.

ಇನ್ನು ಇವರ ಬದುಕೇ ಕಾವ್ಯವಾದ ಮೇಲೆ ಅದರಲ್ಲಿನ ನೋವು ನಲಿವು ಮಮತಾರಮಯೀ ವಾತ್ಸಲ್ಯಗಳೆಲ್ಲ ಸಹೃದಯರು ಸ್ವೀಕರಿಸಿ ಸಂವೇದಿಸುವಂತಿದ್ದರೂ ಕವಿ ತಮ್ಮ ತಮ್ಮ ಸಾಮಾಜಿಕ ಕಾವ್ಯ ಚಿಂತನೆಯಲ್ಲಿ ಕವಿತೆಗೊದಗಬೇಕಾದ ಸಾಮಾಜಿಕತೆ, ಸಾರ್ವತ್ರಿಕತೆ ಸಮಕಾಲೀನ ಧ್ವನಿಗಳನ್ನು ವ್ಯಕ್ತಿಗತ ಪ್ರಪಂಚದ ಹೊರಗಿನಿಂದಲೇ ನೋಡುತ್ತಾರೆ. ಇದಕ್ಕೆ ಕಾರಣ ವೈಯಕ್ತಿಕ ಭಾವನೆಗಳು ಎಷ್ಟೇ ಆದರೂ ಏನೇ ಇದ್ದರೂ ಸಾರ್ವತ್ರಿಕ ಪ್ರಜ್ಞೆಗೆಟುಕದೆ ಮತ್ತು ಖಾಸಗಿ ಆವರಣದಲ್ಲೇ ಸುತ್ತುವ ಸಾಧ್ಯತೆಗಳಿರುವುದರಿಂದ.

ಆದರೆ ಬದುಕಿನ ಖಾಸಗಿ ಸಾವು ನೋವುಗಳನ್ನು ಕವಿ ಪ್ರಕಟಿಸುವುದು ಜೀವನವನ್ನು ತಮ್ಮ ಕಾವ್ಯದೊಳಕ್ಕೇ ತರುವ ನಿಶ್ಚಿತ ಪ್ರಯತ್ನ ಉದ್ದೇಶಗಳಿಂದ. ಹೀಗಾಗಿ ಇಲ್ಲಿ ಪೃಥಕ್ಕರಣೆಗಿಂತಲೂ ಅನುಸ್ಯೂತತೆಗೆ ಹೆಚ್ಚು ಒತ್ತು. ಒಂಬತ್ತು ಮಕ್ಕಳಲ್ಲಿ ಆರು ಮಕ್ಕಳನ್ನು ಕಳೆದುಕೊಂಡಾಗಲೂ ಬೇಂದ್ರೆ. ಒಬ್ಬೊಬ್ಬ ಶಿಶು ಸತ್ತಾಗಲೂ (ಉದಾ-ಗೆ ಮೊದಲ ಕೂಸು ಕ್ಷೇಮೇಂದ್ರ ಸತ್ತಾಗ 'ಮೊದಲಿನ ಫಲವೊಂದು ಮೀಸಲು ಮಣ್ಣಿಗೆ' - ಭಾಸ್ಕರ ಸತ್ತಾಗ 'ಭೆಟ್ಟಿಗೆ ಬಂದನು ಹೊಸದೊಬ್ಬ ಕಂದನು ಅತಿಥಿಯೋ ಎಂಬಂತೆ' -- ಲಲಿತಾ ಸತ್ತಾಗ 'ನೀ ಹಿಂಗ ನೋಡಬ್ಯಾಡ ನನ್ನ ಕವನದ ವಸ್ತುವಾಗಿರುವ ಆ ಕೂಸ ಕಳ್ಕಂಡು ನೀನೆಂತೋ ಉಳ್ಕಂಡು ಲಾಲ್ಯಿತವಿಲ್ಲದ ಶೈಲಿಯೊಳು'- ಹೀಗೆ). ಮಡುಗಟ್ಟಿದ ದುಃಖದ ಸಂದರ್ಭದಲ್ಲೂ ಪ್ರಾಸ ಲಯ ಶ್ಲೇಷೆಗಳನ್ನು ತರುವ ಕ್ರಮ ಬಹುಶಃ ಬೇಂದ್ರೆಯವರಿಗೊಬ್ಬರಿಗೇ ಸಂಧ್ಯವಾಗುವಂತಹದ್ದು!! ಎದೆಯೆತ್ತರದ ಮಗ ರಾಮ ಸತ್ತಾಗಲಂತೂ ಕವಿ "ರಾಮಾ ರಾಮಾ ಏನು ಆಯಿತೋ ಆಯಿತಾಯಿತು ನೀನು ಬಂದೆ ಬಂದೆಯಾ ? ಏನು

ಹೊರಟೆಯಾ ಈಗಲೇ ಸತ್ತ ದಶರಥ ಇದ್ದ ರಾಮನಿಗಾಗಿ ಅತ್ತನು ಅಂದಿಗೆ ಸತ್ತರಾಮಗೆ ಅತ್ತೆ ಅಳುವನು ಇರುವ ದತ್ತನು ಇಂದಿಗೆ'' ಎಂಬ ಕರುಳಿರಿಯುವ ಮಿಡಿತವಿದೆ, ಆದರೆ ಇಷ್ಟೆಲ್ಲಾ ಸಂಕಷ್ಟ ದುರ್ಭರತೆ ಗಳಿಗೆ ಈಡಾಗಿಯೂ ಬೇಂದ್ರೆಯವರಿಗೆ ಬದುಕನ್ನು ಕುರಿತು ಸೇಡಿಲ್ಲ, ಆಶಾವಾದಿ ಸೆಳೆತವಿದೆ. ಹೀಗಾಗಿಯೇ ಕವಿಯ ನೆನಪುಗಳ ಮರೆವಿನೊಂದಿಗೆ, ಜಾರಿ ಹೋಗಬಹುದಾಗಿದ್ದ ಕರುಳಿನ ವಚನಗಳು. ವೈಯಕ್ತಿಕತೆಯನ್ನೂ ಮೀರಿದ ಮಹತ್ವದ ಸಾಹಿತ್ಯಕ ಕೃತಿ ದಾಖಲೆ.

ಜೀವನದಾದ್ಯಂತ ಬರುವ ಕಷ್ಟ ಕೋಟಲೆಗಳನ್ನು, ಆ ಪಟ್ಟ ಪಾಡೆಲ್ಲವನ್ನೂ ಹುಟ್ಟು ಹಾಡಾಗಿಸಿ ಹೊಸದಾಗಿ ರಸೂಗಿ ಹರಿಯಿಸುವ ಈ ಸಮಾಧಾನ ಚಿತ್ತ ಬೇಂದ್ರೆಯ ಬದುಕಿನ ಮೂಲಸ್ರೋತ. ಬೆಂದು ಬೆಂಕಿಯಲ್ಲೇ ಬೇಂದ್ರೆಯಾದ ಅನುಭವ ಸಿದ್ಧಾಂತ. ಬದುಕಿನ ಬಗ್ಗೆ ಬೇಂದ್ರೆಯವರ ಸಿದ್ಧಾಂತವನ್ನು ಇಲ್ಲಿ ಬಹಳ ಎಚ್ಚರದಿಂದ ಗಮನಿಸಬೇಕು. ಬದುಕಿನ ಪರಿಪೂರ್ಣತೆಯಲ್ಲೇ ತಾನೂ ಪರಿಪೂರ್ಣವಾಗಿ ಅದನ್ನು ಸಾಧಿಸುವ ಧೋರಣೆಯಲ್ಲ ಬೇಂದ್ರೆಯವರದ್ದು. ಬದಲಿಗೆ, ಬದುಕೆಂಬುದು ಇಡಿಯಾಗಿ ಪರಿಪೂರ್ಣ. ವ್ಯಕ್ತಿಗಾದರೆ ಸೀಮಿತ ವ್ಯಾಪ್ತಿಯದ್ದು ಎಂಬ ಅರಿವಿತ್ತು. 'ನೀ ಹಿಂಗ ನೋಡಬ್ಯಾಡ ನನ್ನ'ದ ಕಾವ್ಯ ಸಂದರ್ಭವೇ ಈ ನಿಟ್ಟಿನಲ್ಲಿ ಬಹಳ ಮುಖ್ಯವಾದ ಮಾತನ್ನು ಹೇಳಿದೆ. **'ಸಂಸಾರ ಸಾಗರದಾಗ ಲೆಕ್ಕವಿರದಷ್ಟು ದುಃಖದ ಬಂಡಿ ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ ಆಚೆಯ ದಂಡಿ'** ಎಂದರೆ ಬದುಕಿನ ಅಗಾಧತೆ ಅಪರಿಮಿತವಿದ್ದರೂ ನನ್ನ ಬದುಕು ಪರಿಮಿತವಾದದ್ದು ಆ ಮಿತಿಯಲ್ಲಿಯೇ ಎಲ್ಲವನ್ನೂ ಸಹಿಸಿ, ಸಾರ್ಥಕತೆ ಪಡುವುದನ್ನು ನಾ ಬಲ್ಲೆ ಎನ್ನುವ ದೃಷ್ಟಿ ಬೇಂದ್ರೆಯವರದ್ದು.

'ತಾಯಿ' ಇವರ ಜೀವ. ಜೀವನದ ಸ್ಥಾಯಿ. ತಾಯಿಯ ರೂಪಗಳು ಇವರಿಗೆ ಹಲವು. ಪಂಚಗರ್ಭಕೋಶದ ಪುತ್ರ ನನಗೈವರು ತಾಯಂದಿರು ಎನ್ನುವ ದತ್ತರ ಈ ತಾಯಿ ಕುರಿತು ಸಾಕಷ್ಟು ವಿಮರ್ಶೆ ಬಂದಿರುವುದನ್ನು ಗಮನದಲ್ಲಿಟ್ಟುಕೊಂಡು, ಕೆಲ ಭಿನ್ನ ಅಂಶಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇನೆ.

'ತಾಯಿ ಮಾಯಿ ಅಂಬಿಕೆಯೇ ನಿನ್ನ ತನಯದತ್ತನು ನೀನು ಇತ್ತುದಿತ್ತನು ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ' ಎನ್ನುತ್ತಾರೆ ಕವಿ. ಇಲ್ಲಿ ತಾಯಿ ಕುರಿತು ಸಾರ್ಥಕಭಾವ ಜನ್ಯವಾದದ್ದರ ಜೊತೆಗೆ, ತಾಯಿ ನಿನ್ನ ಕೃಪೆ ಆಶೀರ್ವಾದಗಳಿಂದಲೇ ನಾನು ಬರೆಯುತ್ತಿದ್ದೇನೆ ಎನ್ನುವ ಕವಿಯದು ಕುಮಾರವ್ಯಾಸನ ವೀರನಾರಾಯಣ ನಿಷ್ಠೆಯನ್ನು ನೆನಪಿಸುವ ಕೃತಕೃತ್ಯಭಾವ. ಆದರೆ ತಮ್ಮ ಓ ಮಾತೆಯಲ್ಲಿ ಕವಿ ತಾಯಿಯ ಅನ್ವೇಷಣೆಯನ್ನು ಅಪ್ರಜ್ಞಾ ಸ್ಥಿತಿಯ, ಅಲೌಕಿಕ ನೆಲೆಯಲ್ಲಿ ಕೈಗೊಳ್ಳುತ್ತಾರೆ. 'ಯಾವ ಯೋಗ ನಿದ್ರೆಯಲ್ಲಿ ಏನ ಕನಸ ಕಂಡೆನೊ ಯಾರ ಹಾಲನುಂಡೆನೋ ಈ ವಿಶ್ವ ಜಾಲದಲ್ಲಿ ಬಂದೆ ಅದಕೆ ಮಿಡುಕುತಾ ಅದರ ಧಾರೆ ಹುಡುಕುತ'. . ಎಂಬ ಈ ಗೊತ್ತಿರದ ಹುಡುಕುವಿಕೆ ಮುಂದೆ 'ತಾಯ ಮಾಯಿ ಶಿವಜಾಯಿ ಕಾಯಿ' ಎಂಬ ನಿಗೂಢ ನೆಲೆಯ ಪ್ರಕರ್ಷ ಸ್ಥಿತಿಯನ್ನೂ ತಲುಪುತ್ತದೆ. ಜೊತೆಗೆ ದತ್ತರಿಗೆ ತಾಯಿ ಕೇವಲ ಗರ್ಭಕೋಶದಿಂದ ಜನ್ಮ ನೀಡಿದವಳಲ್ಲ ಇವರಿಗಾಕೆ.

'ನಾಡಾಡಿ ಹಕ್ಕಿ ನೀನೆಲ್ಲೊ ಮಗನೆ
ಹೊಕ್ಯಾಕ ಬೆಳ್ಳಕ್ಕಿಯಾಗ
ನಿನ್ನ ತಾಯ ಕಣ್ಣಹನಿ

ಮುತ್ತ ಸುರಿಸುತಾಳ'
ಮಾನಸದ ಕೊಳ್ಳದಾಗ,

ಅಂದರೆ, ಈತ ಆಕೆಗೆ ಮನಸ್ಸಿನ ನೆಲೆಯಿಂದ ಜನಿಸಿದ ಮಾನಸಾತ್ಮಜನೂ ಹೌದು. ಕೀರ್ತಿನಾಥ ಕುರ್ತಕೋಟಿಯವರು ಹೇಳುವಂತೆ 'ಬೇಂದ್ರೆಯವರದ್ದು ಬಾಲ್ಯದಿಂದಲೂ ಸ್ತ್ರೀಕೃಪಾಪೋಷಿತವಾದ ಬಾಲ್ಯ ಅದೂ ಧಾರವಾಡದ ಶಾಲ್ಮಲೆಯ ಉಗಮದಂತೆ ಕಣ್ಣಿಗೆ ಕಾಣುವುದಿಲ್ಲ' ಎನ್ನುವಷ್ಟು ಆಳ ಅಗಲಗಳ ಗಹನತೆಯನ್ನು ಹೊಂದಿರುವಂಥದ್ದು. ಇವುಗಳಿಂದ ಕವಿಗೆ ಸ್ತ್ರೀ ಕುಲದ ಮೇಲಣ ಅಭಿಮಾನ ಸತ್‌ಪ್ರೀತಿ ಮುಕ್ತವಾಗಿತ್ತೆಂದು ತಿಳಿಯುತ್ತದೆ. ಆದರೆ ವಸ್ತು ಸ್ಥಿತಿಯನ್ನು ಗ್ರಹಿಸುವಾಗ ಈ 'ಅತಿಧನ್ಯತಾಭಾವ' ವಾಂಛಲ್ಯಗಳು ಆವೃತವಾಗಿಲ್ಲ, ಚಿಗರಿಗಂಗಳ ಚೆಲುವಿ, ಮೊದಲಗಿತ್ತಿ, ಕುರುಡು ಕಾಂಚಾಣ, ಪುಟ್ಟವಿಧವೆ... ಕವನಗಳಲ್ಲಿ ಪರಿಶೀಲಿಸಬಹುದು. 'ಬಾಣಂತಿ ಎಲುಬಿನ ಬಣ್ಣ ಬಿಳಿಚಿ ಸಾಬೂನಿನಂತಾಗಿರುವುದನ್ನು ಚಿತ್ರಿಸುವ ಕವಿ 'ಸಣ್ಣ ಕಂದಮ್ಮಗಳ ಕಣ್ಣಿನ ಕವಡಿಯ ದುಃಖವನ್ನೂ' ಅಷ್ಟೇ ಸಹಜವಾಗಿ, ಪ್ರತಿಕೂಲ ಪರಿಸ್ಥಿತಿಗೆ ತಕ್ಕ ಹಾಗೆ ಕಟ್ಟಿಕೊಡುತ್ತಾರೆ. ತೀ.ನಂ. ಶ್ರೀಯವರಿಂದ' ನಿಗಿ ನಿಗಿ ಕೆಂಡ'ವೆಂದು ಕರೆಸಿಕೊಂಡ ಪುಟ್ಟ ವಿಧವೆಯಲ್ಲಿ 'ಹತ್ತು ದಿವಸಕ್ಕೆ ಹಾಳು ಮುತ್ತೈದೆತನ ಹೋಗಿ ವೈಧವ್ಯ ಸಂಪತ್ತು ಪಡೆದಳಾಕೆ... ತಲೆಭಾರ ಇಳಿದಿತ್ತು ಅಂಗಾರ ಬೆಳೆದಿತ್ತು ಮೈಯನ್ನು ಮುಚ್ಚಿತ್ತು ಕೆಂಪು ಸೀರೆ, ಆದರಯ್ಯೋ ಪಾಪ, ಆಕೆಯಿನ್ನೂ ಮಗುವು ಸಿಂಗಾರವಿದೆ ಆ ಮಾತೆ ಬೇರೆ... ಎನ್ನುವಲ್ಲಿ 'ಅಯ್ಯೋ ಪಾಪ' ಹಾಗೂ ಮುಂದೆ ಬರುವ 'ನಿಟ್ಟುಸಿರ ಸರದಲಿ ಕಂಬನಿಯ ಪೋಣಿಸುತ' ರೂಪಕವಾಗಲಿ, ಹೆಣ್ಣನ್ನು ಗೌರವಭಾವದಿಂದ ನೋಡುವ ಭಾವುಕತನದ ಪರಿಣಾಮವಲ್ಲ, ಮೂಢ ಗೊಡ್ಡು ಸಮಾಜದ ಕುರುಡು ಆಚಾರಗಳಿಗೆ ಬಲಿಯಾದ ಪುಟ್ಟಹುಡುಗಿ, ಪುಟ್ಟವಿಧವೆಯೂ ಆದದ್ದರ ಮರ್ಮಭೇದಕ ಚಿತ್ರವದು.

ಜೊತೆಗೆ ಅಂಬಿಕಾತನಯದತ್ತರು ತಮ್ಮ ಸಾಮಾಜಿಕ ಕವಿತೆಗಳಲ್ಲಿ ಎಂದೂ ವೈಯಕ್ತಿಕ ಹತಾಶೆ ಸಿಟ್ಟು ಸೆಡವುಗಳನ್ನು ಕಲಸುವುದಿಲ್ಲ , ತಾನೂ ವ್ಯವಸ್ಥೆಯ ಒಂದು ಭಾಗವಾಗಿ, ಅದರ ನ್ಯೂನತೆಗಳನ್ನು ರಾಚಿಸುವ, ವಿರುದ್ಧ ಸಿಡಿದೇಳುವ ಬಂಡಾಯ ಪ್ರತಿಭಟನೆ ಇವರದ್ದು. ವ್ಯವಸ್ಥೆಯ ದುರ್ಲಾಭ ಪಡೆಯುವ ಸಮಾಜ ವಿದ್ರೋಹಿಗಳು, ಪಟ್ಟಭದ್ರ ಹಿತಾಸಕ್ತಿಗಳ ಮೇಲಿನ ರೋಷವೇ ಆದರೂ, ಕವಿಗೆಂದೂ ಭೂಮಿಯ ಮೇಲೆ ಸಿಟ್ಟಿಲ್ಲ, ಬದಲಾಗಿ ಚಿಮ್ಮುವಂತಹ ಪ್ರೀತಿಯಿದೆ. ಭೂಮಿತಾಯಿಯ ಚೊಚ್ಚಲಮಗ, ಮೊದಲಗಿತ್ತಿ, ಮನುವಿನ ಮಕ್ಕಳು... ಭಾವಸಂದರ್ಭಗಳಲ್ಲಿ ಇದು ಹೆಚ್ಚು ಸಾಬೀತಾಗಿದೆ. 'ಮನುವಿನ ಮಕ್ಕಳು' ಭಾವಸಂದರ್ಭದಲ್ಲಿಯಂತೂ ಬೇಂದ್ರೆಯವರು 'ಮನುಷ್ಯರ ಸುಖಕ್ಕೆ ಮನುಷ್ಯರೇ ಅಡ್ಡಾಗಿ ಬರುವಷ್ಟು ನಿಸರ್ಗ ಅಡ್ಡಬರುವುದಿಲ್ಲ, ಮನುಷ್ಯರ ದೌರ್ಬಲ್ಯವನ್ನು ನಿಸರ್ಗದ ಮೇಲೆ ಆರೋಪಿಸುವುದರಲ್ಲಿ ಯಾವ ಅರ್ಥವೂ ಇಲ್ಲ' ಜೀವನೇ ತನ್ನ ದಿವ್ಯತ್ವದಿಂದ ಪ್ರಕಟವಾಗುವವರೆಗೆ ಭ್ರಮಿಸುವ ನೆಲಕ್ಕೆ ಉಪ್ಪು ನೀರಿನ ಸೆರೆ ತಪ್ಪಿದ್ದಲ್ಲ'. ಎಂದಿರುವುದು ಭೂಮಿಯ ಗುಣದ ಜೊತೆಗೆ ಅದರ ವಾಸ್ತಕತೆ ಕವಿ ಪ್ರೀತಿಗೆ ಕಾರಣವಾದುದನ್ನೂ ತಿಳಿಸುತ್ತದೆ. ಭೂಮಿಯ ಅಂತಃಸತ್ವವನ್ನು ಅರಿಯಬೇಕಾದರೆ ನಮಗೆ ಬೇಕಿರುವುದು ಬರಿಗಣ್ಣಿನ ನೋಟವಲ್ಲ, ಆಳ ಅಗಲಗಳಿಗೆ ಅತೀತವಾದ ಒಳಗಣ್ಣಿನ ಶೋಧ ಎಂಬ ನಂಬಿಕೆಯ ಕವಿ, ಇದರಿಂದಲೇ 'ಇಳೆಯೆಂದರೆ ಬರಿ ಮಣ್ಣಲ್ಲ ನಮಗೂ ನೋಡುವ ಕಣ್ಣಿಲ್ಲ' ಎನ್ನುತ್ತಾರೆ. ಜೊತೆಗೆ ಕವಿಗೆ ಇಲ್ಲಿನ ನೆಲ, ಜಲ, ಮಣ್ಣೆಲ್ಲ

ಸಂಜೀವ, ಚೈತನ್ಯ ಶಕ್ತಿಯ ಜೀವದಾಯಿತ್ವದ ಸೆಲೆ.

'ನಭಕ್ಕೆ ಏರಿದೆ ನೆಲದಲ್ಲಿ ಆಸೆ

ನೆಲಕಿದ ಆರದ ಶುಷ್ಕ ಪಿಪಾಸೆ' ಎಂಬಲ್ಲಿ ನೆಲ ಜಡವಲ್ಲ, ಅದು ಜೀವಕಳೆಯಿರುವಂಥದ್ದು ಎಂಬ ಎರಡನೇ ಸಾಲು ಬಹುಮಟ್ಟಿಗೆ ಕವಿಧೋರಣೆಯನ್ನು ಸಾಧಿತಗೊಳಿಸುತ್ತದೆ. ಆದರೆ ಕವಿತೆಯೊಂದೇ ಜನಜೀವನದ ಸಾಮಾಜಿಕ ಅಗತ್ಯತೆಗಳನ್ನು ಪೂರೈಸಲು ಸಾಧ್ಯವಿಲ್ಲ ಎಂಬ ಸತ್ಯದರಿವಿದ್ದ ಬೇಂದ್ರೆ 'ಯಾರಿಗೆ ಬೇಕೈತಿ ನಿನ್ ಕವಿತಾ ಮೊದಲು ಬ್ರೆಡ್ಡು ತಾ ಅದರ ಮ್ಯಾಲೆ ಬೆಣ್ಣೆ ತಾ' ಎಂದಿದ್ದು. ಈ ಚಿಂತನೆ ದಾರ್ಶನಿಕರ 'Hungry stomach needs no philosophy' ತತ್ವ ಸಮೀಪ. ಈ ಕವಿಯ ಕಾವ್ಯಾನುಕ್ರಮಣಿಕೆಯ ಆಳ ಶೋಧನೆಗೆ ತೊಡಗಿದರೆ, ಯಾವುದೋ ಒಂದು ನಿಶ್ಚಿತ ಭಾವ ಕೇಂದ್ರದಿಂದ ಹೊರಡುವ ಕೆಲವು ಕವಿತೆಗಳು ಇದ್ದಕ್ಕಿದ್ದಂತೆ ಬದುಕಿನಲ್ಲಿ ಬೇಂದ್ರೆಯವರಿಗಾದ ನೋವು ಖೇದಗಳನ್ನೂ ಹೇಳುತ್ತವೆ. 'ಭಾವಗೀತ' ಕವನ ಇದಕ್ಕೊಂದು ಒಳ್ಳೆಯ ಉದಾಹರಣೆ. ಕವಿಯ ಕಾವ್ಯ ಸೃಷ್ಟಿಗೊಳ್ಳುವ ಪರಿಕರಗಳಾಗಿ ಬರುವ ಭೃಂಗ ಓಂಕಾರ ಶಂಖನಾದ ಕಲ್ಪನಾವಿಲಾಸಗಳ ರಮ್ಯಸ್ಥಿತಿ ಒಂದು ಹಂತದಲ್ಲಿ ತಟಕ್ಕನೆ ಭಾವದ ಬದಲಾವಣೆಗೊಳಪಟ್ಟಂತೆ ಭಾಸವಾಗುತ್ತದೆ. ತಮ್ಮ ಬದುಕಿನ ಒಡನಾಡಿಯಾಗಿದ್ದ ಗೆಳೆಯರ ಗುಂಪಿನ ವಿಘಟನೆಯ ನೋವನ್ನು ಅವರು ಹೀಗೆ

''ವಜ್ರಮುಖದ ಚಾಚಿ ಮುತ್ತುತ್ತಿತ್ತು ಹೂವಾಹೂವಾ

ನೀರ ಹೀರಿ ಹಾರುತ್ತಿತ್ತು ನೀರಸೂ ಜಾವಾ

ಅಯ್ಯೋ ನೋವೆ ಅಹಹ ಸಾವೇ ವಿಫಲ ಜೀವಾ....'' ಹಿಡಿದಿಡುತ್ತಾರೆ. ಆದರಿದು ಮತ್ತೆ ಕಾವ್ಯ ಹುಟ್ಟುವ ಹೂವು ದುಂಬಿ ಪರಾಗದ ಕುರಿತು ಸಹ ಹೇಳುತ್ತಿರುವಂತೆ ಅನ್ನಿಸುತ್ತದೆ. ಮೊದಲಿನ ಪ್ರಸನ್ನಭಾವದಿಂದ ಕರುಣ ರಸಕ್ಕೆ ಜಿಗಿಯುತ್ತದೆ. ಜೊತೆಗೆ ಎರಡೂ ಸಂಗತಿಗಳನ್ನು ಈ ಕವಿತೆ ಪ್ರಭಾವಪೂರ್ಣವಾಗಿ ಧ್ವನಿಸುತ್ತದೆ. ಹಾಗೆ ನೋಡಿದರೆ ಬೇಂದ್ರೆಯವರ ಕವಿತೆಗಳಲ್ಲಿ ಈ ಬಗೆಯ Shift ಆಗುವ ಕ್ರಮ ಮೂರು ಸ್ತರಗಳಲ್ಲಿ ಮುಖ್ಯವಾಗುತ್ತದೆ. 1. ಭಾಷೆ-ಅರ್ಥವಲಯಗಳ ದೃಷ್ಟಿಯಿಂದ 2. ಅನುಭವ-ಅನುಭಾವಗಳ ಪ್ರತ್ಯೇಕತೆಯ ದೃಷ್ಟಿಯಿಂದ 3. ಶಬ್ದನಾದಗಳ ದೃಷ್ಟಿಯಿಂದ. ಕವಿಯ 'ಬಿಸಿಲ್ಗುದುರೆ' ಕವನವೂ ಅಷ್ಟೆ ಹಳ್ಳದ ದಂಡ್ಯಾಗಿದ್ದ ಮಡದಿಯ ನಗು ಈಗ ಮಾಯವಾಗಿರುವ ಕಾರಣ ಹೇಳುವಾಗ ಅದು ತೀವ್ರವಾದ ರಭಸ ಹಾಗೂ ದಯನೀಯತೆಯಿಂದ ಮೊದಲ ಪದ್ಯಭಾಗದ ಲಾಲಿತ್ಯವನ್ನು ಕಳೆದು ನುಗ್ಗುವ ಭರದಲ್ಲಿ ಅನೂಹ್ಯ (Turns) ತಿರುವು ಪಡೆದುಕೊಂಡು ಹೀಗೆ **ಬಡತನದ ಬಲಿಯಾಗ ಕರುಳಿನ ಕೊಲಿಯಾಗ**

'ಬಾಳ್ವೆಯ ಒಲಿಮ್ಯಾಗ

ಸುಟ್ಟು ಹಪ್ಪಳದ್ಹಾಂಗ ಸೊರಗಿದಿ ಸೊಪ್ಪಾಂಗ

ಬಂತಂತ ಮುಪ್ಪು ಬ್ಯಾಗ' ನುಡಿಯುತ್ತದೆ. ತನ್ನ ಮಡದಿಯ ಮುಪ್ಪಿಗೆ ಬಡತನ ಆವರಿಸಿಕೊಂಡಿದ್ದೇ ಕಾರಣವೆಂದರೂ ಕವಿ ಆಶಾವಾದಿಯಾಗಿದ್ದವರು ಮನುಷ್ಯ ದೇವಜಾತಿಯಾಗುವ ನವೋದಯದ ಫಲಪ್ರದ ಆಶಯ ಭರವಸೆ ಹೊಂದಿದ್ದವರು. ಮುಖ್ಯವಾಗಿ ಬೇಂದ್ರೆಯವರದ್ದು ಬಿ.ಎಂ.ಶ್ರೀ ನೆರಳಲ್ಲಿ ಹುಟ್ಟಿ ಅರಳಿದ ನವೋದಯ ಸಂಪ್ರದಾಯವಲ್ಲ. ಆನುಷಂಗಿಕವಾಗಿ ಅದರ

ಪ್ರಭಾವಕ್ಕೆ ಸಿಕ್ಕಿದ್ದರೂ ಬೇಂದ್ರೆಯವರದ್ದು ಮೂಲತಃ ಕನ್ನಡದ ದೇಸಿ ಭಕ್ತಿಕಾವ್ಯ ಪರಂಪರೆಯಿಂದ ಅಂದರೆ ಲಕ್ಷ್ಮೀಶ, ನಾಗಚಂದ್ರ, ಪುರಂದರ, ಅಲ್ಲಮ, ರತ್ನಾಕರ, ಶರೀಫ, ಇವರಿಂದ ರೂಪುಗೊಂಡದ್ದು. 'ಗರಿ' ಯಲ್ಲಿಯೇ ಇದಕ್ಕೆ ಉತ್ತರವಿದೆ.

'ಭೋಗಯೋಗದ ಪದವೆ ; ಜೈನವಾಙ್ಮಯ ಮಧುವೆ
ಯೋಗಭೋಗದ ಹದವೆ ವಚನಬ್ರಹ್ಮನ ವಧುವೆ
ಮುದ್ದು ವಿಠಲಗೆ ಮಾರಿಕೊಂಡ ದಾಸಿ.
ಮುದ್ದಣನ ಲಲ್ಲೆವಾಕಿನ ಪ್ರೇಮರಾಶೀ'... ಎಂದು. ಇನ್ನು ಕಾವ್ಯಭಾಷೆಗೆ ಸಂಬಂಧಿಸಿದಂತೆ ಕವಿಯಲ್ಲಿ 'ಮಾತು' ಪ್ರಧಾನವಾಗಿ ಕಂಡು ಬಂದರೂ ಉದಾ : ಶುಭ ನುಡಿಯೆ ಶಕುನದ ಹಕ್ಕಿ ... 'ತೇಲಾಡುವಾಗ ಮನಸು ಮೇಲಾಡ ತಾವ ಕನಸು, ಬೆಳುದಿಂಗಳ ನೋಡ ಇದು ಅಂಬಿಕಾತನಯನ ಹಾಡ' ಹೀಗೆ. ಆದರೆ ಇವೆಲ್ಲವೂ ತಮ್ಮೊಟ್ಟಿಗೆ ಕಾವ್ಯವಾಗಿಯೂ ದುಡಿದು, ಮಿಳಿತಗೊಳ್ಳುವುದು ಮೈಸೂರು ಮಲ್ಲಿಗೆಯ ಕೆ.ಎಸ್.ನರಸಿಂಹಸ್ವಾಮಿಯವರನ್ನು ಬಿಟ್ಟರೆ, ಅಂಬಿಕಾತನಯದತ್ತರೊಬ್ಬರಲ್ಲೇ ಇದ್ದ ಗುಣ ಎಂದು ಧೈರ್ಯದಿಂದ ಹೇಳಬಹುದು. 'ಶಬ್ದ ಶ್ರುತಿಯಾದಾಗ ಮಾತು ಕೃತಿಯಾದೀತು' ಸಾರ್ಥಕಗೊಳ್ಳುವಲ್ಲಿ ಇದೂ ಒಂದಂಶ. 'ನಾದಾನ ನಾದಬೇಕು ನಾದಕ್ಕ ಪ್ರತಿನಾದ ಬೇಕು ನಾದಾನ ಆದಮ್ಯಾಲೆ ಬೇರೆ ಯಾಕ ವಾದ ಬೇಕು' ಎಂದ ಕವಿಗೆ ನಾದ ಕೇವಲ ಕ್ಷಣಿಕ ಆನಂದದ್ದಲ್ಲ, ಅದೊಂದು 'ಅಂತರಂಗ ಮೃದಂಗದ ತೋಂ ತನನ, ಭಾವ ಶೋಧ ಬಹಿರಂಗ ದರ್ಶನ. ಭಾವ-ಬದುಕುಗಳ ಶುದ್ಧೀಕರಣ'. 'ಚಿಂತಿ ಯಾರಿಗೆ ಬೇಕು! ತಂತಿ ತನನನ ಅಂದರ ದಿಕ್ಕಾಪಾಲಾಗಬೇಕು ಸುಖವಾಗಿ ಇರೋಣಾ ನಾವು ನೀವೂ ಸಾಕು'. ಎನ್ನುವ ಸಂಪನ್ನಗೊಂಡ ಅಕೃತ್ರಿಮ ಪ್ರಸನ್ನಸ್ಥಿತಿ. ಕೋಲ್‌ರಿಜ್‌ನ 'ನಾದಮಾಧುರ್ಯ' ಕುರಿತಾದ ನಿಲುವು ಈ ಕವಿಗೆ ಬಹಳ ಇಷ್ಟವಾದುದು. ತಮಗಿದ್ದ ಅಸಾಧಾರಣ ಭಾಷಾ ಚಮತ್ಕಾರಗುಣದಿಂದ ಬೇಂದ್ರೆ ಭಾಷೆಯನ್ನು ಅಗಾಧ ಪ್ರಮಾಣದಲ್ಲಿ ಹಿಗ್ಗಿಸಿಬಿಟ್ಟಿದ್ದರು. ನವ್ಯರು ಈ ಕವಿಯನ್ನು 'ವಾಗಾಡಂಬರದ' ಶಬ್ದ ಚಾಪಲ್ಯದ ಕವಿ ಎಂದು ಟೀಕಿಸಿದ್ದರು. ಈ ಕುರಿತು, ಡಾ|| ಜಿ.ಕೃಷ್ಣಪ್ಪನವರನ್ನು ನಾನು ಮುಖತಃ ಭೇಟಿ ಮಾಡಿ, ಪ್ರಶ್ನಿಸಿದಾಗ ಅವರು 'ನೋಡಿ ಬೇಂದ್ರೆಯವರು ಅನವಶ್ಯಕವಾಗಿ ಯಾವುದೇ ಪದಗಳನ್ನು ಬಳಸಿಲ್ಲ' ಭಾಷಾ ಕೌಶಲ್ಯತೆಯನ್ನು ಅವರು ಉದ್ದಕ್ಕೂ ಕಾಯ್ದುಕೊಂಡಿದ್ದಾರೆ ಎಂದರು. ಪ್ರಾಯಶಃ ಪದಗಳನ್ನು ಕುಣಿಸುವ ಕವಿಯ ಶಬ್ದಗಾರುಡಿತ್ವದಿಂದ ನವ್ಯ ಟೀಕೆ ಬಂದಿರಬಹುದು ? ಈ ಕವಿಯ ಕಾವ್ಯದ ಇನ್ನೊಂದು ಮಹತ್ವದ ಗುಣ. ಗೇಯತೆ ಮತ್ತು ಭಾವಗೀತಾತ್ಮಕತೆ. ಈ ಕಾರಣದಿಂದ ಜನರಿಗೆ ಇವರ ಕಾವ್ಯ ಬೇಗ ತಲುಪುತ್ತಲೂ ಇತ್ತು. ಸ್ವತಃ ಬೇಂದ್ರೆಯವರೇ ದಾಖಲಿಸಿರುವ ಸ್ವಾರಸ್ಯಕರ ಪ್ರಸಂಗವೊಂದು ಇಲ್ಲಿ ಉಲ್ಲೇಖನೀಯ.

ಒಮ್ಮೆ ಬೇಂದ್ರೆಯವರಿಗೆ ಹಾದಿಯಲ್ಲಿ ಅಡ್ಡಬಂದ ದನಗಾಹಿ ಹುಡುಗನೊಬ್ಬ, ಎಮ್ಮೆ ಮೇಲೆ ಕುಂತು 'ಹಳ್ಳದ ದಂಡ್ಯಾಗ.. ಮೊದಲಿಗೆ ಕಂಡಾಗ ಏನೊಂದು ನಗೀ ಇತ್ತ' ಎಂಬ ಕವಿಯ ಕವಿತೆ ಹಾಡುತ್ತಾ ಕವಿಗೇ ಎದುರಾದ. ಆಗ ಬೇಂದ್ರೆಯವರು ಆ ಹುಡುಗನಿಗೆ 'ಯಾರು ಕಲಿಸ್ಯಾರೋ ತಮ್ಮಾ ಈ ಹಾಡ ನಿನಗ ಅಂದರೆ ಅವನು 'ಯಾರೋ ಗೊತ್ತಿಲ್ರೀಪಾ ನಾ ಸಾಲೀ ಕಲ್ಲಿನ ಮುಂದೆ ಕೂತಿದ್ದಾಗ ಗೆಳ್ಯಾರು ಹಾಡಕ್ಕ ಹತ್ತಿದ್ರ್ರಿ' ಅಂದ ಅಷ್ಟಕ್ಕೇ ಬಿಡದೆ, ಬೇಂದ್ರೆಯವರು ಆ ಹುಡುಗನನ್ನು 'ಈ ಕವಿತಾ

ಯಾರು ಬರೆದದ್ದ ಅಂತ ಗೊತ್ತದ ನಿನಗ' ಅಂತ ಕೇಳಿದಾಗ ಆ ಹುಡುಗನು 'ಏ ಗೊತ್ತಿರಾಣಿಲ್ಲ ಬಿಡ್ರೀ' ಅಂತಂದಿದ್ದೇ ಮುಂದೆ ಹೊರಟೇ ಬಿಟ್ಟ. ಸ್ವತಃ ಕವಿಯೇ ಈ ಪ್ರಸಂಗವನ್ನು ನೆನೆದು, ನಿಜ, ನನ್ ಕಾವ್ಯ, ಪದಾ, ಕಲಾವಿದರಿಗಿಂತ ದನಾ ಕಾಯೋರು ಹಾಡೋದು ನನಗ ಹೆಚ್ಚಿನ ಖುಷಿ ತಂದೈತಿ' ಎಂದಿದ್ದರು. ಆದರೆ ಇದೇ ಬೇಂದ್ರೆ ಮುಂದೆ ಜನಸಾಮಾನ್ಯರಿಗೆ ತಲುಪುತ್ತಿದ್ದ ಸುಪರಿಚಿತ ಜಾಡಿನಿಂದ, ಸಂಪೂರ್ಣ ಭಿನ್ನವಾದ, ಜನರಿಗೆ ಬೇಗನೇ ಅರ್ಥವೇ ಆಗದಂಥ 'ನಾಕು ತಂತಿ' ಯಂತಹ ಕವನವನ್ನೂ ಬರೆದರು. ನಾದಲೀಲೆ, ಗರಿ, ಗಂಗಾವತರಣ ಸಖೀಗೀತದಂತಹ ಕವಿತೆಗಳ ಅಪೇಕ್ಷೆ ನಿರೀಕ್ಷೆಗಳ ಗುಂಗಿನಲ್ಲಿದ್ದ ಜನ ನಾಕುತಂತಿಯಿಂದ ನಿಬ್ಬೆರಗಾಗಿ 'ಅಯ್ಯೋ ಇದೂ ಒಂದು ಕಾವ್ಯವೇ ಅದೂ ಅಂಬಿಕಾತನಯ ದತ್ತರ ಕಾವ್ಯವೇ' ಎಂಬ ವಿಸ್ಮಯದ ಉದ್ಗಾರ ತೆಗೆದಿದ್ದರು.

ಕವಿಯ ಬಾಳಿನಲ್ಲಿ 'ಸಖಿ' ನಿರ್ವಹಿಸಿದ ಪಾತ್ರ ಸೆಲೆ, ಎರಡೂ ಅತ್ಯಂತ ಅರ್ಥವತ್ತಾದುದು. ಸಖಿ ಕೇವಲ ಕವಿಗೆ ಮಾತ್ರ ಸಖಿಯಲ್ಲ ಗಂಡು ಹೆಣ್ಣಿನ ನಿರಂತರ ಒಡನಾಟವನ್ನು ಸ್ನೇಹ ಸಾಂಗತ್ಯದಲ್ಲಿ ಕಂಡುಕೊಂಡಾಗ ಸಖ್ಯದ ನೆರಳಿನಲ್ಲಿ ಯಾರೇ ಆದರೂ ಸಖಿಯಾಗಬಲ್ಲಳು. ಕವಿ ಈ ಖಂಡ ಕಾವ್ಯದ ಆರಂಭದಲ್ಲಿಯೇ ಸಖೀ ನಮ್ಮ ಸಖ್ಯದ ಆಖ್ಯಾನ ಕಟು-ಮಧುರ ವ್ಯಾಖ್ಯಾನದೊಡಗೂಡಿ ವಿವರಿಸಲೆ ಕರುಳಿನ ತೊಡಕನು ಕುಸುರಾಗಿ ಬಿಡಿಸಿಟ್ಟು ತೊಡವಾಗಿ ತಿರುಗೊಮ್ಮೆ ನಾ ಧರಿಸಲೇ - ಎನ್ನುತ್ತಾ 'ಸಖ್ಯ' ಕೇವಲ ಮಧುರವಲ್ಲ, ಅದು ಕಟು-ಮಧುರ ಎಂದೂ ಮತ್ತೆ ತಮ್ಮದೇ ಜೀವನದ ಘೋಷವಾಕ್ಯದಂತಿರುವ 'ಸಪ್ಪೆ ಬಾಳುವೆಗಿಂತ ಉಪ್ಪು ನೀರೂ ಲೇಸು ಬಿಚ್ಚು ಸ್ಮೃತಿಗಳ ಹಾಯಿ ಬೀಸೋಣ ಬಾ' ಸಾಲುಗಳಲ್ಲಿ ಆಕೆ ಸಖಿಯೇ. ಆದರೆ ಕೇವಲ ಸಖಿತ್ವದಲ್ಲಿ ಮಾತ್ರ ಬಾಳನ್ನು ಇಡಿಯಾಗಿ ಕಂಡುಕೊಳ್ಳುವುದು ಸಾಧ್ಯವಿಲ್ಲದ್ದರಿಂದ ಮತ್ತು ಆಕೆ 'ಅಂತಃಪಟದಾಚೆ ವಿಧಿ ತಂದ ವಧುವೂ' ಆಗಿರುವುದರಿಂದ ಆಕೆ ಹೆಂಡತಿಯೂ ಹೌದು. ಅದು ಹೀಗೆ 'ಆಟದ ಕನ್ನಿಕೆ ಮಂಗಳ ಲಗ್ನಕೆ ಮಾಲೆಯ ನಿಕ್ಕುತ ಮಡದಿಯಾದೆ ನಾಟಿಸಿ ಕಣ್ಣೋಟ, ಸೋಕಿಸಿ ಕೈ ಬೆರಳು ಮರವಟ್ಟ ಮನ ಬನ ಚಿಗುರಿಸಿದೆ' ಅಭಿವ್ಯಕ್ತವಾಗಿದೆ. ಹೀಗಾಗಿ ಈ ಖಂಡಕಾವ್ಯದಲ್ಲಿ ಆಕೆ 'ಸಖಿ' 'ಹೆಂಡತಿ' ಎರಡೂ ಆಗಿರುವ ದ್ವಿಭಾವದ ಟಿಸಿಲೊಡೆತದ (Dichotomy) ಕ್ರಿಯೆ-ಪ್ರಕ್ರಿಯೆಗಳನ್ನಲ್ಲಿ ನೋಡಬಹುದು. ದೈಹಿಕವಾಗಿ ಗಂಡನೊಂದಿಗೆ ಬೆರೆತು ನಿಜ ಅರ್ಥದಲ್ಲಿ ಸುಖಿಯಿಂದಾಗದ, ಹೆಂಡತಿಗೆ ಮಾತ್ರವೇ ಸಾಧ್ಯವಾಗುವ ತೆರದಲ್ಲಿ 'ನೀನು ದೊಡ್ಡವಳಾದೆ, ಮೈಸಲಿಗೆ ಬೆಳೆಸಿದೆ, ಏಕಾಂತಕೆಳಸಿದೆ ಎಳೆಕೆಳದಿಯೇ ಏನು ಸಂಭ್ರಮವದು ಹರೆಯದ ಹಬ್ಬವು ಕನಸು-ಮನಸೂ ಹೆಣೆಹೆಣೆದು ಬೆಳೆದವೆ' ಈ ಸಾಲುಗಳು ಮೊದಲು ಹೆಂಡತಿಯಾಗಿ, ನಂತರ ಅದರೊಳಗಿನ ಸಖಿಯಾಗಿ ಗೆಳತಿಯಾಗಿರುವ ಸಾಹಚರ್ಯವನ್ನು ತಿಳಿಸುತ್ತವೆ. ಆಕೆ ಹೆಂಡತಿಯಾಗಿಯೂ, ಸಖಿಯಾಗಿಯೂ ಮುಂದುವರೆಯುತ್ತಾಳೆ. ಮನದನ್ನೆ ಸಖೀಗೀತದಲ್ಲಿ ಬಹುತೇಕ ಕವಿಯೇ ಪತಿಯಾಗಿ ಏಕಮುಖ ಸಂವಾದದಲ್ಲಿದ್ದರೂ, ಅಪರೂಪ ಕ್ಕೆಂಬಂತೆ ಸಖೀಗೀತದ ಸಖಿ 'ನಾನು ಬಡವಿ'ಯ ಬಡವಿಯಾಗಿ ಪತ್ನಿಯೂ ಸಂಭಾಷಣೆಯಲ್ಲಿ ಪಾಲ್ಗೊಳ್ಳುವುದನ್ನು ಕಾಣಬಹುದು. ಒಟ್ಟಿನಲ್ಲಿ ಸಖೀಗೀತವು ಹೆಂಡತಿ-ಸಖಿಯಾಗಿ ಕಾಣುವ, ಸಖಿ-ಹೆಂಡತಿಯಾಗುವ, ಇವೆರಡೂ ಒಮ್ಮೊಮ್ಮೆ ಬೇರೆ ಬೇರೆಯಾಗಿಯೂ ಕೆಲಸಲ ಒಂದೇ ಆಗಿಯೂ ಕಾಣುವ, ದಾಂಪತ್ಯ ಚೌಕಟ್ಟಿನಿಂದ, ವಿಶಿಷ್ಟ ಬಾಂಧವ್ಯದ. ಕೊನೆಯಿರದ ಅಂಟಿನ ನಂಟು. ಮುಂದೆ ಪತ್ನಿಯ ನಿಧನಾನಂತರ (1966) ಬೇಂದ್ರೆಯವರ ಕಾವ್ಯ ಕ್ರಮವೂ ಸಾಂಖ್ಯ ಅತಿಮಾನಸ ಪ್ರಜ್ಞೆಗೆ ಹೆಚ್ಚು

ಒಲಿದದ್ದನ್ನು ನೋಡಬಹುದು. ಕೇಶವದಾಸರ ಹೊರತಾಗಿ, ಅಷ್ಟೇ ವಿಶಿಷ್ಟವಾದ ಪ್ರಭಾವ ಬೀರಿದ ಇಬ್ಬರು ಚೇತನಗಳು ಮಧುರಚನ್ನ ಮತ್ತು ಅರವಿಂದರು.

ಕಾವ್ಯದಿಕ್ಕನ್ನು ಬೇರೆಡೆಗೆ ತಿರುಗಿಸಿದ ಎರಡು ರಸಪೂರ್ಣ ಪರ್ವಗಳಾಗಿ ಬೇಂದ್ರೆಯವರಿಗೆ ಮಧುರಚನ್ನ ಹಾಗೂ ಅರವಿಂದರ ಸುಪ್ರಮಾನಸದರ್ಶನ ಕೆಲಸ ಮಾಡಿದೆ. ಜೀವನದಲ್ಲಿ ಹೆಚ್ಚು ಬೆಂದು ಮಾಗಿದ ಮೇಲೆ ಗಾಢವಾಗಿ ಬೇಂದ್ರೆಯವರು ಅನುಭಾವದತ್ತ ಸುಳಿದರೆ, ಮೊದಲಿನಿಂದಲೂ ಪ್ರಧಾನವಾಗಿ ಆಧ್ಯಾತ್ಮಿಕ ಆಸ್ಥೆ ಹೊಂದಿದ್ದರು ಮಧುರಚನ್ನ . ಒಬ್ಬರದ್ದು ಸಾಧನೆಯ ಹಾದಿಯಾದರೆ, ಮತ್ತೊಬ್ಬರದ್ದು ಅಧ್ಯಯನದ ಹಾದಿ. ಹೀಗಾಗಿ ಎಲ್ಲೋ ಒಂದು ಕಡೆ ಮಧುರಚನ್ನರ ಅನುಭಾವಿಕ ವಚನಗಳ ಸತ್ವ ಹಿರಿದೆನ್ನಿಸುತ್ತದೆ. (ಅಂಬಿಕಾತನಯದತ್ತರ ಜೋಗಿಯಂತಹ ಒಂದೆರಡು ಅಪವಾದಗಳನ್ನು ಹೊರತುಪಡಿಸಿ) ಪರಸ್ಪರ ಗಳಸ್ಯ ಕಂಠಸ್ಯವನ್ನೂ ಮೀರಿದ ಬಾಂಧವ್ಯ ಹೊಂದಿದ್ದ ಇವರಿಬ್ಬರು ಜೊತೆಯಲ್ಲಿಯೇ ಇದ್ದರೂ ಮನೋಧರ್ಮದಲ್ಲಿ ಸಾಕಷ್ಟು ಭಿನ್ನತೆ ಅಂತರಗಳನ್ನು ಹೊಂದಿದ್ದರೆನ್ನುವುದಕ್ಕೆ ಅಂಬಿಕಾತನಯದತ್ತರ 'ಚನ್ನ' (ನಾದಲೀಲೆ) ಕವಿತೆಯೇ ಸ್ಪಷ್ಟ ಸಾಕ್ಷಿ.

'ಅಲ್ಲಿ ಕವಿ ನನ್ನ ನಿನ್ನ ಬೆನ್ನ ಬಳಿ
ವಿಶಾಲ ವಕ್ಷ ಬೆಳೆದಿದೆ
ಮುಗಿಲ ತುಂಬಿ ಉಳಿದಿದೆ
ಗಾಳಿಯಂತೆ ಸುಳಿದಿದೆ
ನನ್ನ ನಿನ್ನ ನೋಟ ಮಾತ್ರ ಎರಡು ದಿಕ್ಕಿಗೆಳೆದಿದೆ.
ಬೇರೆ ಹಾದಿ ತುಳಿದಿದೆ.' ಹೀಗೆ ಹೇಳಿ ಆ ಸಂಬಂಧ ವಿಶ್ವಾಸಮಯ ವಾದದ್ದು ಅಭಿಪ್ರಾಯಗಳು ವಿಭಿನ್ನವಾದವು ಎಂಬುದನ್ನು ಸೂಕ್ತವಾಗಿ ಮನಗಾಣಿಸಿದ್ದಾರೆ.

ಇನ್ನು ಅರವಿಂದರ ಅತಿಮಾನಸಪ್ರಜ್ಞೆ ಅಥವಾ ಸುಪ್ರಮಾನಸದರ್ಶನ. ಇದು ಅಂಬಿಕಾತನ ಯದತ್ತರ ಚತುರ್ಮುಖ ದರ್ಶನವೂ ಆಗಿ ಪರಿಣಮಿಸಿದೆ. ಕವಿಯ ದರ್ಶನ ಇಲ್ಲಿ ನಾಲ್ಕು ರೂಪದಲ್ಲಿದೆ. 1. ವ್ಯಾವಹಾರಿಕ ಬೇಂದ್ರೆ 2. ಸಮೀಕ್ಷಕ ಬೇಂದ್ರೆ 3. ಕವಿ ಬೇಂದ್ರೆ, ಅಂಬಿಕಾತನಯದತ್ತ 4. ಸಾಕ್ಷಿ-ಬೇಂದ್ರೆ, ವೈದಿಕ ಪರಂಪರೆಯ ಹಿನ್ನಲೆಯಲ್ಲಿ ಭೂಮಿಯನ್ನು ಸತ್-ಚಿತ್ ನೆಲೆಯಲ್ಲಿ ಗುರ್ತಿಸಿದ ಕವಿ ತಮ್ಮ ಕವಿತೆಗಳಲ್ಲಿ ಸೂರ್ಯ ಚಂದ್ರರಿಗೊಂದು ವಿಶಿಷ್ಟ ನೆಲೆ ಬೆಲೆ ಕಲ್ಪಿಸಿಕೊಟ್ಟಿದ್ದೂ ಇದೇ ದೃಷ್ಟಿಕೋನದಿಂದ ಸೂರ್ಯ ಅಗ್ನಿಯಾದರೆ, ಚಂದ್ರ ಸೋಮನಾಗುತ್ತಾನೆ. ಕವಿ ಅವರೆಡನ್ನೂ ತಮ್ಮ ಕವಿಭಾವ ಪ್ರಪಂಚದಲ್ಲಿ ಹಿಡಿದಿರುವುದು "**ಅಗ್ನಿ (ಸೂರ್ಯ) ಸೋಮಾ (ಚಂದ್ರ) ಲಿಂಗನದೊಳಗು**
ಚಾತುರ್ಯದ ಬುಧಾ
ಪ್ರಪಂಚ ಛಂದಾ
ಷಣ್ಮುಖದಂದು" ಹೀಗೆ. ಅರವಿಂದರ ಪ್ರಭಾವದಿಂದ ಅಂಬಿಕಾತನಯ ದತ್ತರ ಅಂತರ್ವಾಣಿ ಅಜ್ಞಾನ-ಜ್ಞಾನಗಳ ನೆಲೆಯನ್ನು ಹೀಗೆ ಸೂತ್ರೀಕರಿಸುತ್ತದೆ.

'ತಿಳಿದುದ ಅಂಬೋದು ಅಜ್ಞಾನದ ಸಂದಿ
ತಿಳಿತಾ ಅದ ಅಂಬೋದು ಜ್ಞಾನದ ಹಾದಿ-ಅಂತರ್ವಾಣಿ. ಇನ್ನೊಂದು ಅಂಶವೆಂದರೆ ತಾವು ಕಂಡ ಲೋಕ ಸತ್ಯವನ್ನು ಕಾವ್ಯನುಭವದ ಸತ್ಯವಾಗಿ ಪರಿವರ್ತಿಸುವ ಕವಿಯ

ಕಲಾಕೌಶಲ. ತಾವು ತಮ್ಮ ಬಾಲ್ಯದಲ್ಲಿ ಕಂಡ ಅನುಭವಗಳನ್ನೆಲ್ಲ ಸಾಂದ್ರವಾಗಿ ಕವಿ ನೆನಪಿನ ಸುರುಳಿ ಬಿಚ್ಚುತ್ತಾ ಕಾವ್ಯಸ್ವಾದವಾಗುವಂತೆ ವಯಸ್ಸಾದ ಮೇಲೆ ಅದನ್ನು ಕಣ್ಮುಂದೆ ತಂದುಕೊಂಡು ರಚಿಸಿರುವ ಸಣ್ಣಸೋಮವಾರ ಕವಿತೆಯಲ್ಲಿ ಈ ಅಂಶಗಳೆಲ್ಲವೂ ಸರ್ವವಿದಿತ ಹಾಗೂ ಸೂರ್ಯ ಸ್ಪಷ್ಟ. ನವೋದಯ-ನವ್ಯ ಪ್ರತಿನಿಧಿಗಳಾಗಿ ಬೇಂದ್ರೆ-ಅಡಿಗರ ನಡುವಿನ ಸೃಜನಶೀಲ ಸಂವಹನ ಸಂಘರ್ಷ ಸ್ವಾರಸ್ಯಕರವಾದದ್ದು. ಮೊದಲು ನವೋದಯದಲ್ಲಿದ್ದು ಅನಂತರ ನವ್ಯ ಶೈಲಿಯನ್ನು ಅನಿವಾರ್ಯವಾಗಿ ಅಡಿಗರು ರೂಪಿಸಿಕೊಂಡರೆ, ಬೇಂದ್ರೆಯವರು ನವೋದಯದಲ್ಲಿದ್ದುಕೊಂಡೇ ನವ್ಯದ ಲಕ್ಷಣಗಳನ್ನು ಬಿಂಬಿಸಿದವರು. ಗೋಪಾಲಕೃಷ್ಣ ಅಡಿಗರ ನವ್ಯ ಕೇಂದ್ರಿತ ಕವಿತೆಯನ್ನು ಬೇಂದ್ರೆ ವಿರೋಧಿಸುವುದೂ ಅಡಿಗರ ಮಾತುಗಳಲ್ಲೇ

'ಸಾಕು ಬಿಡು ನಿನ್ನ ಭತ್ಯಾ
ಗುಡು ಗುಡು ಮುತ್ಯಾ
ಭಾವರಾಹಿತ್ಯ
ಸಚ್ಚಿದಾನಂದದಾ ಬಿಂದು ಬಿಂದುವು ಸಿಂಧು
ಎಂದು ಎಂದು ಎಂದೂ' ಹೀಗಿದ್ದರೆ, ಅಡಿಗರು ಬೇಂದ್ರೆಯವರ 'ನಾ ತೊಟ್ಟ ಹೆಣಗಳ ಲೆಕ್ಕ' ಎಂಬುದನ್ನು 'ನಾ ಸುಟ್ಟ ಸಿಗರೇಟುಗಳ ಲೆಕ್ಕ' ಎನ್ನುತ್ತಾರೆ. ಇದು ಸ್ವಲ್ಪ ವಿಚಿತ್ರವೂ ಹೌದು. ನವೋದಯವನು ಧಿಕ್ಕರಿಸಿ, ನವ್ಯ ಹರಿಕಾರರಾಗಿ ಅಡಿಗರು ಅದರ ವಿಚಾರಗಳಿಗೆ ಭದ್ರವಾಗಿ ಅಂಟಿಕೊಂಡರೆ, ಬೇಂದ್ರೆಯವರು ನವ್ಯವನ್ನು ತಿರಸ್ಕರಿಸಿಯೂ, ಆ ಗುಣಾಂಶಗಳನ್ನು ತಮ್ಮ ಕವಿತೆಗಳಲ್ಲಿ ಭೇದವಿಲ್ಲದೇ ಸಾಧಿಸಿ ಬಿಟ್ಟಿದ್ದರು. ಇದು ವಿಚಿತ್ರವೇ ಅಲ್ಲವೆ! ಬಹುಶಃ ಈ ಕಾರಣಕ್ಕಾಗಿಯೇ ಬೇಂದ್ರೆಯವರು ಇತರ ನವೋದಯ ಕವಿಗಳು ನವ್ಯರ ಟೀಕೆ ಆಕ್ಷೇಪಣೆಗಳಿಗೆ ಸಿಕ್ಕಿದಷ್ಟು ಸಿಲುಕುವುದಿಲ್ಲ. ಬಹಳ ಪ್ರಮುಖವಾಗಿ, ರಮ್ಯತೆ, ಆದರ್ಶ, ಕಲ್ಪನೆಗಳನ್ನೇ ನಿರಾಕರಿಸುವ ನವ್ಯರಿಗೆ ಬೇಂದ್ರೆಯವರು, ಬದುಕಿನಲ್ಲಿ ಸುಂದರ, ಭಾವನಾತ್ಮಕ ಕಲ್ಪನೆಗಳಲ್ಲದೆ ಏನಾದರೂ ಕಂಡುಕೊಳ್ಳಲು ಸಾಧ್ಯವೇ ? ಎಂಬ ಸವಾಲೊಡ್ಡುವ ಪ್ರಶ್ನೆ ಇಂದು ನಾವು ನವ್ಯರತ್ತ ಬೊಟ್ಟು ಮಾಡಿ ತೋರಿಸುವ ಮುಖ್ಯ ಪ್ರಶ್ನೆಯೂ ಆಗಿರುವುದು ಬಹಳ ಮೌಲ್ಯವುಳ್ಳದ್ದು.

ಆದರೆ ಇಂಥ ಶ್ರೇಷ್ಠ ಕವಿಗೂ ತಪ್ಪು ಓದಿನಿಂದ (Miss reading) ಅತಿ ಹೊಗಳಿಕೆ ಇಲ್ಲವೇ ವಿಪರೀತ ತೆಗಳಿಕೆಗಳಿಂದ ಅನ್ಯಾಯವಾಗಿರುವುದುಂಟು. ಉದಾ : ಗಂಗಾವತರಣ ಪದ್ಯ. ಅಲ್ಲಿ ಬೇಂದ್ರೆಯವರು 'ಋಷಿಯ ತೊಡೆ' ಎನ್ನುವುದನ್ನು ಕೇವಲ ಪ್ರಾಸಕ್ಕಾಗಿ ತಂದಿದ್ದಾರೆ ಎನ್ನುವ ವಿಮರ್ಶಕರು 'ಗಂಗೆ ಹರನ ಜಡೆಯಿಂದಿಳಿದು, ಋಷಿಯ ತೊಡೆಯಿಂದ ಬರುವ ಪರಿಕಲ್ಪನೆ' ಜಹ್ನು ಋಷಿಯ ತೊಡೆಯಿಂದಿಳಿದು ಬಂದು ಜಾಹ್ನವಿಯಾದ' ಕಥೆ ಹೇಳುವುದನ್ನು ಮರೆತಿದ್ದಾರೆ! ಬೇಂದ್ರೆಯಂತಹ ಶಬ್ದ ಬ್ರಹ್ಮರಿಗೆ ಪ್ರಾಸ ತಂದು ತುಂಬಬೇಕಾದ ಅನಿವಾರ್ಯತೆಯಾಗಲಿ, ಪ್ರಾಸದಾರಿದ್ರ್ಯವಾಗಲಿ ಭಾಷಾಕೊರತೆಯಾಗಲಿ ಇರದೆ, ಆ ಸಂಪತ್ತು ವಿಪುಲವಾಗಿರುವುದನ್ನು ವಿಮರ್ಶಕರು ಮೊದಲು ಗಮನಿಸಬೇಕು . ಬೇಂದ್ರೆಯವರ ಸಮರ್ಥ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು ಪದ ಲೋಪದಿಂದ ಕವನದ ತಪ್ಪು ಗ್ರಹಿಕೆಗೆ ಹಾಗೂ ಬೇಂದ್ರೆಯವರ ಕಾವ್ಯದ ಮಾನದಂಡದೊಂದಿಗೇ ಇತರ ಕವಿಗಳ ವಿಮರ್ಶೆಗೂ ತೊಡಗುವುದು ದೋಷ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಕವಿಯನ್ನು 'ದೇಸಿಶೈಲಿಯ ಬಾಣಸಿಗ' ಎಂದು ಗುರುತಿಸಲು ಕಾರಣವಾದ 'ಹುಬ್ಬಳ್ಳಿಯಂವ' ಕವಿತೆಯೂ ಅಷ್ಟೆ. ಈ ಕವಿತೆಯ ನಾಯಕ 'ಸೆಟ್ಟರ ಹುಡುಗ' ಭಾರಿಜರದಾ ವಾರಿ ರುಮ್ಮಾಲು ಸುತ್ತಿ ತುಂಬು ಮೀಸೆ ತೀಡಿಕೋತ ಹುಬ್ಬು ಹಾರಿಸಿ ಬರುವ ಲಂಪಟ ಎಂಬ ಪಟ್ಟಾಭಿರಾಮ ಸೋಮ ಯಾಜಿಯವರ ವಿಮರ್ಶೆ ಸತ್ಯ ದೂರ. ಇಲ್ಲಿರುವುದು ವಿಟ ಸೂಳೆಯ ನಡುವಿನ ಸಂಗತಿಯಾದರೂ ಯಾವುದೇ ಗತಿ ಚಲನೆಯಲ್ಲಿ ಅತಿಶೃಂಗಾರದಿಂದ ಎಲ್ಲೆ ಮೀರಿ ಅಸಹ್ಯವಾಗಬಹುದಿದ್ದ ಕವನದಲ್ಲಿ ಅಂತಹದ್ದಾವುದಕ್ಕೂ ಅವಕಾಶವೀಯದೆ, ಇವರಿಬ್ಬರ ನಡುವೆಯೂ ಮಧುರ ಬಾಂಧವ್ಯ ಏರ್ಪಡಲು ಸಾಧ್ಯವಿದೆ ಎಂಬುದನ್ನು ಸಾಧಿಸಲು ಕವಿ ಉದ್ದೇಶಿಸಿದಂತಿದೆ. ಜೊತೆಗೆ ಕವಿಯ 'ಭಾವಸಂದರ್ಭ ಸೂಚಿ' ನೋಡಿದ ಮೇಲಷ್ಟೆ , ಇದು ಸೂಳೆಯೊಬ್ಬಳು ಹಾಡುವ ಹಾಡೇ ಎಂದು ಉದ್ಗಾರ ತೆಗೆಯುವಷ್ಟರ ಮಟ್ಟಿಗೆ, ಹುಬ್ಬಳ್ಳಿಯಾಂವ ತನ್ನ ಶೌಚವನ್ನು ಕಾಯ್ದುಕೊಂಡಿದೆ. ಇಲ್ಲಿನ ಸೆಟ್ಟರ ಹುಡುಗ, ಪಟ್ಟಾಭಿರಾಮ ಸೋಮಯಾಜಿಯವರು ಗ್ರಹಿಸಿದಂತೆ ಲಂಪಟನೋ ಮೋಸಗಾರನೋ ಅಲ್ಲ, ಬದಲಿಗೆ ಆತ ಸೂಳೆಗೆ ವೀಳ್ಯದೆಲೆ ಮಡಿಚಿ ಮಡಿಚಿ ಕೊಡುವವ, ಜಲ್ಮಜಲ್ಮಕ ಗೆಣ್ಯಾ ಆಗಿ ಬರುತ್ತೇನೆ ಎನ್ನುವ ರಸಿಕತೆಯ ಹುಡುಗ. ಎದಿ ಮ್ಯಾಗಿನ ಗೆಣತೀನ ಮಾಡಿ ಇಟ್ಟುಕೊಂಡಾವ, ಬಾಹಿರ ಸಂಬಂಧದಲ್ಲಿ ಇಟ್ಟು ಕೊಂಡಾವ ಎಂಬುದು ವಿಟ-ಸೂಳೆಯ ಸಂಬಂಧವನ್ನು ನಿರ್ದೇಶಿಸುವ ಪದವಾದರೂ, ಇನ್ನೊಂದರ್ಥದಲ್ಲಿ , ಇದು ಅವಳನ್ನು ಎದೆಯಲ್ಲೇ ಪ್ರತಿಷ್ಠಾಪಿಸಿಕೊಂಡ ಹೃದಯ ದಾಳದಲ್ಲಿ ನೆಲೆಯೂರಿಸಿಕೊಂಡವ ಎಂಬುದನ್ನೂ ಹೇಳುವ ಮಾತು. ಈಕೆಗೆ ಆ ಸೆಟ್ಟರ ಹುಡುಗ ಕಣ್ಣಿನ್ಯಾಗಿನ ಗೊಂಬಿ ಹಾಂಗ ಎದ್ಯಾಗ ನಟ್ಟಾಂವ . ಅಂದರೆ ಕಣ್ಣಿನ ಕಪ್ಪುಗುಡ್ಡೆ (ಪಾಪೆ) ಯಂತೆ ಹೃದಯದಲ್ಲಿ ಬೇರೂರಿದವ. ಇದು ಶ್ಲೇಷೆಯನ್ನು ಅಂಬಿಕಾತನಯದತ್ತರು ಹೇಳುವ ಅದ್ಭುತ ಶೈಲಿ. ಹೀಗಾಗಿ, ಇಲ್ಲಿನದ್ದು ಅಪವಿತ್ರ, ಲಂಪಟತನದ ಸಂಬಂಧವಲ್ಲ, ಬದಲಿಗೆ, ನಮ್ಮ ನವುರು ಭಾವನೆಗಳಿಗೆ ಭಾರತೀಯ ಆವರಣದಲ್ಲಿ ಸ್ಪರ್ಶಕ್ಕೆ ಇರುವ ಮಹತ್ವ, ಪುಳಕಗಳನ್ನು ಸಾರಪೂರ್ಣವಾಗಿ ಹಿಡಿದಿಡುವ ಗಂಭೀರವೂ ಮಹತ್ತರವೂ ಆದ ಕವನ.

ಕವಿ ಬೇಂದ್ರೆಯವರೇ ಹೇಳುವಂತೆ 'ನನ್ನ ಕವಿತಾದಾಗ Architectural development' ಇರ್ತದ ಯಾರಿಗ ಇದ ತಿಳಿಯೋದಿಲ್ಲ, ಅವರಿಗೆ ನನ್ನ ಕವಿತಾನೂ ತಿಳಿಯೋದಿಲ್ಲ ಎಂಬ ಮಾತುಗಳು ಬೇಂದ್ರೆ ಕಾವ್ಯ ವಿಮರ್ಶೆಗೆ ತೊಡಗುವ ಮುನ್ನ ಇರಬೇಕಾದ ಎಚ್ಚರಿಕೆ. ಕವಿಯ ಕವಿತೆಗಳು ಅವರಿಗೇ ಹೇಳಿರುವ ಹಾಗೆ 'ಆಕಾರದಲ್ಲಿ ವಾಮನ ಅರ್ಥದಲ್ಲಿ ತ್ರಿವಿಕ್ರಮ'. ಈ ಅರ್ಥದಲ್ಲಿ ಸಾವಿರದ ಕವಿ, ಈ ವರಕವಿ, ಅಂತೆಯೇ ಸಾವಿರಕ್ಕೊಮ್ಮೆ ಸಿಗುವ ಸಹೃದಯರೂ ಸಾವಿಲ್ಲದೆ ಓದಿ ತಿಳಿಯಬೇಕಾದ ಸಾವಿರದ 'ವರ' ಕವಿ.


ಆಕರ ಗ್ರಂಥಗಳು

* **ಶ್ರೀ ಬೇಂದ್ರೆ ಕಾವ್ಯಮೀಮಾಂಸೆ** - ಶಂಕರ ಮೊಕಾಶಿ ಪುಣೇಕರ್
* **ಹಾಡ ಹಾದಿಯ ತೋರಿತು** - ಡಾ || ಎಚ್.ಎಸ್. ರಾಘವೇಂದ್ರರಾವ್,
* **ದ.ರಾ.ಬೇಂದ್ರೆ ಜೀವನ** - ಕೀರ್ತಿನಾಥ ಕುರ್ತಕೋಟಿ
* ಕೆಲ ಸ್ವಾರಸ್ಯಕರ ಪ್ರಸಂಗಗಳನ್ನು (ಬೇಂದ್ರೆ ವಿಷಯಕ್ಕೆ ಸಂಬಂಧಪಟ್ಟಂತೆ)
ನನ್ನ ತಾತ ದಿ || ಜಿ.ಆರ್.ಶಂಕರರಾಯರಿಂದ ಕೇಳಿ ತಿಳಿದು ಇಲ್ಲಿ ಉಪಯೋಗಿಸಿಕೊಂಡಿದ್ದೇನೆ.

ಭಾಷೆ ಹಾಳಾಗುತ್ತಿರುವ ಈ ಸಮಯದಲ್ಲಿ

- ಹಿಂದಿ ಮೂಲ : ಕುಂವರ್ ನಾರಾಯಣ್

- ಅನುವಾದ : ಸಿ.ವಿ. ಶೇಷಾದ್ರಿ



ಪ್ಲಾಸ್ಟಿಕ್ ಮರ
ನಾಯಿಲಾನ್ ಹೂ
ರಬ್ಬರ್ ಹಕ್ಕಿಗಳು

ಟೇಪಿನಲ್ಲಿ
ಮರೆತು ಹೋದ
ಜಾನಪದದ
ದುಃಖದ ಸಾಲುಗಳು

ಮರವೊಂದೇನಾದರೂ ಒಣಗಿದರೆ
ಎಲ್ಲಕ್ಕಿಂತ ಮೊದಲು ಒಣಗುವುದು
ಆದರ ಮೃದು ಭಾಗವಾದ ಹೂವು, ಎಲೆಗಳು

ಒಂದು ಭಾಷೆ ಒಣಗಿದರೆ
ತಮ್ಮ ಕವಿತ್ವ, ಭಾವನೆಗಳ ಹೊಸತನ ,
ವಿಚಾರಗಳ ಸತ್ಯತೆಗಳನ್ನು
ಕಳೆದುಕೊಳ್ಳುತ್ತವೆ ಶಬ್ದಗಳು
ಜನರ ನಡುವೆ ಎದ್ದೇಳುತ್ತವೆ
ಅಪರಿಚಿತ ಪಾಳು ಜಾಗಗಳು, ಕಂದಕಗಳು

ಯಾವುದು ಎಲ್ಲರೆಡೆಗೆ ನೋಡುತ್ತಿರುವುದೋ
ಅದರೆಡೆಗೆ ಎಲ್ಲರನ್ನು ಸೆಳೆಯುವುದು ಹೇಗೆಂಬ
ಯೋಚನೆಯಲ್ಲಿದ್ದೇನೆ ನಾನು.
ಭಾಷೆ ಹಾಳಾಗುತ್ತಿರುವ ಈ ಸಮಯದಲ್ಲಿ
ಒಂದುವೇಳೆ ಬೆಂಕಿ ಬಿದ್ದರೆ
ತಮ್ಮ ನೆಲದಿಂದ ರಸ ಹೀರುತ್ತಿದ್ದ
ಎಲೆಗಳನ್ನು ಉದುರಿಸಿಕೊಂಡ
ಕೊಂಬೆಗಳಿಗೆ ಮೊದಲು ಬೀಳುತ್ತದೆಂಬ
ಯೋಚನೆಯಲ್ಲಿದ್ದೇನೆ ನಾನು

ಕಾಮ ರೂಪಿ

- ಡಾ|| ಹೆಚ್. ಎಸ್. ವೆಂಕಟೇಶ ಮೂರ್ತಿ

ವೈದೇಹಿಯ ಅಮೃತವಕ್ಷ ಕುಕ್ಕುತ್ತಿದೆ ಕುಕ್ಕುತ್ತಿದೆ
ಶ್ರೀ ರಾಮನ ಕಣ್ಣೆದುರೇ ಉದ್ದಟ ಕಾಗೆ
ನೀರ್ತುಳುಕುವ ಕಣ್ಣಿನಲ್ಲಿ ನೀಲಾಂಗನ ನಿಟ್ಟಿಸಿದಳು
ಸೀತೆ ಮಿಂಚು ಥಾಳಾರಿಸುವ ಮೋಡದ ಹಾಗೆ.

ಎಂಥಾ ದಡ್ಡಿಯೆ ನೀನು ! ಕಾಗೆಯೇನು ಕೋಗಿಲೆಯೇ ?
ಚಾಚು ರೆಂಬೆಯಲ್ಲಿ ಕುಹೂ ಕೂಗುವುದಕ್ಕೆ ?
ಕಾಗೆಗೆ ಕುಕ್ಕೋದೆ ಕಸುಬು. ಪಿಂಡವಷ್ಟೆ ಪುರುಷಾರ್ಥ
ಹಣ್ಣು ಹುಣ್ಣು ಎರಡೂ ಒಂದೆ ಅದಕ್ಕೇ.

ಖುಲ್ಲರಿಗೋಳ್ಳೆಯ ಮಾತೆ ? ಕಗ್ಗಲ್ಲಿಗೆ ಕಣ್ಣೀರೆ ?
ಬೆಣಚುಕಲ್ಲ ಬೀಸುಗವಣೆ ಏಟೇ ಪಾಠ
ಗುಬ್ಬಿ ಮೇಲೆ ಬ್ರಹ್ಮಾಸ್ತ್ರವ ಬಿಡಬಾರದು ಬಲ್ಲೆ ನಾನು
ಸಾಕು ಬೇಲಿಯಿಂದ ಕಿತ್ತ ಸಿಬಿರಿನ ಗೂಟ

ತೊಲಗು ತೊಲಗು ಕಾಕಾಸುರ ! ಒಕ್ಕಣ್ಣಿನ ವಕ್ರಾಂಗ !
ಹೋಗು ಹೊಲಸಿನಲ್ಲಿ ಮುಸುಡ ಅದ್ದುವುದಕ್ಕೆ
ಮಳ ಮಳ ಮಳ ಕಡಲಿನಲ್ಲಿ ಮುಳುಗಬಯಸಿ ಬೇಯ ಬೇಡ
ಮಾಂಸದ ತುಂಡಲ್ಲ ಕೆಂಡ ಕುಕ್ಕುವುದಕ್ಕೆ

ಕ್ರಾ ಕ್ರಾ ಆಕ್ರಂದನ ಚಂದ ತಿಪ್ಪೆಯೊಪ್ಪಾರಕೆ
ಚೈತ್ರ ರಥದ ಮೆರವಣಿಗದು ಸಲ್ಲದ ಮೇಳ
ನಮ್ಮ ನಮ್ಮ ಪರಿಯಲ್ಲಿ ನಮ್ಮ ನಮ್ಮ ಪಥ ಭ್ರಮಣ
ಆಳವನರಿತು ಬಾಳಬೇಕು ನಮ್ಮದೆ ಬಾಳ.

ಹೇಳಿ ಕೇಳಿ ಕಾಮರೂಪಿ ಸಾರಸ ಕೋಗಿಲೆಯಾಗದೆ
ಕಾಕಾಸುರನಾದುದೇಕೆ ನೀನೆ ಹೇಳು
ಇಚ್ಛೆಯಂತೆ ಇಷ್ಟ ರೂಪ ಈಗ ವೃಥಾ ಅರ್‍ತಾರವ
ಯಾರ ದಾರಿಗುಂಟು ಯಾರ ಹೆಜ್ಜೆಯ ಸಾಲು

ಮೂಡಬಹುದು ರೆಕ್ಕೆ ಬೆಟ್ಟದಂತೆ ಬಿದ್ದ ಸಂಪಾತಿಗೆ
ಮುಚ್ಚಿಕೊಂಡು ಕಾಯಬೇಕು ಹೊರಗಿನ ಕಣ್ಣು
ಶುಭಂ ಅಸ್ತು ಎಂದು ಮುಗಿಲು ಚೆಲ್ಲಬಹುದು ಎರಡು ಹನಿ
ಕಲಿಯಬೇಕು ಬೊಗಸೆಯೊಡ್ಡಿ ನಿಲ್ಲುವುದನ್ನು.

ಅಗ್ನಿಯಾಗಬೇಕು ಕಿಚ್ಚು ಸ್ಫುರಿತಾಗ್ನಿಗೆ ಕಿರಣದ ಗರಿ
ಗರಿ ಗರಿಗೊಂದೊಂದು ಬಿಚ್ಚುಗಣ್ಣಿನಚ್ಚರಿ
ಕಿರಣದ ಹುಟ್ಟಾಡಿಸುತ್ತ ಮುಗಿಲಿನಲ್ಲಿ ಹಗಲ ಜಹಜು
ಬರುವವರೆಗು ತಾಳ್ಮೆಯಿಂದ ಕಾಯ್ದುವುದೇ ಸರಿ

ಕನ್ನಡ ವರ್ಸಸ್ ಜಾಗತೀಕರಣ : ಪುನರ್ಸೃಷ್ಟಿಯ ಪ್ರತ್ಯುತ್ತರ

■ ಬಿ. ಎಸ್. ಜಯಪ್ರಕಾಶ ನಾರಾಯಣ.

ರಾಜ್ಯ ಸರ್ಕಾರ ಇತ್ತೀಚೆಗೆ 300 ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಿದ ಬೆನ್ನಿಗೇ ತುಮಕೂರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆದಿದ್ದರಿಂದ ನಿಜಕ್ಕೂ ಒಂದು ಲಾಭವಾಯ್ತು. ಅದೆಂದರೆ, ಕನ್ನಡ - ಇಂಗ್ಲೀಷ್ ಅಗತ್ಯ ಕುರಿತ ಚರ್ಚೆಗೆ ಬಂದ ಮತ್ತಷ್ಟು ಔಚಿತ್ಯ. ಸಮ್ಮೇಳನ ನಡೆಯದೇ ಇದ್ದಿದ್ದರೆ ಈ ಲಾಭ ಆಗುತ್ತಿರಲಿಲ್ಲ ಎಂದಲ್ಲ. ಅದರ ವೇಗ ಸ್ವಲ್ಪ ಕಡಿಮೆ ಇರುತ್ತಿತ್ತೇನೋ ಅಷ್ಟೆ. ಯಾಕೆಂದರೆ ಭಾಷೆಯ ಅಗತ್ಯ. ಅದಕ್ಕೆ ಸಿಗಬೇಕಾದ ಪ್ರಾಧಾನ್ಯ. ಅದಕ್ಕೆ ನೀತಿ ನಿರೂಪಕರು, ಗದ್ದುಗೆಗಳಲ್ಲಿ ಕೂತಿರುವವರು ಕೊಡಲೇ ಬೇಕಾದ ಆದ್ಯತೆ...... ಇಂಥ ನಿರ್ಣಾಯಕ ಸಂಗತಿಗಳನ್ನು ಕುರಿತ ಚರ್ಚೆ, ಸಂವಾದ, ಮುಖಾಮುಖಿ ಇವೆಲ್ಲ ಕಳೆದ ಸಾವಿರ ವರ್ಷಗಳಿಂದಲೂ ಎಲ್ಲರಿಗೂ ಗೊತ್ತಿರುವಂತೆಯೇ ನಡೆಯುತ್ತಿದೆ. ಇದು ಒಂದು ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ, ಮತ್ತೊಂದು ಕಾಲದಲ್ಲಿ ಕನ್ನಡದ್ದೇ ಆದ ಭಿನ್ನ ಪ್ರಕಾರಗಳು,ಈಗ ಕನ್ನಡ - ಇಂಗ್ಲೀಷ್ ಹೀಗೆ ವ್ಯತ್ಯಾಸ ಇರಬಹುದು. ಆದರೆ ಕನ್ನಡ ಪರ ವಕಾಲತ್ತು ನಮ್ಮ ಸಂಸ್ಕೃತಿಯುದ್ದಕ್ಕೂ ಮೊಳಗಿದೆ. ಇಲ್ಲದೆ ಇದ್ದಿದ್ದರೆ ಕನ್ನಡ ಇವತ್ತಿನಷ್ಟು ಪರಿಣಾಮಕಾರಿಯಾಗಿ ಇರುತ್ತಿರಲಿಲ್ಲ. ಇದಕ್ಕೆ ಉದಾಹರಣೆಯಾಗಿ ಜನರ ನಡುವೆಯೇ ಬೆಳೆದ ವಚನ ಸಾಹಿತ್ಯ , ದಾಸಕೂಟದ ಚಾಮರದಡಿ ಬೀದಿ ಬೀದಿಗಳಲ್ಲಿ ಅರಳಿದ ಹರಿದಾಸ ಸಾಹಿತ್ಯ, ಕನ್ನಡದ ಅಂತಃಸತ್ವ ಬತ್ತಿಹೋಯಿತೇ ಎಂಬ ಆತಂಕ ಮನೆ ಮಾಡಿಕೊಂಡಿದ್ದಾಗ ಮೂಡಿ ಬಂದ 'ಇಂಗ್ಲೀಷ್ ಗೀತಗಳು', ಕನ್ನಡದ ಪರವಾಗಿ ನಡೆದ ಗೋಕಾಕ್ ಚಳವಳಿ ಇವೆಲ್ಲವನ್ನೂ ಗಮನಿಸಬಹುದು. ಕನ್ನಡ ಸಂಸ್ಕೃತಿಯ ಲಭ್ಯ ಚರಿತ್ರೆಯ ಆಧಾರದ ಮೇಲೆ ಹೇಳುವುದಾದರೆ ಇಂಥ ಕನ್ನಡ ಪರ ಕಾಳಜಿ ಅಧಿಕೃತವಾಗಿ ಹಲ್ಮಿಡಿ ಶಾಸನದ ಕಾಲಕ್ಕೇ ಆರಂಭವಾಗಿರುವಂಥದ್ದು. ಇದು ನಮ್ಮ ಲಿಖಿತ ಪರಂಪರೆಯ ಚಾರಿತ್ರಿಕ ಪಯಣದ ಆರಂಭ ಬಿಂದು. ಈ ಕ್ಷಣದಲ್ಲಿ ನಮ್ಮ ವಾಚ್ಯ ಪರಂಪರೆಯನ್ನು (ಶೃತಿ ಪರಂಪರೆ ಎಂದೂ ಕರೆಯಬಹುದು) ನೆನಪಿಸಿಕೊಂಡರೆ ಕನ್ನಡದ ಪರವಾದ ಖಚಿತ ದನಿ ಕೇಳಲು ಶುರುವಾಗಿದ್ದು ಇನ್ನೂ ಸಾವಿರ ವರ್ಷ ಹಿಂದಕ್ಕೆ ಹೋಗುತ್ತದೆ. ಅಂದ ಮಾತ್ರಕ್ಕೆ ಕನ್ನಡಕ್ಕೆ ಮಿತಿಗಳಿಲ್ಲ ಎಂದಲ್ಲ. ಉದಾಹರಣೆಗೆ ಅಂಥ ನಿರ್ಣಾಯಕ ಅನ್ನಬಹುದಾದ ಒಂದೆರೆಡು ಸಂಗತಿ ನೋಡೋಣ.

1. ಎರಡು ಸಾವಿರ ವರ್ಷಗಳ ಲಭ್ಯ ಇತಿಹಾಸವಿರುವ ಕನ್ನಡದಲ್ಲಿ ಇನ್ನೂ ತೃಪ್ತಿ ಹುಟ್ಟಿಸುವ ಮಟ್ಟಿಗೆ ವಿಜ್ಞಾನ ಬರವಣಿಗೆ ಸಾಧ್ಯವಾಗಿಲ್ಲ.
2. ಕನ್ನಡದಲ್ಲಿ ಇವತ್ತಿಗೂ ಉನ್ನತ ಮಟ್ಟದಲ್ಲಿ ಸಂಪೂರ್ಣ ಶಿಕ್ಷಣ ಸಿಕ್ಕುತ್ತಿಲ್ಲ. ಅದೇನಿದ್ದರೂ ಅಬ್ಬಬ್ಬಾ ಅಂದರೆ ಮಟ್ಟದಲ್ಲಿ ಬಿ. ಎ . ಥರದ ಡಿಗ್ರಿವರೆಗೆ. ಕನ್ನಡಕ್ಕೆ ಇದೇ ಭಾಗ್ಯ ಬೆಂಗಳೂರಿನಂಥ ಪೇಟೆಗಳಲ್ಲಿ ಇನ್ನೂ ಬಂದಿಲ್ಲ.

3. ಇನ್ನು ಆಡಳಿತ ಮಟ್ಟದಲ್ಲಿ ಹೇಳುವುದಾದರೆ ಈಗ ಜಿಲ್ಲೆ ಮತ್ತು ತಾಲೂಕು ಮಟ್ಟಗಳಲ್ಲಿ ಕನ್ನಡವನ್ನೇ ಕಾಣಬಹುದಾದರೂ ಸರ್ಕಾರಿ ಕನ್ನಡ ಗತಕಾಲದ ಪೊರೆಯನ್ನು ಕಳಚಿಕೊಂಡಿಲ್ಲ. ಯಾಕೆಂದರೆ ಸರ್ಕಾರಿ ಇಲಾಖೆಗಳು ಬಳಸುತ್ತಿರುವ ಕನ್ನಡದಲ್ಲಿ ಅರ್ಧಕ್ಕಿಂತ ಹೆಚ್ಚು ಪದಗಳು, ವಾಕ್ಯಗಳು ಯಾರಿಗೂ ಅರ್ಥವಾಗುವಂತಿಲ್ಲ. ಉದಾಹರಣೆಗೆ ಸರ್ಕಾರಿ ಕಚೇರಿಗಳಲ್ಲಿ ಬಳಸುವ ಅನಗತ್ಯ ಬಹುವಚನಗಳು, ಮುಜುಗರ ಹುಟ್ಟಿಸುವಷ್ಟು ಇರುವ ಗೌರವ ಸೂಚಕ ಗುಣವಾಚಕಗಳು, ತಮ್ಮ ವಿಧೇಯತೆ ಪ್ರದರ್ಶಿಸಲು ಬಳಸುವ ಕೆಟ್ಟ ಭಾಷೆ ಇತ್ಯಾದಿ.

ಆದರೆ ಜಾಗತೀಕರಣ ಎಂಬ ರಾಕ್ಷಸ ಸೃಷ್ಟಿಯನ್ನು ಅಪ್ಪಿಕೊಂಡಿರುವ ನಾವು ಇವತ್ತು ಕನ್ನಡದ ಭವಿಷ್ಯದ ನಿರ್ಣಾಯಕ ಘಟ್ಟದಲ್ಲೂ ಬಂದು ನಿಂತಿದ್ದೇವೆ. ಜಾಗತೀಕರಣಕ್ಕೂ ಕನ್ನಡಕ್ಕೂ ಯಾವ ಸಂಬಂಧವೂ ಇಲ್ಲ ಎಂದು ತಕ್ಷಣಕ್ಕೆ ಅನ್ನಿಸಬಹುದು. ಆದರೆ, ಜಾಗತೀಕರಣ ನಮ್ಮ ಬಹುತೇಕರು ತಿಳಿದಿರುವಂತೆ ಕೇವಲ ಉದ್ಯೋಗ ಸೃಷ್ಟಿಸುವ ಕಾಮಧೇನು ಅಷ್ಟೇ ಅಲ್ಲ, ಅದು ಅಂತಿಮವಾಗಿ ಜಗತ್ತಿನ ವೈವಿಧ್ಯಮಯ ಸಂಸ್ಕೃತಿಯನ್ನೂ ಜೀವನ ಕ್ರಮಗಳನ್ನೂ ಹೊಸಕಿ ಹಾಕುವ ಹೆಮ್ಮಾರಿ. ಆಧುನಿಕತೆಯ ಎಲ್ಲಾ ಸೃಷ್ಟಿಗಳಂತೆಯೇ ಆರಂಭಿಕ ಹಂತದಲ್ಲಿ ನಮಗೆ ಆಕರ್ಷಕವಾಗಿ ಕಾಣುತ್ತಿರುವ ಜಾಗತೀಕರಣದ ಹುನ್ನಾರಗಳು ಗೊತ್ತಾಗಬೇಕಾದರೆ ಇನ್ನೂ ಸ್ವಲ್ಪ ವರ್ಷ ಹೋಗಬೇಕೆನಿಸುತ್ತದೆ. ಯಾಕೆಂದರೆ ನಮ್ಮ ದರಿದ್ರ ವ್ಯವಸ್ಥೆಯ ವಿಷ ಚಕ್ರದಲ್ಲಿ ಸಿಕ್ಕಿ ಹಾಕಿಕೊಂಡಿರುವವರಿಗೆ ಜಾಗತೀಕರಣ ತಮ್ಮೆಲ್ಲ ಶಾಪಗಳಿಂದ ಹೊರಬರುವ ದಾರಿಯಂತೆಯೂ ಕಾಣುತ್ತಿದೆ. ಶಾಪಗ್ರಸ್ತರು ಅಂದರೆ ಈಗ ಬರಿ ದಲಿತರು, ಅಬ್ರಾಹ್ಮಣರಷ್ಟೇ ಅಲ್ಲ, ಈ ಶಾಪಗ್ರಸ್ತರ ಪಟ್ಟಿಯಲ್ಲಿ ಈಗ ಹೆಚ್ಚಿನ ಸಂಖ್ಯೆಯಲ್ಲಿರುವವರು ನಿರುದ್ಯೋಗಿಗಳು, ತಂತ್ರಜ್ಞಾನದಿಂದ ವಂಚಿತರಾದವರು... ಇತ್ಯಾದಿ.

ಆದರೂ ನಾವ್ಯಾಕೆ ಈಗಲೂ ಇಂಗ್ಲೀಷಿನ ಬೆನ್ನು ಹತ್ತಿ ಹೋಗುತ್ತಿದ್ದೇವೆ ? ಈ ಪ್ರಶ್ನೆ ಕೆಲವೇ ಸಾಹಿತಿಗಳಿಗೋ, ಮಂತ್ರಿಗಳಿಗೋ, ಮಾತ್ರ ಸಂಬಂಧಿಸಿದ್ದಲ್ಲ. ಇದು ನಮ್ಮ ಸಂಸ್ಕೃತಿ / ಭಾಷೆ/ ಜೀವನ ಕ್ರಮಗಳ ಜೀವನದ ಪ್ರಶ್ನೆ. ಆದರೆ ಹೆಚ್ಚುಜನ ಭಾಷೆಯನ್ನು ಸಂಸ್ಕೃತಿಯ ಆಚೆಗಿನ ಒಂದು ಪ್ರತ್ಯೇಕ ಘಟಕವಾಗಿ ಮಾತ್ರ ನೋಡುತ್ತಿದ್ದಾರೆ. ಇಂಥವರಿಗೆ ಭಾಷೆಗಿರುವ ಅಗಾಧತೆ, ಆಳಗಳ ಕಲ್ಪನೆ, ಅದು ನಮ್ಮ ಜೀವನ ವಿಧಾನಗಳ ಮೇಲೆ ಬೀರುವ ಪ್ರಭಾವ ಮುಂತಾದ ನಿರ್ಣಾಯಕ ಸಂಗತಿಗಳು ಗೊತ್ತಿರುವುದಿಲ್ಲ, ಅಥವಾ ಒಂದಿಷ್ಟು ಶಿಕ್ಷಣ ಪಡೆದವರ ಮನೋಭಾವ ಕೂಡ ಒಂದು ಸರಳ ರೇಖೆಯಂತೆ ಬದಲಾಗುವುದು ಕೂಡ ಇಲ್ಲಿ ಕೆಲಸ ಮಾಡುತ್ತದೆ. ಜತೆಗೆ ಆಧುನಿಕ ಶಿಕ್ಷಿತರು ಲೋಲುಪ ಸಂಸ್ಕೃತಿಯ ಅನುಯಾಯಿಗಳಾಗುತ್ತ, ತಮ್ಮ ವ್ಯಕ್ತಿತ್ವದ ಆಳದಲ್ಲಿ ಪ್ರತಿರೋಧದ ಗುಣಗಳನ್ನು ಲವಲೇಶವೂ ಉಳಿಸಕೊಳ್ಳದೆ ಖಾಲಿಯಾಗುವುದೂ ನಮ್ಮ ಕಾಲದ ಜನಾಂಗ ಇಂಗ್ಲೀಷಿನ ಪರ ವಾಲಲು ಪ್ರಮುಖ ಕಾರಣ. ಹೀಗಾಗಿ ನಾವು 21ನೇ ಶತಮಾನದಲ್ಲೂ ಪರಿಣಾಮಕಾರಿಯಾಗಿ ಕನ್ನಡ ಸಂಸ್ಕೃತಿಯನ್ನು ಉಳಿಸಬೇಕೆಂದರೆ, ಅಂತಿಮವಾಗಿ ಏಕರೂಪಿ ಜಗತ್ತಿನ ಸೃಷ್ಟಿಯಲ್ಲಿ ಪರ್ಯವಸಾನವಾಗುವ ಆಧುನಿಕ ನಾಗರೀಕತೆ ಮತ್ತು ಅದರ ಸೃಷ್ಟಿಗಳನ್ನು ಅನುಮಾನದಿಂದ ನೋಡಬೇಕು. ಮೇಲ್ಪದರದಲ್ಲಿ ಗಮನಿಸಿದರೆ ಇವಕ್ಕೆಲ್ಲ ಸಂಬಂಧವಿಲ್ಲ ಅನಿಸಬಹುದು. ಅದಕ್ಕೇ ನಾವು ಮೊದಲು ಭಾಷೆಗಿರುವ ಸಂಕೀರ್ಣತೆಯನ್ನು ಅರಗಿಸಿಕೊಳ್ಳಬೇಕು. ಇಲ್ಲದಿದ್ದರೆ, ನಮ್ಮ ಕಾಲದಲ್ಲಿ ಸಂಪೂರ್ಣ ಹೊಸರೂಪದಲ್ಲೂ ವಸ್ತುನಿಷ್ಠ ನೆಲೆಯಲ್ಲೂ ನಡೆಯಬೇಕಾದ ಕನ್ನಡ ಹೋರಾಟ ಬರೀ ಭಾವುಕತೆ ಮಟ್ಟದಲ್ಲಿ ಸ್ಥಗಿತಗೊಳ್ಳಲಿದೆ. ಇಂಥ ಹೋರಾಟ ಭಾಷೆಯ ಚಲನಶೀಲತೆಗೆ ಅಪಾಯಕಾರಿ. ಇದನ್ನು ಸ್ವಲ್ಪ ಬಿಡಿಸಿ ಕೊಂಡರೆ ಉತ್ತಮ. ಇಲ್ಲದಿದ್ದರೆ ಕನ್ನಡದ ಹೋರಾಟ / ಮುಖಾಮುಖಿ ಯಾವುದರ ಜತೆ ಎನ್ನುವುದು ತಕ್ಷಣಕ್ಕೆ ಗೊತ್ತಾಗದು. ಇವತ್ತು ಸ್ವಲ್ಪಬೇರೆ ಬೇರೆ ಕಾರಣಗಳಿಂದಾಗಿ ಸ್ವಲ್ಪ

ಮಂಚೂಣಿಯಲ್ಲಿಕಾಣಿಸಿಕೊಳ್ಳುತ್ತಿರುವ ಕನ್ನಡ ಪರ ಹೋರಾಟಗಾರರು (ವಿಶೇಷವಾಗಿ ಬೆಂಗಳೂರಿನ ಹೋರಾಟಗಾರರು) ಕನ್ನಡಕ್ಕೆ ದೊಡ್ಡಶತ್ರು ತಮಿಳು ಎಂದುಕೊಂಡಿದ್ದಾರೆ. ಬೆಂಗಳೂರಿಗೆ ಹೊಟ್ಟೆಪಾಡಿಗಾಗಿ ತಮಿಳರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಇಂಥಾ ತೀರ್ಮಾನಗಳಿಗೆ ತಲುಪುವುದು ಸುಲಭ. ಆದರೆ ಸಾವಿರಾರು ವರ್ಷಗಳಿಂದ ಜತೆ ಜತೆಯಲ್ಲೇ ಬದುಕುತ್ತಿರುವ ಕನ್ನಡ ಮತ್ತು ತಮಿಳು ಪರಸ್ಪರ ಶತ್ರುಗಳು ಎನ್ನುವುದು ಭಾವಾವೇಶದ ಗರ್ಭದಿಂದ ಬರುವ ಕೂಗಷ್ಟೆ. ಆದ್ದರಿಂದ ಇಂಥ ಕನ್ನಡ ಹೋರಾಟಗಾರರು ಇಂಗ್ಲೀಷು ಸ್ವಾತಂತ್ರ್ಯಾ ನಂತರದ ಕೇವಲ ಐದು ದಶಕಗಳಲ್ಲಿ ಕನ್ನಡ ಮತ್ತು ಇತರ ಪ್ರಾದೇಶಿಕ ಭಾಷೆಗಳ ವಿಷಯದಲ್ಲಿ ಸೃಷ್ಟಿಸಿರುವ ಅಲ್ಲೋಲಕಲ್ಲೋಲಗಳನ್ನು ಕುರಿತು ಧ್ಯಾನಿಸಬೇಕು.

ಅಂದರೆ ಭಾಷೆಗೆ ಸಂಬಂಧಿಸಿದ ನಮ್ಮ ಹೋರಾಟ ಸಮಕಾಲೀನ ಮುಖಾಮುಖಿ ಆಗಬೇಕು. ಇದನ್ನು ಬಿಟ್ಟು ಕನ್ನಡ ಹೋರಾಟ ಕೇವಲ ಕನ್ನಡ ವರ್ಸಸ್ ತಮಿಳು ಇಲ್ಲವೇ ಕನ್ನಡ ಶಾಲೆ ವರ್ಸಸ್ ಇಂಗ್ಲೀಷ್ ಕಾನ್ವೆಂಟ್ ಮಟ್ಟದಲ್ಲಿ ನಿಂತರೆ ಅದೇನಿದ್ದರೂ ಬರೀ ಚೀರಾಟವಾಗುತ್ತದಷ್ಟೆ

ಸಮಕಾಲೀನ ಜಗತ್ತು ಎಂದರೆ ನಾವಿವತ್ತು ಬಹು ಮುಖ್ಯವಾಗಿ ಜಾಗತೀಕರಣದ ಅಂಗಳದಲ್ಲಿದ್ದೇವೆ. ಇದು ನಮಗೆ ಇಷ್ಟವೋ ಇಲ್ಲವೋ ಎನ್ನುವುದು ಬೇರೆ ವಿಷಯ. ಸಂಸ್ಕೃತಿಯ ಬಗ್ಗೆ ಎಷ್ಟೇ ಪಾವಿತ್ರ್ಯದ ಹೆಮ್ಮೆಯಿಂದ ಮಾತನಾಡಿದರೂ ನಾವೆಲ್ಲ ಇವತ್ತು ಜಾಗತೀಕರಣ ರೂಪಿಸಿರುವ ಜೀವನ ಕ್ರಮದಲ್ಲೇ ಉಸಿರಾಡುತ್ತಿದ್ದೇವೆ ಎನ್ನುವುದು ವಾಸ್ತವ. ಆದ್ದರಿಂದ ನಾವು ಇಂಥ ತಳಮಳಕ್ಕೆ ಪ್ರತಿಕ್ರಿಯಿಸುವುದಿಲ್ಲವೆಂದರೆ ಏನರ್ಥ ? ಇನ್ನು ಸಮಕಾಲೀನತೆಯ ವ್ಯಾಪ್ತಿಯಲ್ಲಿ ನಮಗೆ ಸಿಗುತ್ತಿರುವ ಶಿಕ್ಷಣ ಉದ್ಯೋಗ ಸೃಷ್ಟಿಗೆ ಕಾರಣವಾಗುವ ಅಂಶಗಳು , ವ್ಯಾವಹಾರಿಕ ಬದುಕಿನ ಉಜ್ವಲ ಅವಕಾಶಗಳನ್ನು ಸೃಷ್ಟಿಸುವ ಜೀವದ್ರವ್ಯಗಳು ಇವೂ ಮುಖ್ಯ. ಏಕೆಂದರೆ ಪರಂಪರೆ ನಮಗೆ ಎಷ್ಟು ಮುಖ್ಯವೋ ನಮ್ಮ ವರ್ತಮಾನವೂ ಅಷ್ಟೇ ಮುಖ್ಯ. ಆದ್ದರಿಂದಲೇ ಪರಂಪರೆಯ ಜತೆಜತೆಗೇ ವರ್ತಮಾನವನ್ನು ಕಟ್ಟುವುದೂ ಅನಿವಾರ್ಯ. ಇದು ಹೋರಾಟದ ವಸ್ತುನಿಷ್ಠ ನೆಲೆ. ಹೀಗಾಗದೆ ಕೇವಲ ಸ್ಲೋಗನ್ನುಗಳ ಮಟ್ಟಿಗೆ ಹೋರಾಟ ಇಳಿದು ಬಿಟ್ಟರೆ ಅಥವಾ ಅಲ್ಲೇ ನಿಂತುಬಿಟ್ಟರೆ ಅದು ಸಾಂಸ್ಕೃತಿಕ ಗುಗ್ಗುತನವಾಗುತ್ತದೆ. ಕನ್ನಡ ಕಳೆದ ಸಾವಿರ ವರ್ಷಗಳಲ್ಲಿ ನಡೆಸಿರುವ ನಿರ್ಣಾಯಕ ಹೋರಾಟಗಳನ್ನು ನೆನೆಪಿಸಿಕೊಂಡರೆ ನಮಗೆ ಸದ್ಯಕ್ಕಂತೂ ಇಂಥ ಗುಗ್ಗುತನ ಬರಲಾರದು ಅನ್ನಿಸುತ್ತದೆ. ಆದರೆ ನಮ್ಮ ಕಾಲದಲ್ಲಿ ಇಂಥ ಗುಗ್ಗುತನದಿಂದ ತಪ್ಪಿಸಿಕೊಳ್ಳಬೇಕಾದರೆ ಸದ್ಯಕ್ಕೆ ಕನ್ನಡಕ್ಕಿರುವ ಮಿತಿಗಳನ್ನು ಪ್ರಜ್ಞಾಪೂರ್ವಕವಾಗಿ ಮುರಿದು, ಮತ್ತೆ ಅರ್ಥಪೂರ್ಣವಾಗಿ ಪುನರ್ಸೃಷ್ಟಿಸಬೇಕು.

ಉದಾಹರಣೆಗೆ ಶಿಕ್ಷಣದಲ್ಲೇ ನೋಡಿ. ಬಿ. ಎ. ವರೆಗೂ ಕನ್ನಡದಲ್ಲಿ ಶಿಕ್ಷಣ ಸಿಗುತ್ತಿದೆ ಎಂದು ಸಮಾಧಾನ ಪಟ್ಟುಕೊಳ್ಳುವ ನಾವು ಅಲ್ಲಿ ನಿಜಕ್ಕೂ ಸಿಗುತ್ತಿರುವ ಶಿಕ್ಷಣವಾದರೂ ಎಂಥದು ಎಂದು ಯೋಚಿಸಿದ್ದೇವಾ? ಈಗ ಸಿಗುತ್ತಿರುವ ಕನ್ನಡ ಮಾಧ್ಯಮದ ಬಿ.ಎ. ಶಿಕ್ಷಣವನ್ನು ನೂರಕ್ಕೆ ನೂರು ನೆಚ್ಚಿಕೊಂಡರೆ ಯಾರಾದರೂ ವ್ಯಾವಹಾರಿಕ ಅನ್ನಬಹುದಾದ ಅತ್ಯುತ್ತಮ ಅವಕಾಶಗಳನ್ನು ಪಡೆಯಲು ಸಾಧ್ಯವಿದೆಯೇ? ಒಂದು ಭಾಷಿಕ ಸಮುದಾಯಕ್ಕೆ ಇಂಥ ಆತ್ಮಾವಲೋಕನ ಸಾಧ್ಯವಾಗಬೇಕು. ಇಲ್ಲದಿದ್ದರೆ ನಮ್ಮ ಅವಜ್ಞೆಯಿಂದಾಗಿಯೇ ಸಾಂಸ್ಕೃತಿಕ ಟೊಳ್ಳುತನ ಸೃಷ್ಟಿಯಾಗುತ್ತದೆ. ಇಂಥ ಎಚ್ಚರದಿಂದ ನೋಡಿದಾಗ ನಮಗೆ ಬಿ.ಎ. ಯಲ್ಲಿ - ಕನ್ನಡ ಮಾಧ್ಯಮದಲ್ಲಿ - ಸಿಗುತ್ತಿರುವುದು ಉದ್ಯೋಗ ಸೃಷ್ಟಿ ಸಾಧ್ಯವಿಲ್ಲದ ಭೂಗೋಳ, ರಾಜಕೀಯ ಶಾಸ್ತ್ರ ಇತಿಹಾಸ....ಈ ಥರದ ಅಪ್ರಸ್ತುತ ವಿಷಯಗಳು ಎನ್ನುವುದು ಗೊತ್ತಾಗುತ್ತದೆ.ಇದು ನಮ್ಮ ಕಾಲದಲ್ಲಿ ಕನ್ನಡಕ್ಕಿರುವ ಮಿತಿಗಳಲ್ಲಿ ಒಂದು.

ಆದ್ದರಿಂದ ನಾವು ಈ ಮಿತಿಯನ್ನು ಮುರಿದು ಮನಃಶಾಸ್ತ್ರ ಸಮಾಜಶಾಸ್ತ್ರ ಪಬ್ಲಿಕ್ ಅಡ್ಮಿನಿಸ್ಟ್ರೇಷನ್, ಮಾಹಿತಿ ತಮತ್ರಜ್ಞಾನ, ಜೈವಿಕ ತಂತ್ರಜ್ಞಾನ ಎಲ್ಲವನ್ನೂ ಕನ್ನಡದಲ್ಲಿ ದಕ್ಕಿಸಿಕೊಳ್ಳಬೇಕು. ಭಾಷೆಯ ಪುನರ್ಸೃಷ್ಟಿಎಂದರೆ ಇದೇ. ಇಂಥ ಪುನರ್ಸೃಷ್ಟಿಯಿಂದ ಮಾತ್ರ ಕನ್ನಡಕ್ಕೆ ದಿನನಿತ್ಯದ ಬದುಕಿನ ಉಜ್ವಲ ಅವಕಾಶಗಳನ್ನು ಸೃಷ್ಟಿಸಲು ಸಾಧ್ಯ.

ಇಂಥದೇ ಪುನಸೃಷ್ಟಿ ಸರ್ಕಾರಿ ಕಚೇರಿಗಳ ಕನ್ನಡ, ರಾಜಕಾರಣಿಗಳು ಬಳಸುವ ಕನ್ನಡ, ದಿನಪತ್ರಿಕೆಗಳು ಬಳಸುತ್ತಿರುವ ಕನ್ನಡ, ವಿದ್ಯುನ್ಮಾನ ಮಾಧ್ಯಮಗಳು ಬಳಸುತ್ತಿರುವ ಕನ್ನಡ, ಅವು ಸುದ್ದಿ ನೀಡುತ್ತಿರುವ ವಿಧಾನ..... ಈ ಎಲ್ಲ ಕ್ಷೇತ್ರಗಳಲ್ಲಿ ಆಗಬೇಕು. ಇದು ನಾವು ಕನ್ನಡಕ್ಕೆ ನಮ್ಮ ಕಾಲದಲ್ಲಿ ಸಲ್ಲಿಸಬಹುದಾದ ಅತ್ಯುತ್ತಮ ಸೇವೆ. ಇದನ್ನು ಬಿಟ್ಟು ಇಂಗ್ಲಿಷ್ ಅನಿವಾರ್ಯವೆಂದು ಅದನ್ನೇ ಬೆನ್ನು ತಟ್ಟುತ್ತಾ ಹೋಗುವುದು ಬೇರುಗಳನ್ನು ಕಳಚಿಕೊಳ್ಳುವ ಅವಿವೇಕವಾಗುತ್ತದೆ. ಆದರೆ ಒಂದು ಭಾಷಿಕ ಸಮುದಾಯಕ್ಕೆ ಇಂಥ ಪುನರ್ಸೃಷ್ಟಿ ಸಾಧ್ಯವಾಗುವುದು ಆ ಸಮುದಾಯದ ಆರ್ಥಿಕ ಚೈತನ್ಯದ ಆಧಾರದ ಮೇಲೆ ಎನ್ನುವುದೂ ಅಷ್ಟೇ ಸತ್ಯ.

ಇಂಗ್ಲೀಷರ ಆಳ್ವಿಕೆಯಡಿಯಲ್ಲಿದ್ದ ನಮಗೆ ಅದರ ಪ್ರಭಾವದಿಂದ ತಟ್ಟನೆ ಕಳಚಿಕೊಳ್ಳುವುದು ಸುಲಭವಲ್ಲ ನಿಜ. ಆದರೆ ಇಂಗ್ಲೀಷಿನ ಪ್ರಭಾವಳಿಯ ಮಿಂಚಿನಲ್ಲಿ ಜಗತ್ತನ್ನು ನೋಡುತ್ತಿರುವ ನಾವು ಕನ್ನಡದ ಮೂಲಕವೇ ಸಮಸ್ತ ವಿಶ್ವವನ್ನೂ ಕಾಣುವಂತಾಗುವುದೇ ಇದಕ್ಕೆ ಸರಿಯಾದ ಉತ್ತರ. ಇಂಥ ಮಹತ್ವಾಕಾಂಕ್ಷೆ ಮಾತ್ರ ಇವತ್ತು ಕನ್ನಡವನ್ನು ಪೊರೆಯಬಲ್ಲದು. ಇಲ್ಲದಿದ್ದರೆ ಕನ್ನಡದ ಪಾಕ ಸಂಸ್ಕೃತಿ, ಕಾವ್ಯ, ಸಂಗೀತ, ವೈದ್ಯ ಪದ್ಧತಿ, ವಚನ, ದಾಸರ ಪದ....ಎಲ್ಲವೂ ಹೇಳಹೆಸರಿಲ್ಲದಂತೆ ನಾಶವಾಗುತ್ತವೆ. ಆಧುನಿಕತೆಗಿರುವ ನಾಗಾಲೋಟವೇ ಇಂಥ ಭೀಕರ ಗುಣದ್ದು. ಸಾಂಸ್ಕೃತಿಕ ಸಂಗತಿಗಳನ್ನೂ ಸರಕುಗಳೆಂದೇ ಪರಿಭಾವಿಸುತ್ತಿರುವ ನಮ್ಮ ತಲೆಮಾರು ಇದನ್ನು ಅರಿತುಕೊಳ್ಳ ಬೇಕು.

ಕನ್ನಡ ನೆಲದಲ್ಲಿ ಇದೆಲ್ಲ ಸಾಧ್ಯವಾಗದಿದ್ದರೆ ನಾವು ಕೊನೆಗೆ ಬೇರಾವ ಆಯ್ಕೆಗಳೂ ಇಲ್ಲದ ನವನಾಗರೀಕತೆಯ ಕೂಪಕ್ಕೆ ಬೀಳುತ್ತೇವೆ. ಹೀಗಾಗುವುದು ಯಾರಿಗೆ ತಾನೆ ಬೇಕು . ಆದರೆ 'ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ...ದಾರಿ ಸಾಗುವುದೆಂತೋ ನೋಡಬೇಕು'.



ಏಳು ಹೆಡೆ ಸರ್ಪ


-ಚಿದಂಬರ

ಎಡ ಬಲಕ್ಕೆರಡು ಬೇವಿನ ಮರಗಳು
ಮಧ್ಯದಲ್ಲಿ ಇದ್ದಾಳೆ
ರಾತ್ರಿಗೆ ಕಾವಲಿಗಳಾಗಿ, ಊರಿಗೆ ದೇವರಾಗಿ
ಮೈ ತುಂಬ ಎಣ್ಣೆ ಜಿಗುಟು
ಕುಂಕುಮ ಮಡಿ ಸೀರಿ, ದೂಪಾರ್ತಿಯಿಂದ
ಪೂಜೆಗೊಂಡ ತಾಯಿ, ಕುಮದವ್ವ
ಸುತ್ತಹಳ್ಳಿಗೆಲ್ಲ ಗೊತ್ತು
ಇವಳ ಪರಾಕ್ರಮ, ಸಂಭ್ರಮ
ದೈತ್ಯರಿಂದ , ದುಷ್ಟರಿಂದ ದೆವ್ವಗಳಿಂದ
ಊರ ಕಾಯಲು ಇವಳಲ್ಲಿ
ಅನೇಕಾನೇಕ
ಅಸ್ತ್ರಗಳು, ಪ್ರಾಣಿಗಳು, ಪಕ್ಷಿಗಳು, ಯಕ್ಷಿಣಿಯರು ಇತ್ಯಾದಿ
ಅದರಲ್ಲಿ ಹೆಚ್ಚಿನದು ಏಳುಹೆಡೆ ಸರ್ಪ
ಗುಡಿಸುತ್ತ ತಿರುಗುತ
ಹೆಡೆಯೆತ್ತಿ ಆಡುತ
ಅಸಲಿಭಕ್ತರಿಗೊಮ್ಮೆ ಭೆಟ್ಟಿನೀಡುವುದು

ಹೀಗಿರಲು ಬಿಸಿಲಿಗೊಮ್ಮೆ ಬುಸುಗುಡುತ
ಮೈ ಸಿಂಬೆ ಬಿಡಿಸಿ ಮರದ ನೆರಳಲ್ಲಿ
ಹೆಡೆಗಳ ನಿಗಿರಿಸಿ ಮೇಲೆ ನೋಡಲು
ನೀಲಿ ಮುಗಿನಲಿ ಹಾರಾಡುತ್ತಿತ್ತು
ಹಳೇ ಗರಡು
ಸೀಳು ನಾಲಿಗೆ ಬಿಚ್ಚಿ ಹೆದರಿದ ಸರ್ಪ
ಪೂತ್ಕರಿಸಿತು ಹಲ್ಲು ಕಿರಿದು
ಕುಮುದವ್ವನ ಹಣೆಯ ಮೇಲೆ
ಕೆಂಪು ಕುಂಕುಮ ಮಡಿ ಸೀರೆಯ ನೆರಿಗೆ
ಪೂಜಿಸಿ ಇಟ್ಟ ಹೂ ಪತ್ರೆ ಇನ್ನೂ ಹಾಗೆ ಇದ್ದವು

ಸರ್ಪದ ಮೈಯಿಂದ ಬಸಿಯಿತು ಬಿಸಿನೀರು
ಕಣ್ಣು ಕುರುಡಾದವು . ಮೈಯೆಲ್ಲ ಸಿಂಬೆಯಾಗಿ
ಸೀಳು ನಾಲಿಗೆ ಕೂಡಿ ಒಂದಾದವು
ಸರ್ಪಸರಿದಾಡದೆ ಹಗ್ಗವಾಯಿತು
ಗರುಡ ಕೆಳಗಿಳಿದು ಸೀಮೆ ಕಲ್ಲ ಮೇಲೆ ಕುಳಿತಿತು
ಕಾಯೋ ಕುಮದವ್ವ
ದೈತ್ಯಳಾಗಿ.......... ದೇವರಾಗಿ............

ಲಂಕೇಶ್ ಅವರ ಟೀಕೆ - ಟಿಪ್ಪಣಿ



■ ಜಿ.ಪಿ.ಬಸವರಾಜು

"ಒಬ್ಬನ ವ್ಯಕ್ತಿತ್ವಕ್ಕೆ ಕಾವ್ಯ ಇಡಿಯಾಗಿ ಬೇಕು. ಅದು ಪ್ರಬಂಧ, ವರದಿ, ತಮಾಷೆ, ಇತ್ಯಾದಿಯಲ್ಲಿ ಹರಿದು ಹಂಚಿ ಹೋಗಬಾರದು. ಎನ್ನುವವರಿದ್ದಾರೆ. ಎಲಿಯಟ್ ಹಾಗೆ ನಂಬಿದ್ದ. ಆದರೆ ನನ್ನ ಬದುಕನ್ನು ಸಾಗಿಸಲು ನನ್ನ ಕಾಲಕ್ಕೆ ಸ್ಪಂದಿಸಿ ಎಲ್ಲ ರೀತಿಯದನ್ನು ಬರೆಯ ಬೇಕಾಯಿತು. ಅದರಿಂದ ನನ್ನ ಬರೆಯುವ ಸಂತೋಷ ಕಡಿಮೆಯಾಗಲಿಲ್ಲ. ಟೆನಿಸನ್, ಸ್ವಿನ್‌ಬರ್ನ್ ತರಹದ ಪ್ರಸಿದ್ಧ ಕಾವ್ಯ ಜೀವಿಗಳೇ ಮಂಕಾಗಿದ್ದಾರೆ. ಗದ್ಯ ಪದ್ಯ ಎಲ್ಲ ಬರೆದ ಪುಷ್ಕಿನ್ ಇವತ್ತಿಗೂ ಜೀವಂತವಾಗಿ ಅರ್ಥ ಹೊಮ್ಮಿಸುತ್ತಾನೆ. ಬರೆಯುವ ಪ್ರಾಮಾಣಿಕತೆ ಮುಖ್ಯವೇ ಹೊರತು ಪ್ರಕಾರಗಳಲ್ಲಿ ಪರಿಶುದ್ಧತೆ ಅಲ್ಲ- ಅನ್ನಿಸುತ್ತದೆ.

ಸಾಹಿತ್ಯ ಕೊನೆಗೂ ಸಾಹಿತಿಗಳಿಂದ ನಿರೀಕ್ಷಿಸುವುದು ನ್ಯಾಯವಂತಿಕೆ, ನಿಷ್ಠುರತೆಯನ್ನು. ಅದು ಇದ್ದಾಗ ನಿರೂಪಣೆ ವರ್ಣನೆ ಇತ್ಯಾದಿಗಳು ತಾವಾಗಿಯೇ ಬರುತ್ತದೆ. ನಿಷ್ಠುರತೆಯ ಸೂತ್ರದಲ್ಲಿಯೇ ಪ್ರೀತಿ, ಮಾನವೀಯತೆ ಎಲ್ಲವೂ ಇವೆ. ಪ್ರೀತಿ, ಮಾನವೀಯತೆಯ ನಿರರ್ಥಕತೆ ಕೂಡಾ."

ತಮ್ಮ 45 ವರ್ಷಗಳ ಕಾವ್ಯ ಸೃಷ್ಟಿಯಾದ ಚಿತ್ರ ಸಮೂಹಕ್ಕೆ ಬರೆದ ಕೆಲವು ಮಾತುಗಳಲ್ಲಿ ಲಂಕೇಶ್ ಮೇಲಿನ ಮಾತುಗಳನ್ನು ದಾಖಲಿಸಿದ್ದಾರೆ. ಹೀಗೆ ದಾಖಲಿಸುವಾಗಲೇ ತಾವು ಈ ಎಲ್ಲ ರೀತಿಯದನ್ನೂ ಬರೆಯಬೇಕಾಗಿ ಬಂದ ಅನಿವಾರ್ಯತೆಯನ್ನು ಹೇಳುತ್ತಾ ಗದ್ಯ ಪದ್ಯ ಎಲ್ಲ ಬರೆದ ಪುಷ್ಕಿನ್ ಇವತ್ತಿಗೂ ಜೀವಂತವಾಗಿರುವುದನ್ನು ಹೇಳಿದ್ದಾರೆ. ಇದನ್ನು ಹೇಳುವುದರ ಮೂಲಕ ತಮ್ಮ ಒಲವು ಯಾವುದರ ಕಡೆಗೆ ಎಂಬುದನ್ನು ಸೂಚಿಸಿದ್ದಾರೆ. ಪರಿಶುದ್ಧತೆ ಎನ್ನುವುದು ಪ್ರಕಾರಗಳಲ್ಲಿ ಇಲ್ಲ, ಅದು ಇರುವುದು ಬರೆಯುವ ನ್ಯಾಯವಂತಿಕೆ ಮತ್ತು ನಿಷ್ಠುರತೆಗಳಲ್ಲಿ ಎಂಬುದನ್ನೂ ಲಂಕೇಶ್ ಸ್ಪಷ್ಟವಾಗಿ ಹೇಳಿದ್ದಾರೆ.



ಲಂಕೇಶ್ ಅವರ ಟೀಕೆ-ಟಿಪ್ಪಣಿ ಅವರ ಗದ್ಯ ಬರಹ. ಈ ಗದ್ಯ ಬರವಣಿಗೆಯ ಬಗ್ಗೆಯೂ ಲಂಕೇಶ್ ಒಂದು ಕಡೆ ಹೇಳಿದ್ದಾರೆ. ಪಂಚೇಂದ್ರಿಯಗಳನ್ನು ಸರಿಯಾಗಿ ಇಟ್ಟುಕೊಂಡ ಲೇಖಕ ಸರಿಯಾದ ಗದ್ಯ ಬರೆಯುತ್ತಾನೆ, ಎಂಬುದು ಅವರ ಹೇಳಿಕೆ. ಇದನ್ನು ಮತ್ತೊಂದು ಸಂದರ್ಭದಲ್ಲಿ ವಿವರಿಸುವ ಲಂಕೇಶ್, ಎಲ್ಲವನ್ನೂ ಸರಿಯಾಗಿ ಗ್ರಹಿಸುವ

ಮತ್ತು ಅನುಭವಿಸುವ ಮತ್ತು ಅನುಭವಿಸಿದ್ದನ್ನು ಸಮರ್ಥವಾಗಿ ಗದ್ಯದಲ್ಲಿ ಮೂಡಿಸುವ ಲೇಖಕನೇ ಪಂಚೇಂದ್ರಿಯಗಳು ಸರಿಯಾಗಿ ಇರುವ ಲೇಖಕ ಎಂದಿದ್ದಾರೆ. ಗದ್ಯ ಬರಹ ಅಪಸ್ವರ ಗಳಿಲ್ಲದೇ ಇರಬೇಕು ಎಂಬ ಮಾತನ್ನೂ ಆಡಿರುವ ಲಂಕೇಶ್ ಈ ಅಪಸ್ವರಗಳನ್ನು ಕೊಂಚ ವಿವರಿಸಿಯೂ ಇದ್ದಾರೆ. ಸಂಗೀತದಲ್ಲಿನ ಅಪಸ್ವರ ಕಿವಿ ಮತ್ತು ಆತ್ಮಕ್ಕೆ ಸಂಬಂಧಿಸಿದ ಸದ್ದುಗಳಿದ್ದರೆ, ಸಾಹಿತ್ಯದಲ್ಲಿ ಗದ್ಯದಲ್ಲಿ ನೈತಿಕವಾದ ಸಾಮಾಜಿಕವಾಗಿ, ರಾಜಕೀಯವಾಗಿ, ಆಕ್ಷೇಪಣೆಯಾದ ಅಪಸ್ವರಗಳು ಮೂಡಿಬರುತ್ತವೆ. ಈ ಎಚ್ಚರ ಮತ್ತು ಮೌಲ್ಯ ಪ್ರಶ್ನೆಗಳನ್ನು ಇಟ್ಟುಕೊಂಡು ಗದ್ಯವನ್ನು, ಟೀಕೆ- ಟಿಪ್ಪಣಿಯ ಗದ್ಯವನ್ನು ಬರೆದವರು ಲಂಕೇಶ್.

ಲಂಕೇಶ್ ಪತ್ರಿಕೆಯಲ್ಲಿ ನಿಯತವಾಗಿ, ನಿರಂತರವಾಗಿ, ಸುಮಾರು ಎರಡು ದಶಕಗಳ ಕಾಲ ಹರಿದ ಬರವಣಿಗೆ ಟೀಕೆ-ಟಿಪ್ಪಣಿ. ಇದು ಈ ಪತ್ರಿಕೆಯ ಸಂಪಾದಕೀಯ ಬರಹವೂ ಹೌದು. ಅಂದರೆ, ವಾರದೊಂದು ಅಂಕಣ ಬರಹ. ಕಾಲದ ಮತ್ತು ಜಾಗದ ಮಿತಿಗಳಲ್ಲೇ ರೂಪ ಪಡೆಯ ಬೇಕಾದ ಅನಿವಾರ್ಯತೆಯನ್ನೂ ಇಟ್ಟುಕೊಂಡಿದ್ದ ಬರಹ. ಸ್ವತಃ ಲಂಕೇಶ್‌ರಿಗೇ ಈ ಮಿತಿಯ ಅರಿವು ಮತ್ತು ಎಚ್ಚರಗಳಿದ್ದವು ಎಂಬುದನ್ನು ಅವರ ಮುಂದಿನ ಮಾತುಗಳು ಹೇಳುತ್ತವೆ. ಅಂಕಣ ಬರೆಯುವವ ತಮ್ಮರಕ್ತದ ಜೊತೆಗೆ ಹುಡುಗಾಟ ಆಡುವವ, ಆತ ತನ್ನ ಸುತ್ತಣ ಬದುಕನ್ನು ಕಂಡು ಹುಮ್ಮಸ್ಸುಗೊಂಡು ಬರೆಯುತ್ತಾನೆ. ಈ ಹುಮ್ಮಸ್ಸನ್ನು ಸ್ಫೂರ್ತಿ ಅನ್ನುವುದಕ್ಕೆ ಕೂಡಾ ಹಿಂಜರಿಯುತ್ತಾನೆ. ಬುದ್ಧಿಜೀವಿಯಂತೆ ಸಂಕೀರ್ಣವಾಗಿ ಬರೆಯುವುದಾಗಲೀ ಕವಿಯಂತೆ ಭವಿಷ್ಯದ ಜನಾಂಗಕ್ಕೆ ಬರೆಯುವುದಾಗಲಿ ಅಂಕಣಕಾರನಿಗೆ ಸಾಧ್ಯವಾಗುವುದಿಲ್ಲ. ಇವತ್ತಿನ ಭಾಷೆಯಲ್ಲಿ ಬರೆದು ಓದುಗರ ಆಸಕ್ತಿ ಕೆರಳಿಸದಿದ್ದರೆ ಎಲ್ಲ ವ್ಯರ್ಥವಾಗುತ್ತದೆ.

ಲಂಕೇಶ ತಮ್ಮ ಸುತ್ತಲಿನ ಬದುಕನ್ನು ಕಂಡು ಹುಮ್ಮಸ್ಸುಗೊಂಡು ಬರೆದದ್ದೇ ಹೆಚ್ಚು. ಟೀಕೆ-ಟಿಪ್ಪಣಿಯ ಬರಹಗಳಲ್ಲದೇ ತಮ್ಮ ಯಾವುದೇ ಪ್ರಕಾರದ ಬರಹಕ್ಕೂ ಸುತ್ತಲಿನ ಬದುಕೇ ಮೂಲದ್ರವ್ಯವನ್ನು ಒದಗಿಸಬೇಕು ಎಂಬ ನಂಬಿಕೆಯನ್ನು ಇಟ್ಟು ಕೊಂಡವರು ಲಂಕೇಶ್. (ನಿಜವಾದ ಲೇಖಕರ ನಂಬಿಕೆಯು ಇದೇ.) ಹೀಗಾಗಿಯೇ ಲಂಕೇಶರಿಗೆ ರಾಜಕೀಯ, ಸಾಹಿತ್ಯ, ಸಿನೆಮಾ, ಧರ್ಮ, ಸಂಸ್ಕೃತಿ, ತತ್ವ ಚಿಂತನೆ, ಇತ್ಯಾದಿ ಎಲ್ಲವೂ ತನ್ನ ಸುತ್ತಲಿನ ಬದುಕಿನಿಂದಲೇ ಹುಟ್ಟಿಬಂದವು. ಹಾಗೆಯೇ ತನ್ನ ಸುತ್ತಲಿನ ಮನುಷ್ಯರನ್ನೇ ಕೇಂದ್ರವಾಗಿ ಇಟ್ಟು ಕೊಂಡವು. ತನ್ನ ಕೇಂದ್ರವಾದ ಈ ಮನುಷ್ಯರ ಬದುಕಿಗೆ ನೆಮ್ಮದಿ ತರಬಲ್ಲ ನೆಲ, ಜಲ, ಸಂಸ್ಕೃತಿ, ಬದುಕುಗಳ ಬಗ್ಗೆ ಚಿಂತಿಸಿದ ಲಂಕೇಶ್ ಇದು ಕೆಡುತ್ತಿರುವುದನ್ನು ಕಂಡಾಗ ಸಿಡಿದೆದ್ದವರು. ಕಂಡು ಕಾರಿದವರು. ಉದ್ವಿಗ್ನಗೊಂಡವರು, ತಳಮಳಿಸಿದವರು. ಸಾಮಾನ್ಯ ಮನುಷ್ಯನೊಬ್ಬ ಈ ನಾಡಿನಲ್ಲಿ ನೆಮ್ಮದಿಯಿಂದ ಬದುಕಬೇಕು. ಇಲ್ಲಿನ ಗಾಳಿ, ನೀರು ಪರಿಸರ ರಾಜಕೀಯ ಮನುಷ್ಯನ ಅಂತರಂಗ, ಬಹಿರಂಗಗಳೆರಡೂ ಸ್ವಚ್ಛವಾಗಿರಬೇಕೆಂದು ಹಂಬಲಿಸುತ್ತಲೇ ಅದಕ್ಕೆ ಪೂರಕವಾದ ಮಾರ್ಗದರ್ಶನವನ್ನು ನೀಡಿದ್ದು ಈ ಟೀಕೆ-ಟಿಪ್ಪಣಿಗಳ ಮೂಲಕವೇ. (ಲಂಕೇಶ್ ಅವರ ವೈಯಕ್ತಿಕ ಬದುಕನ್ನು ಹತ್ತಿರದಿಂದ ನೋಡಿದವರಿಗೆ ಈ ಸ್ವಚ್ಛತೆಯ ಪರಿಕಲ್ಪನೆ ವಿಚಿತ್ರವಾಗಿಯೂ ಕಾಣಬಹುದು. ಆದರೆ ತಮ್ಮ ಬದುಕಿನ ದ್ವಂದ್ವಗಳನ್ನು ರುಚಿ ಅಭಿರುಚಿಗಳನ್ನು ಮುಚ್ಚಿಟ್ಟು ಕೊಂಡು ವ್ಯವಹರಿಸಿದವರಲ್ಲ ಲಂಕೇಶ್. ತಮ್ಮ ದೌರ್ಬಲ್ಯಗಳನ್ನು ಪ್ರದರ್ಶಿಸುತ್ತ, ಕೆಲವೊಮ್ಮೆ ವೈಭವೀಕರಿಸಿದರೂ ಅವರು ಉತ್ತಮ ಮೌಲ್ಯಗಳಿಗಾಗಿ ಹಂಬಲಿಸಿದರು; ಆ ಬಗ್ಗೆ ಚಿಂತಿಸಿ, ವಿಶ್ಲೇಷಿಸಿ, 'ಸತ್ಯ'ಕ್ಕಾಗಿ ಕಾವ್ಯಕ್ಕಾಗಿ ಹುಡುಕಾಡಿರುವುದು ಅವರ ಈ ಬರಹದಲ್ಲಿ ಕಾಣಿಸುತ್ತದೆ.) ತಮ್ಮ ಚಿಂತನೆಯನ್ನು, ಕನಸುಗಳನ್ನು, ಹಂಬಲಗಳನ್ನು ಹರಳುಗಟ್ಟಿಸುವಂತೆ ಬರೆಯುತ್ತಿದ್ದ ಲಂಕೇಶ್ ಜಗತ್ತಿನ ಬೇರೆ ಬೇರೆ ಭಾಗಗಳ ಸಂಗತಿಗಳನ್ನು, ದೃಷ್ಟಾಂತಗಳನ್ನು

ಎತ್ತಿಕೊಂಡು ಬರೆಯುತ್ತಿದ್ದರು. ಸಾಹಿತ್ಯ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಿಂದಲೂ ಅವರು ಅನೇಕ ಸಂಗತಿಗಳನ್ನು ತೆಗೆದುಕೊಂಡು ಬರೆದದ್ದಿದೆ. ಆದರೆ ಏನನ್ನೇ ತೆಗೆದುಕೊಂಡರೂ ಅದು ಅದು ತನಗೆ ಮತ್ತು ತನ್ನ ಜನರಿಗೆ ಮತ್ತು ಅವರ ಬದುಕಿಗೆ ಹೇಗೆ ನೆರವಾಗುತ್ತದೆ ಎಂಬುದರ ಮೇಲೆ ಕಣ್ಣಿಟ್ಟೇ ಇರುತ್ತಿದ್ದುದು ಬಹಳ ಮುಖ್ಯವಾದ ಸಂಗತಿ, ಲಂಕೇಶ್ ಅವರು ಅಮೆರಿಕದ ಅಧ್ಯಕ್ಷ ಹ್ಯಾರಿ ಟ್ರೂಮನ್ ಬಗ್ಗೆ ಬರೆಯುವುದು ಅಮೆರಿಕದ ರಾಜಕೀಯದ ಬಗೆಗೆ ತಮಗಿರುವ ತಿಳುವಳಿಕೆಯನ್ನು ತೋರಿಸುವುದಕ್ಕಲ್ಲ; ಕರ್ನಾಟಕದ ರಾಜಕೀಯ ನಾಯಕರಿಗೆ ಪರೋಕ್ಷವಾಗಿ ಕೆಲವು ಸಂಗತಿಗಳನ್ನು ಸೂಚಿಸುವುದಕ್ಕೆ; ಉತ್ತಮ ರಾಜಕೀಯ ನಾಯಕನಾಗಲು ಪ್ರಾಮಾಣಿಕತೆ, ಪಟ್ಟು ಹಿಡಿದು ಕೆಲಸ ಮಾಡುವ ಹಠ, ಎದೆಗಾರಿಕೆ ಮತ್ತು ಸಾಮಾನ್ಯ ವಿವೇಕ ಎಷ್ಟು ಮುಖ್ಯ ಎಂಬುದನ್ನು ಸೂಚಿಸುವುದಕ್ಕೆ. ಹಾಗೆಯೇ ಚಿಲಿಯ ನೆರೂಡನ ಬಗ್ಗೆ ಬರೆಯುವುದು ಕೇವಲ ಆತ ದೊಡ್ಡ ಕವಿ ಎನ್ನುವ ಕಾರಣಕ್ಕಲ್ಲ. ತನ್ನ ಗೆಳೆಯ ಲೋರ್ಕಾನನ್ನು ಕೊಲ್ಲಿಸಿದ ಫ್ರಾಂಕೋನ ಸರ್ವಾಧಿಕಾರವನ್ನು ಕಂಡು ಬೆಚ್ಚಿ ಬೀಳುವ ನೆರೂಡ ಮನುಷ್ಯನ ಅಂತರಾಳದಲ್ಲಿರುವ ಕ್ರೌರ್ಯ ಮತ್ತು ನೀಚತನಗಳ ಬಗ್ಗೆ ಹೇಸುತ್ತಾನೆ. ಇದನ್ನೆಲ್ಲ ಶೋಧಿಸುವವನಂತೆ ನೆರೂಡ ಬರೆಯುತ್ತಾನೆ. ನೆರೂಡ ಮುಖ್ಯವಾಗುವುದು ಮತ್ತು ಆತನ ಬಗ್ಗೆ ಲಂಕೇಶ್ ಚಿಂತಿಸುವುದರ ಹಿಂದೆ ಈ ಎಲ್ಲ ಅಂಶಗಳಿವೆ.

ನಮ್ಮ ಕ್ರೀಡಾಪಟುಗಳನ್ನು ಹುರಿದುಂಬಿಸಲು. ಅವರ ಆತ್ಮ ವಿಶ್ವಾಸವನ್ನು ಚಿಗುರಿಸಲು ಲಂಕೇಶ್ ಜಗತ್ತಿನ ಅತ್ಯುತ್ತಮ ಕ್ರೀಡಾಪಟುಗಳ ಬಗ್ಗೆ ಬರೆಯುತ್ತಾರೆ. ಅವರ ಜೀವನ ವಿಧಾನವನ್ನು ವಿವರಿಸುತ್ತಲೇ, ಅಲ್ಲಿನ ಧ್ಯಾನ ಮತ್ತು ಏಕಾಗ್ರತೆಯನ್ನು, ಪ್ರಾಮಾಣಿಕತೆ ಮತ್ತು ಸರಳತೆಯನ್ನು ಉಲ್ಲೇಖಿಸುತ್ತಾರೆ. ಮಾದಕ ವಸ್ತುಗಳನ್ನು ಸೇವಿಸುತ್ತ , ವಿವೇಕ ರಹಿತ ಕ್ರಿಯೆಗಳಿಂದ ಬದುಕನ್ನು ಹಾಳುಮಾಡಿಕೊಂಡ ಕ್ರೀಡಾಪಟುಗಳ ಚರಿತ್ರೆಯನ್ನು ಹೇಳುವಲ್ಲಿಯೂ ಲಂಕೇಶರ ಬಯಕೆ ಯಾವುದು ಎಂಬುದು ಸ್ಪಷ್ಟವಾಗುತ್ತದೆ. ಶಿಸ್ತು, ನಿರಂತರ ಪರಿಶ್ರಮಗಳ ಮಾರ್ಗದ ಮೂಲಕವೇ ತುತ್ತ ತುದಿಗೆ ಏರಬೇಕೆಂಬ ತಮ್ಮ ಬಯಕೆಯನ್ನೂ ಅವರು ಕಾಣಿಸುತ್ತಾರೆ.

ಲಂಕೇಶ್ ಅವರ ಅಭಿರುಚಿ, ಆಸಕ್ತಿ ಚಿಂತನೆಗಳು. ಧ್ಯಾನ-ಮೌನಗಳು ರೂಪಗೊಂಡದ್ದರ ಹಿನ್ನಲೆಯಲ್ಲಿ ಸಮಾಜವಾದೀ ಚಿಂತನೆಯಿದೆ. ಈ ಚಿಂತನೆಯ ಬೆಳಕಲ್ಲೇ ಅವರು ಅಮೇರಿಕದ. ರಷ್ಯದ ರಾಜಕೀಯಗಳನ್ನು ನೋಡಬಲ್ಲರು. ಲೆಬನಾನ್‌ನಂಥ ಪುಟ್ಟ ರಾಷ್ಟ್ರದ ಬದುಕನ್ನು ವಿಶ್ಲೇಷಿಸಬಲ್ಲರು. ಮಿತ್ತೆರ್ರಾ ಬಗ್ಗೆ ಅವರು ಬಗೆಯುವುದು, ಲೋಹಿಯಾ ಚಿಂತನೆಯ ಬಗ್ಗೆ ವ್ಯಾಮೋಹಿತರಾಗುವುದು. ಗಾಂಧೀಜಿಯವರ ಸರಳತೆಗೆ ಮಾರುಹೋಗುವುದು ಇವೆಲ್ಲ ಲಂಕೇಶ್ ಅವರ ಸಮಾಜವಾದೀ ಆಶಯಗಳ, ಕನಸು, ಹಂಬಲಗಳ ತುಡಿತಗಳಂತೆ ಕಾಣಿಸುತ್ತವೆ. ಮೇಲಿಂದ ಮೇಲೆ ಲಂಕೇಶ್ ಅವರು, ಲೋಹಿಯಾ ಚಿಂತನೆಯ ಸುತ್ತ ಸುಳಿದಾಡಿರುವುದು, ಗಾಂಧೀಜಿಯವರ ಬದುಕಿನ ಸರಳತೆಯನ್ನು, ಅವರ ಸಮುದಾಯ ಹಿತದ ಅಖಂಡ ನಿಷ್ಠೆಯನ್ನು, ಪಟ್ಟು ಹಿಡಿದು ಸಾಧಿಸುವ ಛಲವನ್ನು, ಅದ್ಭುತ ವಿವೇಕವನ್ನು, ಪ್ರತಿಭಾವಂತಿಕೆಯನ್ನು ಮೆಚ್ಚುವುದು ಇವೆಲ್ಲದರ ಕಾರಣವೂ ಇದೇ. ಲೋಹಿಯಾ ಮತ್ತು ಗಾಂಧಿ ಅವರ ಚಿಂತನೆಗಳ ಬೆಳಕಲ್ಲೇ ಚಿಂತಿಸುತ್ತ ಒಂದು ಹೆಜ್ಜೆ ಮುಂದಕ್ಕೆ ಚಲಿಸಲು ಲಂಕೇಶ್ ಪ್ರಯತ್ನಿಸಿರುವುದಕ್ಕೆ ಇಲ್ಲಿ ದಾಖಲೆ ಇದೆ. ಲಂಕೇಶ್ ಅವರ ಬದುಕಿನ, ಚಿಂತನೆ, ಚೈತನ್ಯ, ಬರಹಗಳ ಸ್ಫೂರ್ತಿಯಂತೆಯೂ ಗಾಂಧಿ ಮತ್ತು ಲೋಹಿಯಾ ಕಾಣಿಸುತ್ತಾರೆ. ಇಲ್ಲಿಯೂ ಮತ್ತೆ ದ್ವಂದ್ವಗಳಿರುವುದನ್ನು ಗುರುತಿಸಬಹುದು. ಗಾಂಧೀ ಮತ್ತು ಲೋಹಿಯಾ ಅವರು ಬದುಕಿದ ಕ್ರಮಕ್ಕೂ ಲಂಕೇಶ್ ಬದುಕಿದ ಕ್ರಮಕ್ಕೂ ತಾಳಮೇಳ ಇಲ್ಲದಿರುವುದು ಈ ದ್ವಂದ್ವವನ್ನು ಸ್ಪಷ್ಟವಾಗಿ ಕಾಣಿಸುತ್ತದೆ. ಸದಾ ಉರಿಯುತ್ತಿದ್ದ ಲಂಕೇಶ್ ಅವರ ಆಕ್ರೋಶ, ತಹತಹ, ಹಂಬಲ, ಪ್ರತಿಭಾವಂತ ಸ್ಪಂದನ ಮತ್ತು ಅವರ ಒಟ್ಟಾರೆಯ ಕಾಳಜಿ ಸಾಚಾ ಆಗಿದ್ದವು. ಹಾಗೆಯೇ ಲಂಕೇಶ್ ಅವರ ಬದುಕಿನಲ್ಲಿ ಹೆಚ್ಚು ಮುಚ್ಚು ಮರೆ

ಇರಲಿಲ್ಲ ಎಂಬುದನ್ನೂ ಈ ಟೀಕೆ ಟಿಪ್ಪಣಿಯ ಬರಹಗಳು ತೋರಿಸಿಕೊಡುತ್ತವೆ.

ತಮ್ಮ ಈ ಹಂಬಲಕ್ಕಾಗಿ ಮನುಷ್ಯನನ್ನೇ ಕೇಂದ್ರವನ್ನಾಗಿ ಮಾಡಿಕೊಂಡು, ಸುತ್ತಲಿನ ಬದುಕನ್ನು ಈ ಕೇಂದ್ರದ ಸುತ್ತಲಿನ ಆವರಣ ಮಾಡಿಕೊಂಡು ಬರೆದ, ಚಿಂತಿಸಿದ ವ್ಯಕ್ತಿ ಲಂಕೇಶ್. ಈ ಕಾರಣದಿಂದಾಗಿ ಅವರ ಬರವಣಿಗೆ ಗಾಳಿಯಲ್ಲಿ ಹರಿದಾಡುವ ವಿಚಾರವಾಗಿ ಕಾಣಿಸುವುದಿಲ್ಲ ; ಕಾಲ್ಪನಿಕ ಅಥವಾ ಆದರ್ಶ ಜಗತ್ತಿನ ಸಂಗತಿಯಾಗಿಯೂ ತೋರುವುದಿಲ್ಲ. ನೆಲಕ್ಕೆ ಕಾಲೂರಿ, ಆಕಾಶಕ್ಕೆ ಮುಖ ಮಾಡಿ ಚಿಂತಿಸಿದವನ, ಕನಸಿದವನ ಗತ್ತು ಇಲ್ಲಿ ಕಂಡರೆ ಅದು ಅಸಹಜವೇನಲ್ಲ.

ಈ ಬರಹಗಳಿಗೆ ಲಂಕೇಶ್, 'ಇವತ್ತಿನ ಭಾಷೆ'ಯನ್ನು ರೂಪಿಸಿಕೊಂಡ ಬಗೆಯೂ ಇದೇ ಮಾದರಿಯದು, ನೆಲ ಮತ್ತು ಮನುಷ್ಯನನ್ನು ಮುಖ್ಯ ಕೇಂದ್ರ ಮಾಡಿಕೊಂಡ ಲಂಕೇಶರ ಬರವಣಿಗೆ 'ಓದುಗರ ಆಸಕ್ತಿ'ಯನ್ನು ಬಿಟ್ಟುಕೊಟ್ಟು ಮುಂದುವರಿಯುವುದು ಸಾಧ್ಯವಾಗದ ಮಾತು. ಈ ಭಾಷೆ ಮತ್ತು ಓದುಗರ ಆಸಕ್ತಿ ಲಂಕೇಶ್ ಬರವಣಿಗೆಯ ಮುಖ್ಯ ಧಾತುವಾಗಿಯೂ ಕಾಣಿಸುತ್ತದೆ. ಇವತ್ತಿನ ಭಾಷೆ ಎನ್ನುವುದು ಭಾಷೆ ಮತ್ತು ಶೈಲಿಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ ಎಂಬುದು ಲಂಕೇಶರ ಬರವಣಿಗೆಯನ್ನು ಗಮನಿಸಿದರೆ ಅರ್ಥವಾಗುತ್ತದೆ. ಇವತ್ತಿನ ಕಾಲಮಾನ, ಇವತ್ತಿನ ಸನ್ನಿವೇಶಗಳು, ಇವತ್ತಿನ ಒತ್ತಡಗಳು, ಇವತ್ತಿನ ಜನ ಮತ್ತು ಅವರ ಸುತ್ತ ಹೆಣೆದುಕೊಂಡಿರುವ ಕಾಲಕೋಶ, ಇವತ್ತಿನ ಧರ್ಮ, ರಾಜಕೀಯ, ಅರ್ಥ ವ್ಯವಸ್ಥೆ ಇವತ್ತಿನ ಚಿಂತನಾ ಕ್ರಮ ಹೀಗೆ ಇವೆಲ್ಲವನ್ನು ಇವತ್ತಿನ ಬಾಷೆ ಒಳಗೊಳ್ಳುತ್ತದೆ. ಲಂಕೇಶ್ ಅವರ ಟೀಕೆ ಟಿಪ್ಪಣಿಯ ಯಾವುದೇ ಬರಹವನ್ನು ಕೈಗೆತ್ತಿಕೊಂಡರೂ, ಈ ಎಲ್ಲ ಅಂಶಗಳೂ ಒಂದಲ್ಲ ಒಂದು ರೀತಿಯಲ್ಲಿ ಮುಖ್ಯ ಎಳೆಗಳೊಂದಿಗೆ ಹೆಣೆದುಕೊಂಡಿರುವುದನ್ನು ಗುರುತಿಸಬಹುದು.

ಓದುಗರ ಆಸಕ್ತಿಯನ್ನು ಲಂಕೇಶ್ ಎಂದೂ ಕಡೆಗಣಿಸಿದವರಲ್ಲ. ಪತ್ರಿಕೆಯ ಒಡೆಯ ಮತ್ತು ಸಂಪಾದಕ ಎರಡೂ ಹುದ್ದೆಗಳನ್ನು ನಿಭಾಯಿಸಿದ್ದು ಮತ್ತು ಬದುಕುವುದಕ್ಕೆ ಪತ್ರಿಕೆಯನ್ನೇ ಆಶ್ರಯಿಸಿದ್ದು ಇದಕ್ಕೆ ಮುಖ್ಯ ಕಾರಣವಾಗಿಯೂ ಇರಬಹುದು. ತಮ್ಮ ಯಾವ ಬರವಣಿಗೆಯೂ ಓದುವವರಿಗೆ ಭಾರವಾಗದಂತೆ ಲಂಕೇಶ್ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು, ಇದರ ಹಿಂದೆ ಪತ್ರಿಕೆಯನ್ನು ಮಾರಾಟ ಮಾಡಬೇಕಾದ ಒತ್ತಡವೂ ಕೆಲಸ ಮಾಡಿರಬಹುದು. ನನ್ನ ಪತ್ರಿಕೆ ಬಾವಲಿಯಂತೆ ಅಂಗಡಿಗಳಲ್ಲಿ ನೇತಾಡಬಾರದು ಎಂಬ ಎಚ್ಚರವಂತೂ ಅವರಿಗೆ ಸದಾ ಇದ್ದೇ ಇತ್ತು. ಅತ್ಯಂತ ಗಹನ ವಿಚಾರಗಳನ್ನು ಹೇಳುವಾಗ, ತಮ್ಮ ಚಿಂತನೆಯನ್ನು ತುತ್ತತುದಿಗೆ ಕೊಂಡೊಯ್ಯುವಾಗ, ಬೇರೊಂದು ಸಂಸ್ಕೃತಿಯ ವಿಚಾರಗಳನ್ನು ಕನ್ನಡಕ್ಕೆ ತಂದಾಗ ಹೀಗೆ ಯಾವುದೇ ಸಂದರ್ಭವಾದರೂ ಲಂಕೇಶ್ ಎಂದೂ ಭಾಷೆಯನ್ನು ಭಾರವಾಗಿ, ಶೈಲಿಯನ್ನು ಸಂಕೀರ್ಣವಾಗಿ ಬಳಸಿದವರಲ್ಲ. ಅವರದು ಸರಳ ಬರವಣಿಗೆ ; ಸ್ಫಟಿಕ ಸ್ಪಷ್ಟವಾದ, ಪಾರದರ್ಶಕವಾದ ಬರವಣಿಗೆ. ಹೆಚ್ಚು ಓದು ಬರಹ ಗೊತ್ತಿಲ್ಲದವರೂ ನಿರಾಯಾಸವಾಗಿ ಓದಬಹುದಾದ ಶೈಲಿಯಲ್ಲಿ ಲಂಕೇಶ್ ತಮ್ಮ ಬರಹಗಳನ್ನು ರೂಪಿಸುತ್ತಿದ್ದರು. ಅಷ್ಟೇ ಅಲ್ಲ, ಹೆಚ್ಚು ಬರೆದು ಓದುಗನನ್ನು ಕೊರೆಯಬಾರದು ಎಂಬ ಎಚ್ಚರವನ್ನು ಸದಾ ಇಟ್ಟುಕೊಂಡು ಅದನ್ನು ಪಾಲಿಸುತ್ತಾ ಬಂದವರು. ಇದಕ್ಕೆ ಪತ್ರಿಕೆಯಲ್ಲಿನ ಜಾಗದ ಮಿತಿಯೂ ಮುಖ್ಯ ಕಾರಣ ಆಗಿರಬಹುದು. ಅರ್ಥವನ್ನೇ ಬಿಟ್ಟುಕೊಳ್ಳದ ಜಟಿಲ ಬರವಣಿಗೆ ಲಂಕೇಶ್ ಲೇಖನಿಯಿಂದ ಹೊರಬಂದದ್ದೇ ಅಪರೂಪ ಎನ್ನಬೇಕು. ಇಂಥ ಬರವಣಿಗೆಯನ್ನು ಲಂಕೇಶ್ ಟೀಕಿಸಿರುವುದಕ್ಕೆ ಅವರು ಮಾಡುತ್ತಿದ್ದ ಪುಸ್ತಕ ವಿಮರ್ಶೆಗಳಲ್ಲಿ ಧಾರಾಳವಾಗಿ ಉದಾಹರಣೆಗಳು ಸಿಕ್ಕುತ್ತವೆ. ಇಂಥ ವಾಕ್ಯಗಳನ್ನು ಪಟ್ಟಿ ಮಾಡಿ ಓದುಗರ ಮುಂದಿಡುವ ಮೂಲಕ ಈ ಭಾಷಾಶೈಲಿಯನ್ನು ಅವರು ಖಂಡಿಸುತ್ತಿದ್ದರು.

ಪ್ರತಿವಾರವೂ ಬರೆಯುವ ಒತ್ತಡ ಲಂಕೇಶರ ಮೇಲಿತ್ತು ಎನ್ನುವುದು ನಿಜವಾದರೂ, ಬರೆಯುವುದು ಲಂಕೇಶರಿಗೆ ಒಂದು ಹಿಂಸೆಯ, ರೇಜಿಗೆಯ ಕೆಲಸವಾಗಿರಲಿಲ್ಲ. ಅದು ಸಂತೋಷದ ಕೆಲಸವಾಗಿತ್ತು ; ಬರವಣಿಗೆ ಮಾತ್ರವಲ್ಲ ಎಲ್ಲ ಕೆಲಸಗಳನ್ನೂ ಅತ್ಯಂತ ಶ್ರದ್ಧೆಯಿಂದ, ಆಸಕ್ತಿಯಿಂದ, ಕುತೂಹಲದಿಂದ ಮತ್ತು ಜೀವನೋತ್ಸಾಹದಿಂದ ಮಾಡಬೇಕೆಂಬ ಹಠವೂ ಅವರ ವ್ಯಕ್ತಿತ್ವದಲ್ಲಿ ಸೇರಿಹೋಗಿತ್ತು. ಇದನ್ನು ಅವರೇ ಅನೇಕ ಸಂದರ್ಭಗಳಲ್ಲಿ ಹೇಳಿರುವುದುಂಟು. ಅಲ್ಲದೆ ಈ ಅಂಕಣ ಬರಹವನ್ನು ನೋಡಿದಾಗಲೂ ಇದು ನಿಜ ಎನ್ನಿಸುತ್ತದೆ. ಓದುಗರ ಆಸಕ್ತಿಯನ್ನು ಕೆರಳಿಸುವುದಷ್ಟೇ ಲಂಕೇಶರ ಉದ್ದೇಶವಾಗಿರಲಿಲ್ಲ. ತಮ್ಮೆಲ್ಲ ಅನುಭವವನ್ನು, ಚಿಂತನೆಯನ್ನು ಓದುಗರೊಂದಿಗೆ ಹಂಚಿಕೊಳ್ಳುವುದು ಮತ್ತು ಆ ಮೂಲಕ ತಾನು ಬದುಕುತ್ತಿರುವ ಸಮಾಜವನ್ನು ಸ್ವಚ್ಛಗೊಳಿಸುವುದು. ಬದುಕನ್ನು ಸಹನೀಯಗೊಳಿಸಿದ್ದರೂ ಉಂಟು. ಇದಕ್ಕೆ ಲಂಕೇಶರ ಕಾಳಜಿ. ನಂಬಿಕೆಗಳಂತೆಯೇ ಅವರ ಉದ್ವಿಗ್ನತೆ, ಅಸಹನೆ, ಸದಾ ಉರಿಯುವ ಗುಣ ಮತ್ತು ಸ್ವಯಂ ರತಿಗಳೂ ಕಾರಣ ಎನ್ನುವುದನ್ನು ಮರೆಯುವಂತಿಲ್ಲ.

ಅಂಕಣ ಎಂಬುದೇ ಒಂದು ಸಾರ್ವಜನಿಕ ವೇದಿಕೆ. ಸಾರ್ವಜನಿಕರ ಮುಂದೆ ನಿಂತು ಅಂಕಣಕಾರ ಮಾತನಾಡಬೇಕಾಗುತ್ತದೆ. ತನ್ನ ಓದುಗರು ಸದಾ ಕಣ್ಮುಂದೆ ಇರುವ ಸಂದರ್ಭದಲ್ಲಿಯೇ ಈ ಬರಹ ರೂಪಗೊಳ್ಳಬೇಕಾದ ಮಿತಿ ಮತ್ತು ಅನಿವಾರ್ಯಗಳು ಈ ಅಂಕಣಬರಹಗಾರರಿಗೆ ಇದ್ದೇ ಇರುತ್ತವೆ. ಇವೆಲ್ಲ ಇದ್ದೂ ಲಂಕೇಶರ ಪಾಲಿಗೆ ಈ ವೇದಿಕೆ ಮುಕ್ತ ವೇದಿಕೆ; ಸಾರ್ವಜನಿಕ ವಿಚಾರಗಳನ್ನು ಚರ್ಚಿಸಿದರೂ ಇದು ಅವರ ಖಾಸಗೀ ವೇದಿಕೆ. ಲಂಕೇಶರ ಅಖಾಡ; ಖಾಸಗೀ ಕೋಣೆ. ಸಾರ್ವಜನಿಕವಾಗಿ ಮಾತನಾಡುತ್ತಲೇ ಅದು ಭಾಷಣವಾಗದಂತೆ ನೋಡುಕೊಳ್ಳುವ ಎಚ್ಚರವನ್ನೂ ಅವರು ವಹಿಸುತ್ತಿದ್ದರು. ತಮ್ಮ ಅಂತರಂಗದ ನಿವೇದನೆಗೂ ಈ ವೇದಿಕೆಯನ್ನೇ ಅವರು ಬಳಸಿಕೊಳ್ಳುತ್ತಿದ್ದರು. ಹಾಗೆಯೇ ತಮ್ಮ ವೈರಿಗಳನ್ನು ಬಗ್ಗು ಬಡಿಯುವುದಕ್ಕೂ ಈ ವೇದಿಕೆ ಅವರ ಅಖಾಡವಾಗಿತ್ತು. ಧ್ಯಾನಕ್ಕೆ, ಚಿಂತನೆಗೆ, ಸ್ವಗತಕ್ಕೆ, ಅಷ್ಟೇಕೆ ಒಂದು ಬಗೆಯ ಮೌನಕ್ಕೂ ಈ ವೇದಿಕೆಯನ್ನೇ ಅವರು ಬಳಸುತ್ತಿದ್ದರು. ಹೀಗಾಗಿಯೇ ಇದು ವಿಶಿಷ್ಟ ಅಂಕಣ ; ಈ ಬರವಣಿಗೆ ವಿಭಿನ್ನ, ವಿಶಿಷ್ಟ ಮಾದರಿಯ ಬರವಣಿಗೆ.

ಇದೊಂದು ಅಂಕಣವಾದ ಕಾರಣ, ಎಲ್ಲ ಸಂಗತಿಗಳ ಬಗ್ಗೆ ಲಂಕೇಶರು ಇಲ್ಲಿ ಬರೆಯಬೇಕಾದದ್ದು ಅನಿವಾರ್ಯವಾಗಿತ್ತು. ಇಂಥ ಬರಹಗಳಿಗೆ ಸಹಜವಾಗಿಯೇ ಇರುವ ಸಾರ್ವತ್ರಿಕ ಗುಣವನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ವೈಯಕ್ತಿಕ ಧ್ವನಿಯನ್ನು ಸ್ಥಾಪಿಸಿಕೊಂಡದ್ದು ಈ ಬರವಣಿಗೆ, ಹೀಗಾಗಿಯೇ ಇದು ಸಾರ್ವಜನಿಕ ವಿಷಯಗಳನ್ನು ಕೈಗೆತ್ತಿಕೊಂಡಾಗಲೂ ವೈಯಕ್ತಿಕವಾದ ಧಾಟಿಯಲ್ಲಿ ಆಪ್ತವಾಗಿ ಮಾತನಾಡಬಲ್ಲ, ಹೃದಯಗಳ ಜೊತೆ ಸಂವಾದಿಸಬಲ್ಲ , ವ್ಯಕ್ತಿಯ ಅಂತರಂಗದ ಮೌನವನ್ನು ಕಲಕದೆಯೇ ಅವನ ಒಳಗಿನ ತಳಮಳವನ್ನು ಹೆಚ್ಚು ಮಾಡುವಂಥ ಬರವಣಿಗೆ. ಕರ್ನಾಟಕವನ್ನು, ಅಥವಾ ಭಾರತವನ್ನು ಹೀನಾಯ ಸ್ಥಿತಿಗೆ ಕೊಂಡೊಯ್ಯಬಲ್ಲ ಇವತ್ತಿನ ರಾಜಕಾರಣದ ಬಗ್ಗೆ ಬರೆಯುವುದರಲ್ಲಾಗಲೀ ಅಥವಾ ಡಾಲಿ ಮತ್ತು ಅಮುಂಡಾರ ವೈಯಕ್ತಿಕ ಪ್ರಪಂಚದ ವಿವರಗಳನ್ನು ನೀಡುವ ಸಂದರ್ಭದರಲ್ಲಾಗಲೀ, ಹೆಮ್ಮಿಂಗ್ವೇಯ ಅಂತರಂಗ ಕ್ಷೋಭೆಯನ್ನು ವರ್ಣಿಸುವ ಸಂದರ್ಭದಲ್ಲಾಗಲೀ ತನ್ನ ಈ ವೈಯಕ್ತಿಕ ಛಾಪನ್ನು ಬಿಟ್ಟುಕೊಡದ ಮಾದರಿ ಈ ಅಂಕಣ ಬರಹ, ವೈಯಕ್ತಿಕ ಸ್ಪರ್ಶವಿಲ್ಲದೆ ಲಂಕೇಶರು ಬರೆದದ್ದು ತೀರ ಕಡಿಮೆ ಅಥವಾ ಇಲ್ಲವೇ ಇಲ್ಲ ಎಂದರೂ ಆಗುತ್ತದೆ. ಲಂಕೇಶರ ವೈಯಕ್ತಿಕ ಸ್ಪರ್ಶವೇ ಈ ಅಂಕಣದ ಜೀವಾಳ. ಓದುಗರನ್ನು ಸೆಳೆದುಕೊಳ್ಳುವ ಮತ್ತು ಅವರ ಅಂತರಂಗದ ಆಳಕ್ಕೆ ಇಳಿಯುವ ಶಕ್ತಿಯೇ ಈ ಸ್ಪರ್ಶ. ಈ ಸ್ಪರ್ಶವನ್ನು ಲಂಕೇಶರು ತಾವು ಬರೆದಷ್ಟೂ ಕಾಲ ಬೆಚ್ಚಗೆ ಮತ್ತು ಜೀವಂತವಾಗಿ ಉಳಿಸಿಕೊಂಡಿದ್ದರು ಎಂಬುದು ಈ ಬರಹಕ್ಕೆ

ಕನ್ನಡದಲ್ಲಿ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಇಂಗ್ಲೀಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದ ಮತ್ತು ಅಧ್ಯಾಪಕರಾಗಿ ಇಂಗ್ಲೀಷ್ ಸಾಹಿತ್ಯವನ್ನು ಬೋಧಿಸಿದ್ದ ಲಂಕೇಶರಿಗೆ ಇಂಗ್ಲೀಷ್ ಸಾಹಿತ್ಯದ ಆಳವಾದ ತಿಳುವಳಿಕೆ ಇತ್ತು ; ಜತೆಗೆ ಜಗತ್ತಿನ ಹಲವು ವಿದ್ಯಮಾನಗಳನ್ನು ಇಂಗ್ಲೀಷ್ ಭಾಷೆಯ ಮೂಲಕವೇ ಲಂಕೇಶ್ ತಿಳಿಯಬೇಕಾಗಿತ್ತು, ಇಷ್ಟಾದರೂ ತನ್ನ ಓದುಗರು ಕನ್ನಡದವರು. ಈ ನೆಲದ ಮಕ್ಕಳು, ಈ ಸಂಸ್ಕೃತಿಯ ರಕ್ತ ಮಾಂಸಗಳನ್ನು ತುಂಬಿಕೊಂಡವರು ಎಂಬ ಎಚ್ಚರ ಲಂಕೇಶ್ ಅವರಿಗೆ ಸದಾ ಇತ್ತು. ಹೀಗಾಗಿಯೇ ಅವರ ಬೆಳವಣಿಗೆ ಎಂದೂ ಹೊರಗಿನ ಸರಕಾಗಿ ಕಾಣಲೇ ಇಲ್ಲ.

ಲಂಕೇಶರ ಈ ಅಂಕಣ ಕನ್ನಡಕ್ಕೆ, ವಿಶೇಷವಾಗಿ ಕನ್ನಡ ಪತ್ರಿಕೋದ್ಯಮಕ್ಕೆ ತೀರ ಭಿನ್ನವಾದದ್ದು ; ವಿಶಿಷ್ಟವಾದದ್ದು. ಒಂದರ್ಥದ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮುರಿದದ್ದು, ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಿದ್ದು , ಸತ್ತವರ ಬಗೆಗೆ ಶ್ರದ್ಧಾಂಜಲಿಯ ಸ್ವರೂಪದಲ್ಲಿ ಬಹುಪಾಲು ಪತ್ರಿಕೆಗಳು ಪ್ರಕಟಿಸುವ ಬರಹಗಳನ್ನು ಲಂಕೇಶ್ ಪ್ರಕಟಿಸುತ್ತಿದ್ದ ಇದೇ ಸನ್ನಿವೇಶದ ಬರಹಗಳ ಜೊತೆ ಹೋಲಿಸಿದರೆ ಲಂಕೇಶ್ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮುರಿದದ್ದು ಹೇಗೆ ಎಂಬುದು ತಿಳಿಯುತ್ತದೆ. ಇವರು ಇನ್ನಿಲ್ಲವಾದರೂ ಎಂಬ ಕಾರಣವನ್ನೇ ಪ್ರಧಾನವಾಗಿಟ್ಟುಕೊಂಡು ವ್ಯಕ್ತಿಯನ್ನು ವೈಭವೀಕರಿಸುವುದು, ಒಳ್ಳೆಯ ಅಂಶಗಳನ್ನೇ ಹೇಳಿ ನಿಜವಾದ ವ್ಯಕ್ತಿತ್ವದ ಮೇಲೆ ಮುಸುಕೆಳೆಯುವುದು ಇತ್ಯಾದಿ ಕೆಲಸಗಳನ್ನು ಲಂಕೇಶ್ ಎಂದೂ ಮಾಡಲಿಲ್ಲ ಎಂಬುದನ್ನು ಅವರ ಬರಹಗಳು ತೋರಿಸುತ್ತವೆ. ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಲಂಕೇಶ್ ಬರೆದ ಬರಹವನ್ನು ಮತ್ತು ಮಾಸ್ತಿ ಇನ್ನಿಲ್ಲವಾದಾಗ ಲಂಕೇಶ್ ಬರೆದ ಬರಹವನ್ನೂ ಪಕ್ಕಪಕ್ಕದಲ್ಲಿಟ್ಟು ನೋಡಿದರೂ (ಟೀಕೆ-ಟಿಪ್ಪಣಿಯ ಮೊದಲ ಸಂಪುಟದಲ್ಲಿ ಇವು ಪಕ್ಕಪಕ್ಕದಲ್ಲೇ ಮುದ್ರಣಗೊಂಡಿವೆ) ಈ ಅಂಶ ಸ್ಪಷ್ಟವಾಗುತ್ತದೆ. ಶ್ರೀರಂಗ, ಶಿವರಾಮ ಕಾರಂತ, ರಾಶಿ, ಕುವೆಂಪು, ತ.ರಾ.ಸು., ಶ್ರೀ ಕೃಷ್ಣ ಆಲನಹಳ್ಳಿ , ಎ.ಕೆ. ರಾಮಾನುಜನ್, ಮಾಸ್ತಿ ಇವರುಗಳು ತೀರಿಕೊಂಡಾಗ ಲಂಕೇಶ್ ಬರೆದ ಬರಹಗಳು ಈ ಸಾಹಿತಿಗಳ ಒಟ್ಟೂ ವ್ಯಕ್ತಿತ್ವದ, ಸಾಹಿತ್ಯ ಕೊಡುಗೆಯ ನಿಷ್ಠುರ ವಿಶ್ಲೇಷಣೆಗಳು ; ಹಾಗೆಯೇ ಕನ್ನಡ ಸಾಹಿತ್ಯದ ಮೌಲ್ಯಮಾಪನ ಮಾಡುವ ಬರಹಗಳೂ ಹೌದು. ಚರಣ್‌ಸಿಂಗ್, ಜಗಜೀವನ ರಾಮ್. ಕಲ್ಲಣ್ಣನವರ್ ಮೊದಲಾದ ರಾಜಕಾರಣಿಗಳ ಬಗೆಗಿನ ಬರಹಗಳು ಆ ಕಾಲದ ರಾಜಕೀಯ ವಿಶ್ಲೇಷಣೆಯೂಗಿರುವಂತೆಯೂ ಆ ರಾಜಕೀಯ ಸನ್ನಿವೇಶದಲ್ಲಿ ಈ ವ್ಯಕ್ತಿಗಳು ಮೂಡಿಬಂದ ರೀತಿಯನ್ನು ಅಚ್ಚುಕಟ್ಟಾಗಿ ನೀಡುತ್ತವೆ. ಎಂ.ಜಿ.ಆರ್. ಪುಟ್ಟಣ್ಣ ಕಣಗಾಲ್, ರಾಜ್ ಕಪೂರ್ ಮೊದಲಾದವರು ತೀರಿಕೊಂಡಾಗಿನ ಬರಹಗಳು ನಮ್ಮ ಸಿನಿಮಾ ಜಗತ್ತಿನ ಅತ್ಯುತ್ತಮ ವಿಶ್ಲೇಷಣೆಯಾಗಿಯೂ ಕಾಣುತ್ತವೆ.

ಇಪ್ಪತ್ತು ವರ್ಷಗಳ ಕಾಲ ಈ ಅಂಕಣವನ್ನು ನಡೆಸಿಕೊಂಡು ಬಂದ ಲಂಕೇಶರು ಟೀಕೆ-ಟಿಪ್ಪಣಿಯಲ್ಲಿ ಸಾವಿರಾರು ಪುಟಗಳನ್ನು ಬರೆದಿದ್ದಾರೆ ಎಂಬುದೇ ಸೋಜಿಗ ಹುಟ್ಟಿಸುವ ಸಂಗತಿ. ಈ ಪುಟಗಳಲ್ಲಿ ಆಯ್ಕೆಮಾಡಿದ ಬರಹಗಳು ಟೀಕೆ-ಟಿಪ್ಪಣಿಯ ಮೂರು ಸಂಪುಟಗಳಲ್ಲಿವೆ. ಮೊದಲ ಸಂಪುಟವೇ ಸುಮಾರು 670 ಪುಟಗಳಿಗೆ ವಿಸ್ತರಿಸಿದೆ. ಎರಡನೇ ಸಂಪುಟ 500 ಪುಟದ ಹತ್ತಿರ ಹತ್ತಿರ. ಮೂರನೆಯ ಸಂಪುಟವೂ ಇಷ್ಟೇ ಗಾತ್ರವೋ ಅಥವಾ ಇದಕ್ಕಿಂತ ಹೆಚ್ಚೂ ಆಗಬಹುದು. ಅದಿನ್ನೂ ಪ್ರಕಟವಾಗಬೇಕಾಗಿದೆ. ಮೊದಲನೆ ಸಂಪುಟ 1980ರ ದಶಕದಲ್ಲಿ ಬರೆದ ಒಂದು ದಶಕದ ಬರವಣಿಗೆಯ ಮುಖ್ಯ ಲೇಖನಗಳನ್ನು ಒಳಗೊಂಡಿದೆ. ಎರಡನೆಯ ಸಂಪುಟದಲ್ಲಿ ಕೇವಲ ಐದು ವರ್ಷಗಳ ಕಾಲಾವಧಿಯ ಬರಹಗಳಿವೆ. ಮೂರನೆಯ ಸಂಪುಟ ಮುಂದಿನ ಐದು ವರ್ಷಗಳ ಬರವಣಿಗೆಯನ್ನು ಒಳಗೊಳ್ಳಬಹುದು. ಒಂದೂವರೆ ಸಾವಿರ ಪುಟಗಳಿಗೂ ಹೆಚ್ಚು ವಿಸ್ತಾರಕ್ಕೆ ಹಿಗ್ಗಿದ ಈ ಬರವಣಿಗೆ ಕನ್ನಡ ಜಾಣಜಾಣೆಯರನ್ನು ಎರಡು ದಶಕಗಳ ಕಾಲ ಹಲ ಬಗೆಯಲಿ ಸ್ಪರ್ಶಿಸಿದ್ದು

ಲಂಕೇಶರ ಬರಹದ ಸಾಮರ್ಥ್ಯದಿಂದಾಯೇ.

ಈ ಟೀಕೆ-ಟಿಪ್ಪಣಿ ಎರಡು ದಶಕಗಳ ಈ ಕಾಲಾವಧಿಯ ಬರವಣಿಗೆ : ಹಾಗೆಯೇ ಸುತ್ತಲಿನ ಬದುಕನ್ನೇ ಆಧರಿಸಿದ ಬರವಣಿಗೆಯೂ ಹೌದು. ಈ ಕಾರಣಗಳಿಂದಾಗಿ ಇದು ಈ ಕಾಲಾವಧಿಯ ಚಾರಿತ್ರಿಕ ದಾಖಲೆಯೂ ಆಗುತ್ತದೆ. ನಲ್ಲೂರಿನ (ಚನ್ನಗಿರಿ ತಾಲ್ಲೂಕು) ಕೋಮು ದಳ್ಳುರಿಯ ವರದಿಯಿಂದ ಹಿಡಿದು (ಮುಖ್ಯಮಂತ್ರಿ) ಅಯೋಧ್ಯೆಯ ಬಾಬ್ರಿ ಮಸೀದಿಯ ನೆಲಸಮದವರೆಗೆ, ಗುಂಡೂರಾಯರ ಬೀಳ್ಕೊಡುಗೆಯಿಂದ ಹಿಡಿದು ರೇಗನ್ ರಾಜಕೀಯದವರೆಗೆ, ಬಜೆಟ್‌ನಿಂದ ಹಿಡಿದು ಸತಿಯವರೆಗೆ, ಗಡ್ಡದ ಶಾಮಣ್ಣನವರಿಂದ ಹಿಡಿದು ಗಡ್ಡಾಫಿಯವರೆಗೆ ವಿವಿಧ ವಿಷಯಗಳಿಗೆ ಲಂಕೇಶ್ ಸ್ಪಂದಿಸಿದ ರೀತಿ ಇಲ್ಲಿದೆ.

ಟೀಕೆ-ಟಿಪ್ಪಣಿ ಯ ಮೊದಲ ಸಂಪುಟ 1980ರ ದಶಕದ ಒಂದು ಅಪೂರ್ವವಾದ ದಾಖಲೆ, ಪ್ರತಿವಾರವೂ ತನ್ನ ಸುತ್ತಲಿನ ವಿದ್ಯಮಾನಗಳ ಬಗ್ಗೆ ಲಂಕೇಶ್ ಬರೆದ ಈ ಎಲ್ಲ ಬರಹಗಳನ್ನು ಒಂದೆಡೆ ಸಂಕಲಿಸಿ ನೋಡಿದಾಗ 80ರ ದಶಕದ ಎಲ್ಲ ವಿದ್ಯಮಾನಗಳೂ ಇಲ್ಲಿ ಅನಾವರಣಗೊಂಡಂತೆ ಕಾಣಿಸುತ್ತದೆ, ಇಲ್ಲಿ ಸಾಹಿತ್ಯ, ರಾಜಕೀಯ, ಸಿನೆಮಾ, ಸಂಸ್ಕೃತಿಯ ಹಲವು ಸಂಗತಿಗಳು, ಸಾಮಾಜಿಕ ಸಂಗತಿಗಳು, ಆರ್ಥಿಕ ಬಿಕ್ಕಟ್ಟುಗಳು, ಮೀಸಲಾತಿಯ ಆಂದೋಲನಗಳು, ರೈತ-ದಲಿತ ಚಳವಳಿಗಳು, ಕರ್ನಾಟಕದ ವಿವಿಧ ವಿದ್ಯಮಾನಗಳು, ಕೋಮು ಗಲಭೆಗಳು ಹೀಗೆ ಸಮಗ್ರ ಬದುಕಿನ ವಿವಿಧ ಮುಖಗಳನ್ನು ದಾಖಲಿಸಲಾಗಿದೆ. ಈ ದಾಖಲೆಗಳು ಅಂಕಿ ಅಂಶಗಳನ್ನು, ವಿವರಗಳನ್ನು ನೀಡುವ ದಾಖಲೆಗಳಲ್ಲ, ವಿಮರ್ಶೆ, ಅವಲೋಕನ, ವಿಶ್ಲೇಷಣೆ, ಮೌಲ್ಯ, ವಿವೇಚನೆ, ವೈಯಕ್ತಿಕ ಪ್ರತಿಕ್ರಿಯೆ ಹೀಗೆ ಎಲ್ಲವೂ ಮಿಶ್ರಣಗೊಂಡ ಈ ದಾಖಲೆ ವೈಯಕ್ತಿಕ ಸ್ಪರ್ಶದಿಂದ ಅರಳಿದ ದಾಖಲೆ ; ಒಂದು ಸಣ್ಣ ಸಂದರ್ಭ ಕಾರಣವಾಗಿ ಹೃದಯಕ್ಕೆ ಮುಟ್ಟಬಲ್ಲ ಅನೇಕ ಅಂಶಗಳನ್ನು, ಅನುಭವಗಳನ್ನು ಈ ದಾಖಲೆಗಳು ನೀಡುತ್ತವೆ.

1. ಮೀಸಲಾತಿಯ ಸುತ್ತ , ಜಿಲ್ಲಾ ಪರಿಷತ್ತುಗಳಿಗೊಂದು ಕಿವಿಮಾತು, ರೈತರು-ರಾಜಕೀಯ ಟಿಪ್ಪಣಿ, ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ, ವೀರೇಂದ್ರ ಎಂಬ ಸಂಪನ್ನನ ಸಿಟ್ಟು, ರಾಜ್ ಕುಮಾರ್‌ಗೆ ಒಂದು ಪತ್ರ, ಡಾ. ರಾಜ್, ಬಂಗಾರಪ್ಪ, ತಿಲಕ್, 86 ರ ಬಜೆಟ್ ಕುರಿತು, ಹೆಗಡೆ ; ಒಂದು ವ್ಯಕ್ತಿ ಚಿತ್ರ, ಎ.ಕೆ. ಸುಬ್ಬಯ್ಯ-ಒಂದು ವ್ಯಕ್ತಿಚಿತ್ರ, ಕವಲು ದಾರಿಯಲ್ಲಿ ದೇವೇಗೌಡ ಇತ್ಯಾದಿ ಬರಹಗಳು ಕರ್ನಾಟಕದ ಸಮಗ್ರ ರಾಜಕೀಯ ಚಟುವಟಿಕೆಗಳ ವಿವರಗಳನ್ನು ನೀಡುತ್ತಲೇ ಆ ಕಾಲಘಟ್ಟದ ರಾಜಕೀಯವನ್ನು, ಸಾಮಾಜಿಕ ಆಂದೋಲನಗಳನ್ನು ಸಮರ್ಥವಾಗಿ ವಿಶ್ಲೇಷಿಸುತ್ತವೆ.

2. ಟೀಕೆ-ಟಿಪ್ಪಣಿ ಎಂದರೆ ಲಂಕೇಶ್ ತಮ್ಮ ಇಡೀ ವ್ಯಕ್ತಿತ್ವನ್ನು ಮತ್ತು ಚೈತನ್ಯವನ್ನು ತೊಡಗಿಸಿ ರೂಪಿಸಿದ ಬರಹ ; ಬೆಚ್ಚನೆಯ ಗುಣವನ್ನು ಪಡೆದುಕೊಂಡದ್ದು, ಹಾಗೆಯೇ ಲಂಕೇಶರ ಎಲ್ಲ ಅನಿಸಿಕೆಗಳನ್ನು, ಸ್ಪಂದನಗಳನ್ನು ದಾಖಲಿಸಿದ ಅಂಕಣವೂ ಇದೇ, ಇಲ್ಲಿ ಲಂಕೇಶರ ಮನಸ್ಸಿನ ಎಲ್ಲ ಚಲನೆಗಳೂ, ಏರಿಳಿತಗಳೂ ದಾಖಲಾಗಿವೆ, ಅವರ ಬದುಕಿನ ಎಲ್ಲ ಚಟುವಟಿಕೆಗಳು, ಅವರ ದೈನಂದಿನ ಕ್ರಿಯೆಗಳು ಇಲ್ಲಿ ದಾಖಲಾಗಿವೆ. ಅವರು ಚಿಂತಿಸಿರುವ ಪರಿ ಇಲ್ಲಿ ಕಾಣಿಸುತ್ತದೆ. ಸಂತೋಷಿಸಿದ್ದು, ಓದಿದ್ದು, ವಾಚನ ಮಾಡಿದ್ದು, ಗೆಳೆಯರೊಂದಿಗೆ ಹರಟಿದ್ದು, ಇಸ್ಪೀಟು, ಕುದುರೆ ಜೂಜು, ಗೆಲ್ಲುವ ಸೋಲುವ ಕುದುರೆಗಳ ಬಗ್ಗೆ ಟಿಪ್ಪಣಿ ತಯಾರಿಸಿದ್ದು, ಬೆಳಗ್ಗೆ ವಾಕ್ ಮಾಡಿದ್ದು, ಒಂದು ದಿನವನ್ನು ಸುಮ್ಮನೆ ಕಳೆದದ್ದು, ಮಾತಾಡಿ ದಣಿದದ್ದು, ಮೌನವಾಗಿ ಚಿಂತಿಸಿದ್ದು, ರಾಜಕೀಯದ ಬಗ್ಗೆ ತಲೆಕೆಡಿಸಿಕೊಂಡದ್ದು, ಆರ್ಥಿಕ ಕಗ್ಗಂಟುಗಳನ್ನು ಬಿಡಿಸಲು ಹೆಣಗಿದ್ದು ಹೀಗೆ ಎಲ್ಲವೂ ಇಲ್ಲಿ ಗದ್ಯ ರೂಪ ಪಡೆದಿದೆ. ಒಂದರ್ಥದಲ್ಲಿ ತಮ್ಮನ್ನು ಲಂಕೇಶ್ ಇಡಿಯಾಗಿ ತೆರೆದು ತೋರಿಸಿದ್ದು ಈ ಅಂಕಣದ

ಮೂಲಕವೇ, ಲಂಕೇಶರ ವ್ಯಗ್ರತೆ, ಸಣ್ಣತನಗಳು, ಒಣ ಪ್ರತಿಷ್ಠೆಗಳು, ಭಟ್ಟಂಗಿಗಳ ಮಧ್ಯೆ ಮೈ ಮರೆತ ಮತ್ತು ಎಚ್ಚರಗೊಂಡ ಸ್ಥಿತಿ-ಗತಿಗಳು ಕೂಡಾ ಇಲ್ಲಿ ಕಾಣಿಸುತ್ತವೆ.

3. ಲಂಕೇಶ್ ಅವರ ಆಸಕ್ತಿಯ ಕ್ಷೇತ್ರಗಳು ಅನೇಕ ಎಂದು ಹೇಳಿದರೂ, ಈ ಬರಹಗಳನ್ನು ಅವಲೋಕಿಸಿದರೆ, ಲಂಕೇಶರ ಆಸಕ್ತಿಯ ಮೂರು ಪ್ರಧಾನ ಕ್ಷೇತ್ರಗಳು ಕಾಣಿಸುತ್ತವೆ. ಸಿನೆಮಾ, ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಲಂಕೇಶ್ ಸಮಾನ ಆಸಕ್ತಿ ತೋರಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಚಲನಚಿತ್ರಗಳನ್ನು ಮಾಡುವ ಮೂಲಕ ಲಂಕೇಶರಿಗೆ ಆ ಕ್ಷೇತ್ರದಲ್ಲಿ ಅನುಭವ ಇತ್ತು ಎಂದು ಹೇಳಿದರೂ, ಲಂಕೇಶ್ ಅವರು ಅತ್ಯಂತ ಆಸಕ್ತಿಯಿಂದ ಈ ರಂಗವನ್ನು ಕುರಿತಂತೆ ನಡೆಸಿದ ಅಧ್ಯಯನವೂ ಸಾಕಷ್ಟು ಇತ್ತು ಎಂಬುದನ್ನು ಇಲ್ಲಿನ ಚಿತ್ರರಂಗಕ್ಕೆ ಸಂಬಂಧಿಸಿದ ಅನೇಕ ಬರಹಗಳ ತೋರಿಸುತ್ತವೆ. ಗಾಢ ಆಸಕ್ತಿ ಮತ್ತು ಸೂಕ್ಷ್ಮ ಗ್ರಹಿಕೆ ಚಿತ್ರರಂಗವನ್ನು ತಿಳಿಯಲು ಲಂಕೇಶರಿಗೆ ನೆರವಾಗಿರಬಹುದು. ಮಾಯಾ ದರ್ಪಣದ ಎದುರು. ಆಡ್ರೆಹರ್ಬನ್, ನೂರು ತುಂಬಿದ ಹಾಲಿವುಡ್ ಮೊದಲಾದ ಚಿತ್ರಗಳು ಲಂಕೇಶ್ ಅವರು ಗಳಿಸಿಕೊಂಡಿದ್ದ ಸಿನಿಮಾ ತಿಳುವಳಿಕೆಯನ್ನು ಹೇಳುತ್ತವೆ. ಸಿನಿಮಾ ಮತ್ತು ಸಾಹಿತ್ಯವನ್ನು ಇವರು ಎಷ್ಟು ಸೂಕ್ಷ್ಮವಾಗಿ ಮತ್ತು ಸಮರ್ಥವಾಗಿ ನೋಡಬಲ್ಲರು ಎಂಬುದಕ್ಕೆ ಇಲ್ಲಿನ ಒಂದು ಟಿಪ್ಪಣಿ (ಮಾಯಾ ದರ್ಪಣದ ಎದುರು) ಅತ್ಯುತ್ತಮ ಉದಾಹರಣೆಯನ್ನು ಒದಗಿಸುತ್ತದೆ. ಮಾಸ್ತಿಯವರ ಚಿಕ್ಕವೀರರಾಜೇಂದ್ರ ಕಾದಂಬರಿಯನ್ನು ಶಮಾಜೈದಿ (ಚಿತ್ರಕತೆ) ಮತ್ತು ಎಂ.ಎಸ್.ಸತ್ಯು (ನಿರ್ದೇಶನ) ಸಿನಿಮಾ ಮಾಡಿದಾಗ ಎದ್ದ ವಿವಾದದ ಸಂದರ್ಭದಲ್ಲಿ ಲಂಕೇಶ್ ಈ ಸಿನಿಮಾವನ್ನು ಮೂಲ ಕಾದಂಬರಿಯೊಂದಿಗೆ ಇಟ್ಟು ತೂಗಿ ನೋಡುವ ಪರಿ ಲಂಕೇಶರ ಅಸಾಧಾರಣ ಪ್ರತಿಭೆಯನ್ನು ತೋರಿಸುತ್ತದೆ.

ಸಾಹಿತ್ಯ ಲಂಕೇಶರ ಬಹು ಮುಖ್ಯ ಅಖಾಡಾ, ಸಾಹಿತ್ಯವನ್ನು ಸೂಕ್ಷ್ಮವಾಗಿ ನೋಡುವುದು, ವಿಭಿನ್ನವಾಗಿ ಗ್ರಹಿಸುವುದು, ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಿಸುವುದು ಇತ್ಯಾದಿ ರೀತಿಯಲ್ಲಿ ಸದಾ ಸಾಹಿತ್ಯಕ್ಕೆ ಸ್ಪಂದಿಸುತ್ತಿದ್ದ ಲಂಕೇಶ್ ಈ ಅಂಕಣದಲ್ಲಿ ಸಾಹಿತ್ಯವನ್ನು ಕುರಿತು ಬರೆದಿರುವ ಲೇಖನಗಳು ಅಪರೂಪದ ಒಳನೋಟಗಳನ್ನು ನೀಡುತ್ತವೆ. ಕನ್ನಡ ಗೀತೆಗಳ ಕ್ಯಾಸೆಟ್‌ಗಳನ್ನು ಕೇಳುತ್ತ ಚಿಂತಿಸಿ, ಗುರುತು ಮಾಡಿದ ಸಾಧಾರಣ ಎನ್ನಬಹುದಾದ ಟಿಪ್ಪಣಿಗಳಲ್ಲೂ ಲಂಕೇಶ್ ನಮ್ಮ ಕಾವ್ಯದ ಬಗ್ಗೆ ಎಷ್ಟು ಖಚಿತವಾದ ಮಾತುಗಳನ್ನು ಹೇಳಿದ್ದಾರೆ ! ಅವರ ಚಿಂತೆ... ಬಿಡಿ ಹೂವಾ ಮೂಡಿದಂತೆ, ಎಲ್ಲೋ ಜೋಗಪ್ಪ ನಿನ್ನರಮನೆ ಟಿಪ್ಪಣಿಗಳು ಕ್ಯಾಸೆಟ್ ಕೇಳಿ ಮಾಡಿದ ಟಿಪ್ಪಣಿಗಳು, ಈ ಟಿಪ್ಪಣಿಗಳೂ ಕಾವ್ಯಾಸಕ್ತರು ಅತ್ಯಂತ ಆಸಕ್ತಿಯಿಂದ ಗಮನಿಸಬಹುದಾದ ಟಿಪ್ಪಣಿಗಳು, ಇಲ್ಲಿಯೂ ಲಂಕೇಶರ ಗ್ರಹಿಕೆಯ ವಿಭಿನ್ನ ರೀತಿಯೂ ಕಾಣಿಸುತ್ತದೆ.

ನೆರೂಡನ ಬಗ್ಗೆ ಬರೆದ ಟಿಪ್ಪಣಿಯಲ್ಲಿ ನೆರೂಡನ ಕವಿತೆಗಳನ್ನು ಅನುವಾದಿಸಿ ಕೊಟ್ಟಿರುವುದು, ಜಪಾನಿನ ಹೈಕುಗಳ ಬಗ್ಗೆ ಬರೆಯುತ್ತ ಹೈಕುಗಳನ್ನು ಅನುವಾದಿಸಿರುವುದು ಇವೆಲ್ಲವನ್ನು ಗಮನಿಸದರೆ ಲಂಕೇಶರ ಅನುವಾದದ ಶಕ್ತಿಯೂ ಈ ಅಂಕಣದಲ್ಲಿ ಕಾಣಿಸುತ್ತದೆ. ಕೊಟ್ಟ ಭಾಷೆಗೆ ತಪ್ಪಲಾರೆ... ಎಂಬ ಟಿಪ್ಪಣಿಯಲ್ಲಿ ಅವರು ಗೋವಿನಹಾಡು ಬಗ್ಗೆ ಆಡಿರುವ ಮಾತುಗಳು ಎಷ್ಟೊಂದು ಮಹತ್ವದ ಮಾತುಗಳು, ಕಾವ್ಯ ಸ್ಪರ್ಶ, ಸೇಡ್‌ನ ಅತಾರ್ಕಿಕ ಪ್ರಪಂಚ, ಅಕ್ಷರ ಹೊಸ ಕಾವ್ಯ ತರುಣ ಸಾಹಿತಿಗಳನ್ನು ಕುರಿತು, ನಗೀ ನವಿಲು ಆಡುತ್ತಿತ್ತ , ಶ್ಲೋಕ ಪಟ್ಟದಿಗಳ ನಡುವೆ ಸಂಸ್ಕೃತಿಯ ಕುತ್ತಿಗೆಗೆ ಶತ್ರುವಿನ ಕೈ ಇತ್ಯಾದಿ ಅನೇಕ ಟಿಪ್ಪಣಿಗಳು ಲಂಕೇಶರ ಗಾಢ ಸಾಹಿತ್ಯಾಸಕ್ತಿಯನ್ನು ತೋರುತ್ತದೆ, ಏಟ್ಸ್, ಎಲಿಯಟ್, ಷೇಕ್ಸ್‌ಪಿಯರ್, ಬರ್ನಾರ್ಡ್ ಷಾ, ವಚನಕಾರರು, ಬೇಂದ್ರೆ, ಕುವೆಂಪು, ಕಾರಂತ ಮೊದಲಾದವರ ಬಗ್ಗೆ ಬರೆದ ಟಿಪ್ಪಣಿಗಳು ಲಂಕೇಶರ ಸಾಹಿತ್ಯದ ಆಳವಾದ ಅಧ್ಯಯನ ಮತ್ತು ಗ್ರಹಿಕೆಯ

ಸೂಕ್ಷ್ಮತೆಯನ್ನು ತೋರಿಸುತ್ತದೆ.

ಲಂಕೇಶ್ ಅವರ ವ್ಯಕ್ತಿಚಿತ್ರಗಳು ಅವರ ಬರವಣಿಗೆಯ ವೈಶಿಷ್ಟ್ಯವನ್ನೂ ತೋರಿಸುತ್ತವೆ. ಆಕರ್ಷಕವಾಗಿ, ರೋಚಕವಾಗಿ, ಸಮಗ್ರವಾಗಿ, ಖಚಿತವಾಗಿ, ನಾಟಕೀಯ ತಿರುವುಗಳನ್ನು ನೀಡಿ. ಒಟ್ಟಾರೆ ಜೀವನ ದೃಷ್ಟಿಪ್ರತಿಫಲಿಸುವಂತೆ ಲಂಕೇಶ್ ಬರೆಯುತ್ತಿದ್ದ ರೀತಿ ಮಾದರಿಯಾಗುವಂಥದ್ದು.

ಹೊರ ದೇಶಗಳಲ್ಲಿ ಅಷ್ಟಾಗಿ ಸುತ್ತಾಡದ ಲಂಕೇಶ್ ಜಪಾನ್, ಫ್ರಾನ್ಸ್, ಜರ್ಮನಿ, ಆಸ್ಟ್ರೇಲಿಯಾ ಹೀಗೆ ಬೇರೆ ಬೇರೆಯ ರಾಷ್ಟ್ರಗಳನ್ನು ಕುರಿತು ಬರೆದದ್ದು ಅವರು ಆ ನೆಲದಲ್ಲಿ ನಿಂತು ಮಾತನಾಡುತ್ತಿದ್ದಾರೇನೋ ಎಂಬ ಭಾವನೆಯನ್ನು ಹುಟ್ಟಿಸುತ್ತಿತ್ತು. ಅಲ್ಲಿನ ಮಣ್ಣು, ಹವೆ, ಋತುಮಾನ, ಜನ, ಬಣ್ಣ, ಭಾಷೆ, ರಾಜಕೀಯ ಸಾಹಿತ್ಯ, ಸಿನಿಮಾ ಇತ್ಯಾದಿ ಎಲ್ಲ ಸಂಗತಿಗಳನ್ನೂ, ಇತ್ತೀಚಿನ ಬೆಳವಣಿಗೆಗಳನ್ನೂ ಅಧ್ಯಯನದ ಮೂಲಕ ಖಚಿತವಾಗಿ ತಿಳಿದುಕೊಂಡು ಲಂಕೇಶ್ ಅಧಿಕೃತವಾಗಿ ಬರೆಯುತ್ತಿದ್ದರು.

ಯಾವುದೇ ಬರಹದಲ್ಲೂ ಲಂಕೇಶ್ ಅವರ ಪ್ರಧಾನ ಕಾಳಜಿಗಳು ಎದ್ದು ಕಾಣುತ್ತಿದ್ದವು. ಮನುಷ್ಯನ ಮೂಲಭೂತ ಭಯ, ಆತಂಕ, ನೋವು, ಏಕಾಕಿತನ, ತಹತಹ, ಬದುಕಿನ ಸೆಳೆತ, ತಲ್ಲಣಗಳು, ದ್ವಂದ್ವಗಳು-ಇವೆಲ್ಲ ಲಂಕೇಶರ ಗಾಢ ಚಿಂತನೆಯ ಭಾಗಗಳಾಗಿರುವುದನ್ನು ಇಲ್ಲಿನ ಅನೇಕ ಟಿಪ್ಪಣಿಗಳಲ್ಲಿ ನೋಡಬಹುದಾಗಿದೆ. ಇಂಥ ಚಿಂತನೆಗೆ ತಕ್ಕ ಸಂಗತಿಗಳನ್ನು , ವ್ಯಕ್ತಿ , ವಿಚಾರಗಳನ್ನು, ವಿದ್ಯಮಾನಗಳನ್ನು ಲಂಕೇಶ್ ಆಯ್ದುಕೊಳ್ಳುತ್ತಿದ್ದರು. ಡಾಲಿ ಮತ್ತು ಅಮುಂಡಾ, ಕಲೆಯ ಬದುಕು, ಹೆಮ್ಮಿಂಗ್ವೆ ; ಜೀವನವೆಂಬ ಮಂಜು, ಕೆಂಡ, ಆಡ್ರೆ ಹರ್ಬನ್ ಇತ್ಯಾದಿ ಟಿಪ್ಪಣಿಗಳಲ್ಲಿ ಈ ಚಿಂತನೆ ಇದೆ.

ಬದುಕಿನಲ್ಲಿ ಹೇಗೋ ಬರಹದಲ್ಲೂ ಲಂಕೇಶ್ ವಿಭಿನ್ನವಾಗಿ, ವಿಶಿಷ್ಟವಾಗಿ ಉಳಿದವರು. ಅವರ ಎಲ್ಲ ತಿಕ್ಕಲುತನಗಳನ್ನು, ಪ್ರಬುದ್ಧತೆಯನ್ನು, ಮುಗ್ಧತೆಯನ್ನು, ದ್ವಂದ್ವಗಳನ್ನು, ಉದ್ವಿಗ್ನತೆಯನ್ನು, ಆಕ್ರೋಶವನ್ನು, ಸಂಭ್ರಮ ಮತ್ತು ಸಂಕಷ್ಟಗಳನ್ನು, ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು, ಪ್ರತಿಭೆ ಮತ್ತು ಸೂಕ್ಷ್ಮತೆಗಳನ್ನು ತೋರಿಸುವ ಬರಹ ಇದ್ದರೆ ಅದು ಈ ಟೀಕೆ-ಟಿಪ್ಪಣಿಯೇ. ಅಹಂಕಾರಿಯಂತೆ, ಸರ್ವಾಧಿಕಾರಿಯಂತೆ ಅನೇಕ ಸಂದರ್ಭಗಳಲ್ಲಿ ವರ್ತಿಸುತ್ತಿದ್ದ ಲಂಕೇಶ್ ಶ್ರೇಷ್ಠ ಪ್ರಜಾಪ್ರಭುತ್ವದ ಮೌಲ್ಯಗಳಿಗೆ, ಸಮಾಜವಾದದ ಕನಸುಗಳಿಗೆ ತುಡಿಯುತ್ತಿದ್ದುದು ; ಮಾನವನ ಘನತೆಯ ಬಗ್ಗೆ ಮಾತನಾಡುತ್ತಲೇ ತನಗಾಗದವರನ್ನು ಅನಗತ್ಯವಾಗಿ ಚುಚ್ಚುತ್ತ, ತಿವಿಯುತ್ತ, ಇರಿಯುತ್ತ ತೀರ ಖಾಸಗಿಯಾದ ವ್ಯಕ್ತಿನಿಂದೆಗೆ ಇಳಿಯುತ್ತ ಎಲ್ಲ ಮೌಲ್ಯಗಳನ್ನು ಗಾಳಿಗೆ ತೂರುತ್ತಿದ್ದುದು ; ಗಾಂಧೀಜಿಯ ಬಗ್ಗೆ ಮಾತನಾಡುತ್ತಲೇ ಹಣದ ಬಗ್ಗೆ ತೀವ್ರ ವ್ಯಾಮೋಹಿಯಾದದ್ದು - ಇತ್ಯಾದಿ ಅನೇಕ ಸಂಗತಿಗಳು ಲಂಕೇಶ್ ಬದುಕಿನ ವೈರುಧ್ಯಗಳನ್ನು ದ್ವಂದ್ವಗಳನ್ನು ತೋರಿಸುತ್ತದೆ. ಇವೆಲ್ಲದರ ಮಧ್ಯೆ ನಿಂತು ಲಂಕೇಶ್ ತೀವ್ರವಾಗಿ ತುಡಿಯುತ್ತಿದ್ದರು ; ಧಗಧಗ ಉರಿಯುತ್ತಿದ್ದರು. ಇದರಲ್ಲಿ ಮೋಸ ಇರಲಿಲ್ಲ.

ಸಾಹಿತ್ಯಕ್ಕಿಂತಾ ಬದುಕು ದೊಡ್ಡದು

ಚಿ. ಶ್ರೀನಿವಾಸರಾಜು

ಹಿರಿಯರೇ, ಸ್ನೇಹಿತರೇ, ಹೊಸೂರಿನ ಬಂಧುಗಳೇ,

ನನಗೆ, ಏಳನೆಯ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವವನ್ನು ನೀಡಿದ ಎಲ್ಲರಿಗೂ ನನ್ನ ವಿಶ್ವಾಸ ಪೂರ್ವಕ ಕೃತಜ್ಞತೆಗಳು. ಈ ಸಮ್ಮೇಳನದ ಸೂತ್ರಧಾರಿಗಳೂ, ಮಹಾಪೋಷಕರೂ ಆದ ಪದ್ಮ ಭೂಷಣ ಡಾ|| ಎಚ್. ನರಸಿಂಹಯ್ಯನವರ ಹುಟ್ಟೂರಾದ ಹೊಸೂರನ್ನು ಸಮ್ಮೇಳನದ ಸ್ಥಳವನ್ನಾಗಿ ಆಯ್ಕೆ ಮಾಡಿದ್ದಕ್ಕೆ ನನಗೆ ಸಂತೋಷವಾಗಿದೆ. ಇದರ ಜೊತೆಗೆ ಈ ಸಮ್ಮೇಳನವನ್ನು ಉದ್ಘಾಟನೆ ಮಾಡಿದವರು ನನ್ನ ವಿದ್ಯಾ ಗುರುಗಳಾದ ನಾಡೋಜ ಡಾ|| ಜಿ. ಎಸ್. ಶಿವರುದ್ರಪ್ಪನವರು. ಹೀಗೆ ಮುಪ್ಪುರಿಗೊಂಡ ಸಂತೋಷಕ್ಕೆ ಕಾರಣರಾದ ಎಲ್ಲರಿಗೂ ನನ್ನ ವಿನಯ ಪೂರ್ವಕ ವಂದನೆಗಳು.

ಸಾಮಾನ್ಯವಾಗಿ ಸಮ್ಮೇಳನಾಧ್ಯಕ್ಷರ ಭಾಷಣವೆಂದರೆ ಜಿಲ್ಲೆಯ ಪರಂಪರೆಯನ್ನು, ವಿಶಿಷ್ಟತೆಯನ್ನು ವಿಶೇಷಣಗಳಿಂದ ಪಟ್ಟಿ ಮಾಡುವುದು, ಅನಂತರ ಜಿಲ್ಲೆಗೆ ಆಗಲೇ ಬೇಕಾದ ಕೆಲಸ ಕಾರ್ಯಗಳ ಬಗ್ಗೆ ದೊಡ್ಡ ಪಟ್ಟಿಯನ್ನೇ ಮಾಡುವುದು ವಾಡಿಕೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಅವರು ಬಿಡುಗಡೆ ಮಾಡಿದ ಹೊಸ ಪಥದಲ್ಲಿ ಈ ಎಲ್ಲ ಅಂಶಗಳು ದಾಖಲಾಗಿವೆ. ಆದ್ದರಿಂದ ಹೇಳಿದ್ದನ್ನೇ ಹೇಳುವುದರಲ್ಲಿ ಅರ್ಥವಿಲ್ಲ. ಕೋಲಾರ ಜಿಲ್ಲೆಯ ಸಮಕಾಲೀನ ಅಗತ್ಯಗಳ ಬಗ್ಗೆ ನನ್ನ ಭಾಷಣದಲ್ಲಿ ಪ್ರಸ್ತಾಪಿಸುವುದು ನನ್ನ ಪರಿಯನ್ನು ಮೀರಿದ್ದು ಎಂದು ನನ್ನ ಭಾವನೆ. ನಾನು ಹೇಳಿದ ಮಾತ್ರಕ್ಕೆ ಆಗಬೇಕಾದ ಕೆಲಸಗಳನ್ನು ಯಾರೂ ನಾಳೆಯೆ ಕೈಗೆತ್ತಿಕೊಳ್ಳುವುದಿಲ್ಲ. ನಾನು ಹೇಳಲಿಲ್ಲ ಎಂದ ಮಾತ್ರಕ್ಕೆ ಆಗುವ ಕೆಲಸಗಳನ್ನು ಯಾರೂ ನಿಲ್ಲಿಸುವುದಿಲ್ಲ. ಆದ್ದರಿಂದ ಇದು ನನ್ನ ಕೆಲಸವಲ್ಲ ಎಂದು ನನ್ನ ತಿಳುವಳಿಕೆ.

ಈ ಸಮ್ಮೇಳನವು ಹೊಸೂರು ಗ್ರಾಮದಲ್ಲಿ ನಡೆಯುತ್ತಿರುವುದೇ ಒಂದು ವಿಶೇಷ. ಹಳ್ಳಿಗಳು ಖಾಲಿಯಾಗಿ, ನಗರಗಳು ತುಳುಕುತ್ತಿರುವ ಸಂದರ್ಭದಲ್ಲಿ ಈ ರೀತಿಯ ಸಮ್ಮೇಳನಗಳಿಗೆ ಹೆಚ್ಚಿನ ಪ್ರಾಮುಖ್ಯ ಬರುತ್ತದೆ. ಗಾಂಧೀಜಿಯವರು ಮತ್ತೆ ಮತ್ತೆ ನೆನಪಾಗುತ್ತಾರೆ.

ಕೋಲಾರ ಜಿಲ್ಲೆಯು ಮೊದಲಿನಿಂದಲೂ ಮಳೆಯಿಂದ ವಂಚಿತವಾದ ಮಳೆನೆರಳ ಪ್ರದೇಶ. ಈಗಂತೂ ಇದು ಸಂಕಷ್ಟಗಳ ನಡುವೆ ಹಾದು ಹೋಗುತ್ತಿದೆ. ಈ ಜಿಲ್ಲೆಯ ಅಂತರ್ಜಲದ ಮಟ್ಟ ದಿನದಿನಕ್ಕೆ ಕುಸಿಯುತ್ತಿದೆ. ಕೆರೆಗಳು ಕಾಣೆಯಾಗುತ್ತಿವೆ. ಚಿನ್ನದ ಗಣಿ ಖಾಲಿಯಾಗಿ ನೌಕರರು ನಿರುದ್ಯೋಗದಿಂದ ನೆಲ ಕಚ್ಚಿದ್ದಾರೆ. ಸ್ಥಳೀಯ ರೇಷ್ಮೆಯು ಆಮದು ರೇಷ್ಮೆಯಿಂದ ದೊಡ್ಡ ಸವಾಲನ್ನು ಎದುರಿಸುತ್ತಿದೆ. ಚಿಕ್ಕ ರೈತರು ತಮ್ಮ ಬೆವರಿನ ಫಲವಾದ ಬೆಳೆಗಳಿಗೆ ಸರಿಯಾದ ಬೆಲೆಗಳಿಲ್ಲದೇ ಕಂಗಾಲಾಗಿದ್ದಾರೆ. ಜೊತೆಗೆ ಕಂಬಾಲ ಪಲ್ಲಿಯಲ್ಲಿ ನಡೆದಂತಹ ಘಟನೆಗಳು ನಾವೆಲ್ಲರೂ ತಲೆ ತಗ್ಗಿಸುವಂತೆ ಮಾಡಿವೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವು ನಮ್ಮ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಕಂಡುಕೊಳ್ಳಬೇಕಾಗಿದೆ.

ನಮ್ಮ ಮುಂದಿನ ಕಾರ್ಯ :

ಜಾಗತೀಕರಣವೆಂಬ ಅದೃಶ್ಯ ರಕ್ಕಸ ಇಡೀ ಸಮುದಾಯವನ್ನು ತನ್ನ ಹಿಡಿತಕ್ಕೆ ತಂದುಕೊಳ್ಳುತ್ತಿದ್ದಾನೆ. ಇದು ಪರೋಕ್ಷ ದಾಸ್ಯವೋ ಅಥವಾ ನಮ್ಮೊಳಗಿನ ನ್ಯೂನತೆಯೋ ಎಂಬ ಗೊಂದಲದಲ್ಲಿದ್ದೇವೆ. ಇದು ನಮ್ಮ ದೈನಂದಿನ ಬದುಕನ್ನು ಮತ್ತು ಸೃಜನಶೀಲ ಒಸುಕನ್ನು

ಆವರಿಸುತ್ತಿದೆ. ನಮ್ಮಲ್ಲಿನ ಸಾಂಸ್ಕೃತಿಕ ಅಜ್ಞಾನ, ಅದೃಶ್ಯ ಸಾಮ್ರಾಜ್ಯ ಶಾಹಿ ವಿಸ್ತರಣೆ ಮತ್ತು ಮೂಲಭೂತವಾದವು ತಲೆ ಎತ್ತುತ್ತಿರುವುದು ಒಂದಕ್ಕೊಂದು ಪೂರಕವಾಗಿವೆ. ಈ ಎಲ್ಲವನ್ನೂ ಕುರಿತು ಮಾತನಾಡುತ್ತಲೇ ಆ ಮೋಹಿನಿಗೆ ಮರುಳಾಗಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಬುನಾದಿಯನ್ನು ಭದ್ರಪಡಿಸಿಕೊಳ್ಳುವುದರ ಜೊತೆಗೆ, ಸಾಂಸ್ಕೃತಿಕ ಕ್ರಿಯಾಶೀಲತೆಯಲ್ಲಿ ನವ ಚೈತನ್ಯವನ್ನು ಕಂಡುಕೊಳ್ಳಬೇಕಾಗಿದೆ. ಅಂದರೆ ನಮ್ಮ ದೈನಂದಿನ ಬದುಕಿನಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ಎಚ್ಚರವನ್ನು ಪಡೆದುಕೊಳ್ಳುವುದು. ಈ ರೀತಿಯ ಅರಿವು ಮೂಡಲು ಒಂದೆರೆಡು ತೊಡಕುಗಳಿವೆ. ಬದಲಾಗುತ್ತಿರುವ ವ್ಯಕ್ತಿ ಸಂಬಂಧಗಳು ಮತ್ತು ಗ್ರಾಹಕ ಸಂಸ್ಕೃತಿಯಿಂದ ಉಂಟಾಗಿರುವ ಪಲ್ಲಟ.

ಇಂದಿನ ಮನುಷ್ಯನು ಸ್ವಾರ್ಥಿಯಾಗಿ, ಏಕಾಂಗಿಯಾಗಿ, ನಿತ್ರಾಣನಾಗಿದ್ದಾನೆ. ಅವನ ಸುತ್ತಲಿನ ಸಮಾಜದ ಸಂಗಡ ಇದ್ದ ಪ್ರೀತಿಯ ಕೊಂಡಿಗಳು ಮುರಿದು ಬೀಳುತ್ತಿವೆ. ವೈಯಕ್ತಿಕ ಖಾಸಗಿ ಸಾಮ್ರಾಜ್ಯದ ಸಮಸ್ಯೆಗಳನ್ನು, ಅಂಕೆತಪ್ಪಿದ ಕೃತಕ ಸಿರಿವಂತಿಕೆಯ ದುರಾಸೆಗಳನ್ನು ಪರಿಹರಿಸಿಕೊಳ್ಳುವ ಧಾವಂತದಲ್ಲಿ ಅವನು ಮೂಲಭೂತವಾದಿಯಾಗುತ್ತಿದ್ದಾನೆ. ಪರಿಸರ ವಿನಾಶಿಯಾಗಿದ್ದಾನೆ. ಸಮುದಾಯದ ಕಂಟಕನಾಗಿದ್ದಾನೆ. ಸಮರ್ಪಣಾ ಭಾವನೆಯಿಂದ, ಸರಳ ಜೀವನದಿಂದ, ನಿರ್ಮಲ ಬದುಕಿನಿಂದ ದೂರ ಸರಿಯುತ್ತಿದ್ದಾನೆ.

ಈ ವ್ಯಕ್ತಿಯೇ ಎಲ್ಲರಲ್ಲೂ ಎಲ್ಲದರಲ್ಲೂ ಕಾಣುವುದು, ಉಪಯೋಗಿಸಿ ಬಿಸಾಡುವ ಗುಣ ಇಂದು, ಬಹುರಾಷ್ಟ್ರೀಯ ಸಂಸ್ಥೆಗಳ ಬಂಧನವೇ ಬಿಡುಗಡೆ ಎಂಬ ಭ್ರಮೆಯನ್ನು ಉಂಟು ಮಾಡಿದೆ. ಇಂತಹ ವ್ಯಕ್ತಿಯನ್ನು ಮತ್ತೆ ಸಾಂಸ್ಕೃತಿಕ ಕ್ರಿಯಾಶೀಲತೆಯ ಕಡೆಗೆ ಚಿಂತನೆಯ ಕಡೆಗೆ ಕರೆ ತರುವ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಈ ಚಟುವಟಿಕೆಗಳನ್ನು ನಿರಂತರವಾಗಿ, ಸ್ಥಳೀಯ ಸಮುದಾಯಗಳಲ್ಲಿ ಜೀವಂತವಾಗಿಡ ಬೇಕು. ಇವೆಲ್ಲಾ ಸಮಾಜ ಮುಖಿಯಾಗಿರಬೇಕು. ಈ ಸಾಂಸ್ಕೃತಿಕ ಕ್ರಿಯಾಶೀಲತೆಯ ಚಲನೆಯು ಜಾಗೃತಗೊಂಡು ಜನಜೀವನದ ಪಿಡುಗುಗಳಿಗೆ ಸರಿಯಾದ ಪರಿಹಾರಗಳನ್ನು ಕಂಡುಕೊಳ್ಳುವ ದಿಕ್ಸೂಚಿಯಾಗಬೇಕು. ಇವು ಸ್ಥಳೀಯವಾಗಿ ಬಹುಮುಖಿಯಾಗಿ ಸದ್ದುಗದ್ದಲವಿಲ್ಲದೇ ಐಕ್ಯತೆಯಿಂದ ಸಮುದಾಯದ ಸಂತೋಷವನ್ನು ಮತ್ತೆ ಹಿಂತಿರುಗಿಸಬೇಕು. ಹೆಚ್ಚಿಸಬೇಕು. -

ಒಂದು ಕಡೆ ಲಾಭಾಂಶ ದೃಷ್ಟಿಯು ನಮ್ಮ ಅಸ್ಮಿತೆಯನ್ನು ನಾಶ ಮಾಡಲು ಹೊರಟರೆ , ಇನ್ನೊಂದುಕಡೆ ಸಾಂಸ್ಕೃತಿಕ ರಾಷ್ಟ್ರೀಯತೆಯ ಮುಖವಾಡದಲ್ಲಿ ಅಡಗಿದ ಶಕ್ತಿಗಳು ಇದಕ್ಕೆ ಒತ್ತಾಸೆಯಾಗಿ ನಿಂತಿವೆ. ಇವು ಬಹುಪಾಲು ಸಮಾಜದ ಮೂಲಭೂತ ಅಗತ್ಯಗಳನ್ನು ಪಕ್ಕಕ್ಕೆ ಸರಿಸಿ ಅಸಹಾಯಕ ಪರಿಸ್ಥಿತಿಯನ್ನು ಉಂಟುಮಾಡಿವೆ. ಇದರಿಂದ ರೂಪಿಸಿಕೊಂಡ ಜೀವನ ಶೈಲಿಯು ಜನತೆಯ ಸಂತೋಷಕ್ಕೆ, ಉತ್ಸಾಹಕ್ಕೆ ಮಾರಕವಾಗುತ್ತಿದೆ ಎಂಬುದೇ ದುರಂತ. ಅನೇಕ ವಿರೋಧಾಭಾಸಗಳಿಗೆ, ದುರ್ಗತಿಗೆ, ಆತಂಕಕ್ಕೆ ಒಳಗಾಗಿರುವ ಸಮುದಾಯಗಳು ಸ್ಥಳೀಯ, ಬಹುಮುಖಿ ಸಂಸ್ಕೃತಿಗಳ ಕಡೆಗೆ ಮುಖಮಾಡುವಂತೆ ಸಾಂಸ್ಕೃತಿಕ ಕ್ರಿಯಾಶೀಲತೆ ಅನುವಾಗಬೇಕು. ಕಣ್ಣಿಗೆ ಕಾಣದ ಧಾರ್ಮಿಕ ಮೂಲಭೂತ ವಾದಕ್ಕಿಂತ ಬಡವರ ಬಗ್ಗರ ತುತ್ತಿನ ಚೀಲ ಎನ್ನುವುದು ರಚನಾತ್ಮಕವಾಗಿ ಮನವರಿಕೆಯಾಗಬೇಕು. ಪ್ರತಿಯೊಬ್ಬರಿಗೂ ನೆಲ-ಜಲ-ವನ-ವಾಯುಗಳ ಪಾವಿತ್ರತ್ರ್ಯಯವನ್ನು ಕಾಪಾಡುವ ಸಹಜ ಹಕ್ಕು, ಹೊಣೆ ದಕ್ಕಬೇಕು. ಇದು ನವ ಪಥದ ಮನುಜಮತವಾಗಬೇಕು. ಸಾಮೂಹಿಕ ವಿನಾಶದ ಕಡೆಗೆ ಚಲಿಸುತ್ತಿರುವ, ಬಿರುಕು ಬಿಟ್ಟ ಸಮುದಾಯವನ್ನು ಅಭಿವೃದ್ಧಿಯ, ಸಂತೋಷದ, ಸಮಾನತೆಯ ಕಡೆಗೆ ಹೊರಳಿಸುವ ಜವಬ್ದಾರಿಯು ಪ್ರತಿಯೊಬ್ಬರದೂ ಆಗಿದೆ.

ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯದ ವಿಷಯವನ್ನೇ ಮಾತನಾಡಲಿಲ್ಲವಲ್ಲಾ ಎಂದು ಅನೇಕರು

ಹುಬ್ಬೇರಿಸಿರಬಹುದು. ನಿಜ, ಬದುಕು ಗಟ್ಟಿಯಾದೇ ಸಾಹಿತ್ಯ ಗಟ್ಟಿ ಯಾಗುವುದಿಲ್ಲ. ಸಾಹಿತ್ಯಕ್ಕಿಂತ ಬದುಕು ದೊಡ್ಡದು. ಈ ಹೊಸೂರಿನ ಜನರ ಯಾತನೆ ಸುಧಾರಿಸದೇ ನಮ್ಮ ಬರವಣಿಗೆಗೆ ಮಾಂತ್ರಿಕತೆ ಬರುವುದಿಲ್ಲ. ಮೊನಚು ಮೂಡುವುದಿಲ್ಲ. ಸಾಹಿತ್ಯವು ಸಮುದಾಯದ ಬದುಕನ್ನು ದಾಖಲಿಸುವ ಆಕರ್ಷಕ ಕಡತ.

ಭಾಷೆಗಳ ಸಹ ಬಾಳ್ವೆ:

ಕೋಲಾರ ಜಿಲ್ಲೆಯಲ್ಲಿ ಮುಖ್ಯವಾಗಿ ಕನ್ನಡ , ತೆಲುಗು ಮತ್ತು ತಮಿಳು ಭಾಷೆಗಳು ಅನೇಕ ವರ್ಷಗಳಿಂದ ಸಹಬಾಳ್ವೆ ನಡೆಸುತ್ತಿವೆ. ಸಹಬಾಳ್ವೆಯ ಹಾಲಿಗೆ ಹುಳಿಹಿಂಡುವುದು ಅಪರಾಧ. ನಮ್ಮ ಅಭಿಮಾನ ದುರಭಿಮಾನವಾದಾಗ ಈ ಸಮಸ್ಯೆ ಸಮುದಾಯವನ್ನು ಕಾಡುತ್ತದೆ. ಒಂದು ಭಾಷೆಯನ್ನು ಒತ್ತಾಯದಿಂದ, ದ್ವೇಷದಿಂದ ಇನ್ನೊಂದು ಸಮುದಾಯದ ಮೇಲೆ ಹೇರಲು ಹೊರಟರೆ ಸಂಘರ್ಷ ಸಹಜ. ಕನ್ನಡದ ಕೆಲಸ ಪ್ರೀತಿಯಿಂದ ಆಗಬೇಕು; ಮಧುರ ಬಾಂಧವ್ಯದಿಂದ ರೂಪುಗೊಳ್ಳಬೇಕು. ಜಾತಿ, ಧರ್ಮ, ಭಾಷೆ ನಮ್ಮ ಹುಟ್ಟಿನೊಂದಿಗೆ ತಳಕು ಹಾಕಿಕೊಂಡಿಲ್ಲವೆಂಬ ಗಟ್ಟಿ ಎಚ್ಚರ ಮೂಡಬೇಕು. ಹುಟ್ಟು ಹಸಿವು, ಸಾವುಗಳೇ ಸತ್ಯವೆಂಬುದನ್ನು ಮನಗಾಣಬೇಕು. ಸರಿಯಾದ ಕನ್ನಡ ವಾತಾವರಣ ಸೃಷ್ಟಿಯಾದರೆ ಅವರೇ ಕನ್ನಡವನ್ನು ಅಪ್ಪುತ್ತಾರೆ. ಅವರೇ ಕನ್ನಡವನ್ನು ಬೆಳೆಸುತ್ತಾರೆ. ಇದಕ್ಕೆ ಈ ಜಿಲ್ಲೆಯ ಮಾಸ್ತಿ, ಡಿ.ವಿ.ಜಿಯವರೇ ಸಾಕ್ಷಿ. ಎಲ್ಲಿಯವರೆಗೆ ಶಾಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವು ಬೆಳೆಯುವುದಿಲ್ಲವೋ ಅಲ್ಲಿಯವರೆಗೆ ಆತಂಕ ತಪ್ಪಿದ್ದಲ್ಲ. ಇದನ್ನು ಹೊರತು ಪಡಿಸಿ ಏನೇ ಮಾಡಿದರೂ ಅದು ಹುತ್ತವ ಬಡಿವ ಕೆಲಸ ಅಷ್ಟೆ. ಕನ್ನಡ ಭಾಷೆಯನ್ನು ಆಧುನಿಕ ತಂತ್ರಜ್ಞಾನಕ್ಕೆ ಒಗ್ಗಿಸಿಕೊಂಡು ಬೆಳೆಸದಿದ್ದರೆ ಆತಂಕ ಕೊನೆಗೊಳ್ಳುವುದಿಲ್ಲ. ಮುಂದಿನ ಯುವ ಜನತೆ ಕನ್ನಡವನ್ನು ಎಲ್ಲ ಸಂಕೀರ್ಣತೆ, ವೈವಿಧ್ಯ ಮತ್ತು ಪ್ರಸ್ತುತತೆಯೊಂದಿಗೆ ಸಹಜವಾಗಿ ಬಳಸುವ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಮತ್ತು ಸಮುದಾಯದ ಸಂಕಲ್ಪ ಅನಿವಾರ್ಯ.

ಯುವ ಬರಹಗಾರರು :

ಕನ್ನಡ ಸಾಹಿತ್ಯವು ಇನ್ನು ಮುಂದೆ ಹೀಗೇ ಇರುತ್ತದೆ, ಹೀಗೇ ಬೆಳೆಯುತ್ತದೆ ಎಂದು ಭವಿಷ್ಯದ ಹೊಸದಿಕ್ಕನ್ನು ತೋರಿಸಲು ನಾನು ದಾರ್ಶನಿಕನೂ ಅಲ್ಲ. ಕೊರವಂಜಿಯೂ ಅಲ್ಲ. ಕಣ್ಕಟ್ಟು ಮಾಡುವವನೂ ಅಲ್ಲ. ಆದರೆ ಸುಮಾರು ಮುವತ್ತು ವರ್ಷಗಳಿಂದ ಯುವಜನತೆಯನ್ನು , ಅವರ ಬರಹಗಳನ್ನು ನೋಡುವ ಅವಕಾಶ ದೊರಕಿತ್ತು. ಪ್ರಾರಂಭದ ವರ್ಷಗಳಲ್ಲಿ ಶೇಕಡ ಮುವತ್ತರಷ್ಟು ಗಟ್ಟಿ ಬರಹಗಳು ಸಿಕ್ಕುತ್ತಿದ್ದವು. ಕೊನೆ ಕೊನೆಯಲ್ಲಿ ಶೇಕಡ ಐದರಷ್ಟು ಗಟ್ಟಿ ಬರಹಗಳು ಸಿಕ್ಕುವುದು ಕಷ್ಟ ವಾಯಿತು. ಏಕೆಂದರೆ ಬಹುಪಾಲು ಯುವಕರು ಇಂದು ಗೀಚಿದ್ದೆಲ್ಲಾ ಕಲೆ, - ಸಾಹಿತ್ಯ ಎಂಬ ಭ್ರಮೆಯಲ್ಲಿದ್ದಾರೆ. ಪತ್ರಿಕೆಗಳ ದಾಹ ಅವರು ಗೀಚಿದ್ದಕ್ಕೆಲ್ಲಾ ಅವಕಾಶ ಮಾಡಿಕೊಡುತ್ತಿವೆ. ನನ್ನ ಯುವಗೆಳೆಯರು ಅನುಭವ, ಅಧ್ಯಯನ, ಆತ್ಮ ವಿಶ್ವಾಸ, ತಾಳ್ಮೆ, ಪ್ರೀತಿಯನ್ನು ಮೈಗೂಡಿಸಿಕೊಂಡಾಗ ಮಾತ್ರ ಬದುಕು ಬರಹವಾಗುವುದೆಂಬ ಸತ್ಯವನ್ನು ಅರಿಯಬೇಕು ಈ ಸಂಯಮವನ್ನು ಜೀವನದುದ್ದಕ್ಕೂ ಉಳಿಸಿಕೊಂಡರೆ ಒಳ್ಳೆಯದು. ಏಕಾಂತದ ಧ್ಯಾನವನ್ನು ವರವನ್ನಾಗಿ ಅಥವಾ ಶಾಪವನ್ನಾಗಿ ಮಾರ್ಪಡಿಸಿಕೊಳ್ಳುವುದು ಅವರವರ ಕೈಯಲ್ಲಿದೆ. ಇದೇ ಎಲ್ಲಾ ಬರಹಕ್ಕೆ ಬುನಾದಿ. ನನ್ನ ಯುವ ಗೆಳೆಯರು ತಮ್ಮ ಬರಹಗಳಲ್ಲಿನ ಬಂಧನ, ಬಿಡುಗಡೆಯ ಗಡಿರೇಖೆಗಳನ್ನು ಚಿಂತಿಸುವ , ಗುರುತಿಸುವ, ದಾಟುವ ದಾರಿಯನ್ನು ಕಂಡುಕೊಂಡಾಗ ಸಮುದಾಯಕ್ಕೆ ಸಂತೋಷವಾಗುತ್ತದೆ. ಸೃಜನ ಶೀಲತೆಗೆ ಬಡತನವೂ ಇಲ್ಲ. ಸಿರಿತವು ಇಲ್ಲ, ಸರಹದ್ದುಗಳಿಲ್ಲ, ವರ್ಗ ವರ್ಣಗಳಿಲ್ಲ ಅದು ಅವಶ್ಯಕತೆಯ ಅನಿವಾರ್ಯತೆಯ ಒತ್ತಡದಿಂದ, ಅಂದದಿಂದ ಮೂಡಿ ಬಂದಾಗ ಸಹೃದಯರಲ್ಲಿ ಮಾನ್ಯತೆಯನ್ನು

ಪಡಯುತ್ತದೆ. ದೇಶಾಂತರದಲ್ಲಿ, ಕಾಲಾಂತರದಲ್ಲಿ ಹಲವಾರು ವ್ಯಾಖ್ಯಾನಗಳನ್ನು ಪಡೆಯುತ್ತದೆ. ಜೀವಂತವಾಗಿರುತ್ತದೆ.

ಇದುವರೆಗೂ ನನ್ನ ಮಾತುಗಳನ್ನು ತಾಳ್ಮೆಯಿಂದ ಆಲಿಸಿದ್ದಕ್ಕೆ ಧನ್ಯವಾದಗಳು. ಸಮ್ಮೇಳನದ ಅಧ್ಯಕ್ಷ ಭಾಷಣ ಇನ್ನೂ ಉದ್ದವಾಗಿರಬೇಕಾಗಿತ್ತೆಂದು ಅನೇಕರು ಭಾವಿಸಬಹುದು. ಆದರೆ ನನ್ನ ಗುರುಗಳಾದ ಡಾ|| ಜಿ. ಪಿ. ರಾಜರತ್ನಂ ಅವರು ಹೀಗೆಂದಿದ್ದಾರೆ.

ಕೇಳೋವ್ರ ಇನ್ನಾ ಕೇಳ್ಬೇಕೂಂತ
ಕುಂತ್ಕೊಂಡ್ ಇದ್ದಂಗೇನೆ
ಯೇಳೋದ್ನೆ ಎಸ್ಟೋ ಅಸ್ಟಲ್ ಏಳಿ
ಮನೆಗ್ ಓಗೋನ್ಗೆ ಮೇನೆ।
ಮಾತ್ ಇರಬೇಕು ಮಿಂಚ್ ಒಳದಂಗೆ।
ಕೇಳ್ದೋರ್ 'ಹಾ' ಅನಬೇಕು।
ಸೋನೆಯಿಡದ್ರೆ ಉಗದ್ ಅಂದಾರು
'ಮುಚ್ಕಂಡ್ ಓಗೋ ಸಾಕು।'

(ಮನ್ಸರ್ ಮಾತು)

ಎಲ್ಲರಿಗೂ ನಮಸ್ಕಾರ

(ಏಳನೇ ಕೋಲಾರ ಜಿಲ್ಲಾ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಭಾಷಣ)



ಕೃತಜ್ಞತೆಗಳು : ನನ್ನ ಓದುಗರಿಗೆ, ನನ್ನ ಊರಿಗೆ *

ಎಂ.ಟಿ. ವಾಸುದೇವನ್ ನಾಯರ್

ಸಾಹಿತ್ಯ ರಚನೆಯನ್ನು ಕಲಿಯಲು ನಿಗದಿತವಾದ ಪಠ್ಯ ಪುಸ್ತಕಗಳಿಲ್ಲ. ಮತ್ತಿತರ ಹಲವು ಉದ್ಯೋಗಗಳಿಗೂ ನಿಶ್ಚಿತವಾದ ಅಧ್ಯಯನ, ಪದವಿ, ಪ್ರಮಾಣ ಪತ್ರಗಳ ಅಗತ್ಯವಿದೆ. ಎಲ್ಲೋ ಕೆಲವು ಕೃತಿಗಳನ್ನು ಕಂಡು ಅದರಲ್ಲಿ ಗೌರವ, ಆಸಕ್ತಿಗಳನ್ನು ಹುಟ್ಟಿ ಅದರಂತೆ ಬರೆಯುವುದು ಸಾಧ್ಯವಾಗಬೇಕೆಂಬ ಪ್ರಾರ್ಥನೆಯೊಂದಿಗೆ ಬರೆಹಗಾರನೊಬ್ಬ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸುತ್ತಾನೆ. ಮಾನ್ಯತೆ, ಆದಾಯ, ಬಡ್ತಿ ಸಾಧ್ಯತೆ, ಮೊದಲಾದ ಯಾವುವೂ ಈ ವೃತ್ತಿಯ ಪ್ರಾಸ್ಪೆಕ್ಟಸ್‌ನಲ್ಲಿಲ್ಲ. ಅನುಭವಗಳಿಂದ ತನಗೆ ಅಗತ್ಯವೆನಿಸಿದ ವಸ್ತುಗಳನ್ನು ಬರೆಹಗಾರ ಕಂಡುಕೊಳ್ಳುತ್ತಾನೆ. ಎಂಬ ಸಾಮಾನ್ಯ ನಿಯಮವನ್ನು ಕೆಲವರು ಹೇಳುವುದಿದೆ. ಆದರೆ ಒಬ್ಬ ಸಾಮಾನ್ಯ ವ್ಯಕ್ತಿಯ ನಿಯಮವನ್ನು ಕೆಲವರು ಹೇಳುವುದಿದೆ. ಆದರೆ ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನಾನುಭವಗಳು ಎಷ್ಟು ಪರಿಮಿತ. ಅತಿ ವಿಚಿತ್ರವೂ, ಅದ್ಭುತವೂ ಆದ ಜೀವನಾನುಭವಗಳು ಸುತ್ತ ಮುತ್ತಲಿನ ಹಲವರಿಗಿದ್ದರೂ ಅವರು ಬರೆಹಗಾರರಾಗುವುದಿಲ್ಲ. ತೀರಾ ಸಾಮಾನ್ಯವಾದ ಅನುಭವಗಳು ಮಾತ್ರವೇ ಇರುವವರೂ ಹೇಗೆ ಬರೆಹಗಾರರಾಗುವುದಿಲ್ಲ ? ಸಾಧಾರಣವೆಂದು ಮೇಲ್ನೋಟಕ್ಕೆ ತೋರುವ ಅನುಭವಗಳಲ್ಲೂ ಕೆಲವೂ ಒಳನೋಟಗಳನ್ನು ಕಂಡುಕೊಳ್ಳುವುದು ಸಾಧ್ಯವಾಗುವುದರಿಂದ ಒಬ್ಬನಿಗೆ ಬರೆವಣಿಗೆ ಸಾಧ್ಯವಾಗುತ್ತದೆ. ದಾರುಣವೂ, ಭೀಕರವೂ ಆದ ಒಂದು ಘಟನೆಗೆ ಸಾಕ್ಷಿಗಳಾದ ಜನಸಮೂಹದ ಒಬ್ಬೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದೊಂದು ಮಾನವೀಯ ಸಂವೇದನೆಯಿರುತ್ತದೆ. ಆದರೆ ಬದುಕಿನ ಗೊಂದಲಗಳ ನಡುವೆ ಈ ಸಂವೇದನೆಗಳು ಹುಟ್ಟು ಹಾಕಬಹುದಾದ ತೀಕ್ಷ್ಣ ಭಾವನೆಗಳು ಕ್ಷಣದಲ್ಲಿಯೇ ಮಾಸಿಯೂ ಹೋಗಬಹುದು.

ಸೃಜನಶೀಲತೆಯ ಅಸ್ವಸ್ಥತೆಗಳು ಹುಟ್ಟಿಕೊಂಡು ಮನಸ್ಸಿನಲ್ಲಿ ಈ ಸಂವೇದನೆ ತಡೆಯೊಡ್ಡಿ ಭಾರವಾಗಿ ತಳವೂರುತ್ತದೆ. ಅದು ಮತ್ತೊಂದು ಗೊಂದಲವಾಗಿ ಹರಡಿಕೊಂಡೇ ಇರುತ್ತದೆ. ಹಾಗೆ ಒಂದಲ್ಲ ಹಲವು ಗೊಂದಲಗಳು ಹಲವು ಪದರಗಳಾಗಿ ಮನಸ್ಸಿನಲ್ಲಿ ನೆಲೆನಿಲ್ಲುತ್ತವೆ. ಒಮ್ಮೆ ಆತ ಕಂಡುಕೊಳ್ಳುತ್ತಾನೆ. ತನ್ನ ಮನಸ್ಸಿನಂತೆ ಬದುಕೂ ಕೂಡ ಅಸ್ತವ್ಯಸ್ತವಾಗಿದೆ ಎಂದು.

ಅದಕ್ಕೊಂದು ನಿಯಮವೋ, ತತ್ತ್ವವೋ ಕಂಡುಕೊಳ್ಳುವುದಕ್ಕಿರುವ ತೀವ್ರವಾದ ಪ್ರಯತ್ನವೇ ಬರೆವಣಿಗೆಯ ಆರಂಭ.



ವಾಸುದೇವನ್ ನಾಯರ್ ಕತೆಗಳು

ಅನು : **ಮೋಹನ ಕುಂಟಾರ್**
ಪುಟ : 206
ಬೆಲೆ : ರೂ. 120/-
ಪ್ರ : ಇಳಾ ಪ್ರಕಾಶನ ಬೆಂಗಳೂರು

ಅಸ್ತವ್ಯಸ್ತಗಳು ಪ್ರಕೃತಿ ನಿಯಮ. ಅದಕ್ಕೊಂದು ವ್ಯವಸ್ಥೆಯನ್ನುಂಟುಮಾಡಬೇಕೆಂಬುದು ಮಾನವನ ನಿರಂತರ ಕನಸು.

ಎಳೆಯ ವಯಸ್ಸಿನಲ್ಲಿ ಕಂಡುದುದರಲ್ಲೆಲ್ಲಾ ಕವಿತೆಯಿದೆಯೆಂದೂ ಕೇಳುವುದರಲ್ಲೆಲ್ಲ ಕತೆಯಿದೆಯೆಂದು ಅನ್ನಿಸಿತ್ತು. ಬಹಳ ಸಮಯಗಳ ಬಳಿಕ ತಿಳಿಯಿತು. ನಾನು ವಸ್ತುಗಳಿಗಾಗಿ ಹುಡುಕುತ್ತಿರುವಾಗ ವಸ್ತುಗಳೇ ಹಲವರನ್ನು ಹುಡುಕುತ್ತಿರುತ್ತವೆ ಎಂದು. ಅವುಗಳಲ್ಲಿ ಕೆಲವು ನನ್ನನ್ನು ಸ್ವಾಗತಿಸಿದವು ಎಂಬುದೇ ಸತ್ಯ.

ನಾನು ಹೆಚ್ಚು ಬರೆದುದು ಕತೆಗಳನ್ನು. ಎಲ್ಲೆಯೋ ನಡೆದ, ನಡೆದಿರಬಹುದಾದ ಮನುಷ್ಯಾವಸ್ಥೆಯ ಕತೆಗಳು. ಸೂಕ್ಷ್ಮವಾಗಿ ಅವಲೋಕಿಸಿದರೆ ಇದರಲ್ಲಿ ಅಸಾಧಾರಣವಾದುದೇನೋ ಇದೆ. ಈ ಮೌನ ಪ್ರೇರಣೆಯು ನನ್ನ ಮನಸ್ಸಿನ ಕಿಟಕಿಗಳ ಗುರುತು ಹಿಡಿದು ದಾಟಿ ಒಳಬಂದಿದೆ. ಹೀಗೆ ನನ್ನನ್ನು ಸ್ವಾಗತಿಸಿದ ವಸ್ತುಗಳಿಗೆ ನಾನು ಕೃತಜ್ಞತೆಗಳನ್ನು ಹೇಳುತ್ತೇನೆ. ಊರ ದಾರಿಗಳಲ್ಲೂ , ಕತ್ತಲೆಯ ಕೋಣೆಗಳಲ್ಲೂ, ಹೊಳೆಯ ಕಡುವುಗಳೆಲ್ಲೆಲ್ಲ ಕತೆಗಳನ್ನು ಅಡಗಿಸಿಟ್ಟು ಹುಡುಕುವಂತೆ ಮಾಡಿ ಮುಗುಳ್ನಗೆಯೊಂದಿಗೆ ಆಹ್ವಾನ ನೀಡಿ ನನ್ನನ್ನು ಎಂದೆಂದೂ ಕರಯುತ್ತಿರುವ ಊರಿಗೆ ನಾನು ಕೃತಜ್ಞತೆಗಳನ್ನು ಹೇಳಲೇ.

ಕತೆ ಎಂದರೆ ನಮ್ಮ ಹಳ್ಳಿಯ ಭಾಷೆಯಲ್ಲಿ ದಂತಕತೆ . ಕಲ್ಪಿಸಿಕೊಂಡೇ ಕಟ್ಟುವ ಕತೆ. ಕಾಶಿಗೆ ಹೋದ ಮಣ್ಣಾಂಗಟ್ಟೆಯ ಮತ್ತು ತರಗೆಲೆಯ ಕತೆಗಳೆಲ್ಲ ತಲೆಮಾರುಗಳ ಬಳಿಕವೂ ಸತ್ಯವಾಗಿ ನೆಲೆ ನಿಂತಿವೆ. ಭೌತಶಾಸ್ತ್ರ, ರಸಾಯನ ಶಾಸ್ತ್ರ, ವೈದ್ಯಶಾಸ್ತ್ರ ರಾಜಕೀಯ ಮೀಮಾಂಸೆಗಳಲ್ಲೆಲ್ಲ ಪರಮಸತ್ಯಗಳೆಂದು ಓದಿದ ಹಲವು ಹೊಸತಿನ ಅರಿವಿನ ಬೆಳಕಿನಲ್ಲಿ ಅಸತ್ಯಗಳೋ, ಅರ್ಧಸತ್ಯಗಳೋ ಆಗಿ ಬದಲಾದವು. ಅಚಂಚಲವೆಂದೂ, ಅನಿಷೇಧಗಳೆಂದೂ ತಿಳಿದ ಸಿದ್ಧಾಂತಗಳ ಅಡಿಗಲ್ಲುಗಳೂ ಸಹ ಚದುರಿಹೋದುದನ್ನು ನಾವು ನೋಡಿದ್ದೇವೆ. ಆದರೆ ಷೇಕ್ಸ್ ಪಿಯರ, ಟಾಲಸ್ಟಾಯ್, ದಾಸ್ತೋವಸ್ಕಿ, ವ್ಯಾಸ, ವಾಲ್ಮೀಕಿ ಮೊದಲಾದವರ ಕಟ್ಟುಕತೆಗಳೇ ಆಗಲಿ ಮಹಾಸತ್ಯಗಳಾಗಿ ಇನ್ನೂ ನೆಲೆನಿಂತಿರುವುದನ್ನು ನಾವು ನೋಡುತ್ತಿದ್ದೇವೆ.

ಆಗ ಕತೆ ನಿಜವಾಗುತ್ತದೆ. ಜೀವನವಾಗುತ್ತದೆ. ಅವುಗಳು ವಿನೋದಕ್ಕಾಗಿ ಪದಗಳನ್ನು ಇಟ್ಟು ಕಟ್ಟಿದ ಆಟದ ಮನೆಗಳಲ್ಲ. ಆದ್ದರಿಂದಲೇ ಬರೆಹಗಾರ ತನ್ನ ಬದ್ಧತೆಗಳನ್ನು ಸಮಕಾಲೀನ ಬದುಕಿನ ಸಂಕೀರ್ಣತೆಗಳನ್ನು , ಅರಿಯುವ ಪ್ರಯತ್ನವನ್ನು ಕುರಿತು ಹೇಳಲುದ್ಯುಕ್ತನಾಗುತ್ತಾನೆ. ಪ್ರಬುದ್ಧರಾದ ಬರಹಗಾರರು ಹಲವು ಕಾಲಗಳಲ್ಲಿ ಹಲವು ಭಾಷೆಗಳಲ್ಲಿ ಸೃಷ್ಟಿಸಿ ತೋರಿಸಿದ ಅನಂತ ಸಾಧ್ಯತೆಗಳನ್ನು ಕುರಿತು ನೆನಪಿಸಿಕೊಳ್ಳುವಾಗ ಆತನಿಗೆ ಧೈರ್ಯವೂ, ಆವೇಶವೂ ಬರುತ್ತವೆ. ಆತ ಪ್ರಯತ್ನವನ್ನು ಮಾಡಿಕೊಂಡೇ ಇರುತ್ತಾನೆ.

ಜೀವನ ವ್ಯಾಪಾರದಲ್ಲಿ ಕಿವುಡಾಗಿಸುವ ಗದ್ದಲಗಳ ನಡುವೆಯೂ ತನ್ನ ಕಿರುದನಿಯನ್ನು ಕಾಲದ ಬಂಡೆಕಲ್ಲಿನ ಮೇಲೆ ಬೀಳುವ ಮಾತಿನ ಉಳಿಪೆಟ್ಟಿನ ಶಬ್ದವನ್ನು ಕೇಳಲು ಕೆಲವರಾದರೂ ಕಾದಿದ್ದಾರೆ ಎಂಬ ನಂಬಿಕೆ ಬರಹಗಾರನಿಗಿದೆ. ಬದುಕಿನ ಸಮಸ್ಯೆಗಳಿಗೆ ಪರಿಹಾರವನ್ನು ಕೊಡಬಲ್ಲ ಒಂದು ದಿವ್ಯ ಮಂತ್ರವೂ ತನ್ನ ಕೈಯಲ್ಲಿಲ್ಲ ಎಂಬುದೂ ಅವನಿಗೆ ಗೊತ್ತು. ರೋಗಗ್ರಸ್ತವಾದ ಸಮಾಜದೊಡಲಿಗೆ ಬೇಗನೆ ಆರೋಗ್ಯವನ್ನು ಕೊಡುವ ಚಿಕಿತ್ಸಾ ವಿಧಾನಗಳೂ ಆತನ ಕೈಯಲ್ಲಿಲ್ಲ. ಆದರೂ ತನ್ನ ಕಿರುದನಿಯ ಮೂಲಕ ತನ್ನ ಕಾಲದ ಮನುಷ್ಯನ ಸ್ಥಿತಿಗತಿಗಳನ್ನು ಕುರಿತಾದ ಆತ್ಮೀಯ ಮಾತು ಭಯ, ನೋವುಗಳನ್ನು ಅವ್ಯಕ್ತ ನಿರೀಕ್ಷೆಗಳೊಂದಿಗೆ ಕೆಲವು ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳಲು ಆತ

ಹವಣಿಸುತ್ತಿರುತ್ತಾನೆ. ಆ ನಿರಂತರ ಪ್ರಯತ್ನದಲ್ಲಿ ಬದುಕಿಗೆ ಒಂದು ಅರ್ಥವನ್ನು ಕಂಡುಕೊಳ್ಳುವುದು ಆತನಿಗೆ ಸಾಧ್ಯವಾಗುತ್ತದೆ.

ಬರಹಗಾರ ಎಂದೂ ಹುಡುಕುತ್ತಲೇ ಇರಬೇಕಾಗುತ್ತದೆ. ಕತೆಯ ಬಾಹ್ಯ ವೇಷಧರಿಸಿ ಸತ್ಯ ಹಲವು ಮುಖಗಳಲ್ಲಿ, ಹಲವು ರೂಪಗಳಲ್ಲಿ ಎಲ್ಲೆಲ್ಲೂ ಸುತ್ತಾಡುತ್ತಿರುತ್ತದೆ. ಅದು ತನ್ನನ್ನು ಒಪ್ಪಿತ ಭಾವದಿಂದ ದಯಾಪೂರ್ವಕವಾಗಿ ಕರೆಯುವ ಆ ಕ್ಷಣಕ್ಕಾಗಿ ಕಾಯುತ್ತಾ ಆತ ಅಲೆಯುತ್ತಿರುತ್ತಾನೆ. ಕಾಲದ ಸುದೀರ್ಘ ವಾದ ಹಾದಿಯಲ್ಲಿ ಜನ ಸಮೂಹದ ನಡುವಿನಿಂದ ಮುಂದಕ್ಕೂ, ಹಿಂದಕ್ಕೂ ಜಗ್ಗುತ್ತಾ ಚಲಿಸುತ್ತಿರುತ್ತಾನೆ. ಅದನ್ನೇ ನಾನು ಮಾಡಿದೆ. ಈಗಲೂ ಮಾಡಿಕೊಂಡಿದ್ದೇನೆ.

ಮೊದಲು ಕತೆ ಬರೆಯಲಾರಂಭಿಸಿದಾಗ, ಜನಗಳು ಇಷ್ಟ ಪಡುವ, ಬಯಸುವ ಕತೆಗಳು ನನ್ನ ಮೂಸೆಯಲ್ಲಿವೆಯೋ, ಇಲ್ಲವೋ ಎಂಬುದರ ಬಗೆಗೆ ನಾನು ಯೋಚಿಸಿರಲಿಲ್ಲ. ನನ್ನ ಮನಸ್ಸು ಸದಾ ಅಶಾಂತವಾಗಿರುತ್ತಿತ್ತು. ಆ ಅಶಾಂತತೆಯನ್ನು ಅದೆಷ್ಟೋ ವರ್ಷಗಳಿಂದ ಹೊರುತ್ತಲೇ ಬಂದಿದ್ದೇನೆ. ಅದಕ್ಕೊಂದು ಮೂರ್ತರೂಪ ಕೊಡುವುದು ಸಾಧ್ಯವೇ ಎಂಬುದರ ಬಗೆಗೆ ವಿವೇಚಿಸುವುದು ಅಥವಾ ಅದನ್ನು ವ್ಯಾಖ್ಯಾನಿಸುವುದು ಕಷ್ಟ. ಬೂದಿಮುಚ್ಚಿದ ಕೆಂಡದಂತೆ ಒಳೊಗೊಳಗೇ ಉರಿಯುತ್ತಿರುವ ಈ ತೀವ್ರ ಅಶಾಂತತೆಯ ನಡುವೆ ಬರೆಯುವ ಸಿದ್ದತೆ ನಡೆಸುತ್ತಿದ್ದೆ. ಬದುಕು ಈ ಅಶಾಂತತೆಗೆ ಬೆನ್ನು ಹಾಕಿಕೊಂಡು ಹೋಗುವ ಪ್ರಯತ್ನ. ಕತೆ ಬರೆಯುವಾಗ ಈ ಅಶಾಂತತೆ ತನ್ನ ಉತ್ತುಂಗ ಸ್ಥಿತಿಗೆ ತಲುಪುತ್ತದೆ. ಕತೆ ಕೊನೆಗೊಂಡಾಗ ಅಹ್ಲಾದದ ಅನುಭವವಾಗುತ್ತದೆ. ಆಗ ಪ್ರಪಂಚ ಅಷ್ಟು ಕೆಟ್ಟದ್ದೇನಲ್ಲ ಎಂದೆನ್ನಿಸುತ್ತದೆ. ಕತೆ ಬರೆದಾದ ನಂತರ ಲಭ್ಯವಾದ ಸಂತಸವನ್ನು ಏಕೆ ಆಚರಿಸಬಾರದೆಂದು ಒಮ್ಮೊಮ್ಮೆ ಅನ್ನಿಸುವುದುಂಟು. ಆ ಒಂದುದಿನ ಸಂಜೆ ಗಾಳಿಯಲ್ಲಿ ಹಾರುವ ಹಕ್ಕಿಯಂತೆ ಅಲ್ಲಿ ಇಲ್ಲಿ ಸುತ್ತಾಡಬಹುದು. ಗೆಳೆಯರೊಡನೆ ಸೇರಿ ಚೆನ್ನಾಗಿ ನಗಬಹುದು, ಯಾವುದಾದರೂ ಪ್ರಸಂಗವನ್ನು ತೆಗೆದುಕೊಂಡು ಗೆಳೆಯರೊಡನೆ ಗಂಟೆಗಟ್ಟಲೆ ಮಾತನಾಡಬಹುದು.

ಚಿಕ್ಕಂದಿನಿಂದಲೂ ನಾನು ಒಬ್ಬಂಟಿಯೇ. ನಾಲ್ವರು ಅಣ್ಣ ತಮ್ಮಂದಿರಲ್ಲಿ ನಾನು ಎಲ್ಲರಿಗಿಂತ ಕಿರಿಯವ. ತಂದೆ ದೂರದ ಶ್ರೀಲಂಕಾದಲ್ಲಿ ಉದ್ಯೋಗದಲ್ಲಿದ್ದರು. ತಾಯಿ ನಮ್ಮ ದೊಡ್ಡ ಕುಟುಂಬದ ಭಾರವನ್ನು ಹೆಗಲ ಮೇಲೆ ಹೊತ್ತುಕೊಂಡು ನಗುವನ್ನು, ಸಂತೋಷವನ್ನು ಮರೆತೇ ಬಿಟ್ಟಿದ್ದರು. ನಾನು ಆಡುತ್ತ ನಗುತ್ತ ಕುಣದಾಡುತ್ತ ಯಾವುದಾದರೊಂದು ಮನೆಗೆ ಹೋಗಿ ಹಿಂತಿರುಗಿ ಬಂದಾಗ ನನ್ನ ಮನಸ್ಸು ತುಂಬಾ ಭಾರವಾಗಿರುತ್ತಿತ್ತು. ನನ್ನ ಮನೆಯ ವಾತಾವರಣ ಯಾತನಾಮಯವಾಗಿತ್ತು. ಖಾಲಿ ಉಗ್ರಾಣ, ಸಾಲ-ಪತ್ರಗಳು ಸಾಹುಕಾರರು ಇವೆಲ್ಲದರ ನಡುವೆ ನಾನು. ನನ್ನಂತಹ ಎಳೆಯನ ಕಣ್ಣಿನಿಂದಲೂ ಮನೆಯ ಪರಿಸ್ಥಿತಿ ಮುಚ್ಚಿಟ್ಟದ್ದೇನಾಗಿರಲಿಲ್ಲ.

ಜೀವನದಲ್ಲಿ ಎಂದೂ ನಾನು ನನ್ನ ಹುಟ್ಟು ಹಬ್ಬವನ್ನು ಆಚರಿಸಲಿಲ್ಲ. ಏಕೆಂದರೆ ನಾನು ಕರ್ಕಟಕ ತಿಂಗಳಲ್ಲಿ ಹುಟ್ಟಿದ್ದೆ. (ಕೇರಳೀಯರ ಪ್ರಕಾರ ಈ ತಿಂಗಳು ತುಂಬಾ ಅಶುಭದಾಯಕವಾದದ್ದು. ಹೀಗಾಗಿ ಖಾದ್ಯಾನ್ನಗಳ ವಿಚಾರದಲ್ಲಿ ಕೇರಳ ಸ್ವಾವಲಂಬಿಯಲ್ಲ. ಇಲ್ಲಿನ ವ್ಯವಸಾಯದಿಂದ ಎಂಟು ಒಂಭತ್ತು ತಿಂಗಳ ಕಾಲವನ್ನು ಬಹಳ ಕಷ್ಟದಿಂದ ಕಳೆಯಬಹುದು ಅಷ್ಟೆ) ಹಬ್ಬಗಳ ಬಗೆಗೆ ಆಕರ್ಷಣೆ ಇದ್ದಿರಬಹುದಾದ ವಯಸ್ಸಿನಲ್ಲಿ ಮನೆಯಲ್ಲಿ ಔಷಧಿಗೆ ಬೇಕೆಂದರೆ ಅಕ್ಕಿ ಕಾಳು ಇರುತ್ತಿರಲಿಲ್ಲ. ಕೊಯಿಲಿನ ಮಹಾಸುದಿನ ಬರುವುದನ್ನೇ ಕಾಯುತ್ತಾ ಒಂದೊಂದು ದಿನ ಕಳೆಯುವುದೂ ಅತ್ಯಂತ ದುಸ್ತರವಾಗಿತ್ತು. ನನ್ನ ಒಂದು ಹುಟ್ಟಿದ ಹಬ್ಬ ಈಗಲೂ ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. ಮೂರು ರೂಪಾಯಿ ಕೊಟ್ಟು ಯಾರಿಂದಲೊ ಬತ್ತ ತೆಗೆದುಕೊಂಡು ಬಂದು, ಕುಟ್ಟಿ ಅಮ್ಮ ಅನ್ನ ಮಾಡಿದ್ದಳು. ಅನ್ನ ಸಿದ್ಧಪಡಿಸುವ ಹೊತ್ತಿಗೆ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಅಷ್ಟು ಹೊತ್ತಿಗೆ ನನ್ನ ಹಸಿವು ತನಗೆ

ತಾನೇ ಇಂಗಿಹೋಗಿತ್ತು. ದೊಡ್ಡವನಾದ ಮೇಲೆ ಬಹಳ ವೈಭವದಿಂದಲೇ ನಾನು ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಬಹುದಿತ್ತು. ಆದರೆ ಈಗ ಆ ಬಗೆಗಿನ ಎಲ್ಲ ಆಸೆ ಆಕಾಂಕ್ಷೆಗಳು ತಣ್ಣಗಾಗಿವೆ.

ಆ ದಿನಗಳಲ್ಲಿ ಸಾಹಿತ್ಯ ಸೃಷ್ಟಿ ಎಂದರೆ ಬದುಕಿನಿಂದ ಪಲಾಯನವೆಂದು ಭಾವಿಸಿದ್ದೆ. ರಾತ್ರಿಯ ಹೊತ್ತು ಮಂಕು ದೀಪದ ಮುಂದೆ ಕುಳಿತು ಏನಾದರು ಬರೆಯುತ್ತಿರುವಾಗ, ಹಗಲು ಹೊತ್ತಿನಲ್ಲಿ ಬೆಟ್ಟಗಳ ಇಳಿಜಾರುಗಳಲ್ಲಿ ಹಾಗೂ ಮೈದಾನದಲ್ಲಿ ಸುತ್ತುತ್ತಾ ಮನಸ್ಸಿನಲ್ಲೇ ಕತೆ ಕವಿತೆಗಳನ್ನು ರಚಿಸಿಕೊಳ್ಳುತ್ತಿರುವಾಗ ಬದುಕಿನಿಂದ ದೂರ ಹೋಗುತ್ತಿರುವುದರ ಬಗೆಗೆ ಒಂದು ಬಗೆಯ ತೃಪ್ತಿ ಸಿಗುತ್ತಿತ್ತು. ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೂ ಸಾಹಿತ್ಯ ಇಂಥಾದ್ದೇ ಒಂದು ರಹಸ್ಯ ಲೋಕವಾಗಿತ್ತು. ಈ ಗುಹೆಯಲ್ಲಿ ಯಾವಾಗೆಂದರೆ ಆವಾಗ ಹೋಗಿ ಬಚ್ಚಿಟ್ಟು ಕೊಳ್ಳಬಹುದೇನೋ ಎಂದು ಅನ್ನಿಸುತ್ತಿತ್ತು.

ಕತೆಗಳನ್ನು , ಕವಿತೆಗಳನ್ನು ಪತ್ರಿಕೆಗಳಿಗೆ ಕಳುಹಿಸುತ್ತಿದ್ದೆ. ಅವುಗಳೆಲ್ಲ ಹಿಂತಿರುಗಿ ಬರುತ್ತಿದ್ದವು. ಹಿಂತಿರುಗಿ ಬಾರದಿದ್ದ ರಚನೆಗಳನ್ನು ಸಂಪಾದಕರು ಪ್ರಕಟಣೆಗೆಂದು ತಮ್ಮಲ್ಲೇ ಇಟ್ಟು ಕೊಂಡಿರಬಹುದೆಂದು ಭಾವಿಸಿ ಬುಕ್ ಸ್ಟಾಲ್‌ಗಳ ಬಳಿ ಹೋಗಿ ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದೆ. ವಾರಗಳು ಕಳೆದರೂ ನನ್ನ ಬರಹಗಳು ಮಾತ್ರ ಎಲ್ಲೂ ಗೋಚರಿಸುತ್ತಿರಲಿಲ್ಲ.

ರಜಾ ದಿನಗಳಲ್ಲಿ ನನ್ನ ಕಷ್ಟಗಳು ಹೆಚ್ಚುತ್ತಿದ್ದವು. ಮೂರು ಮೈಲಿಗಳ ದೂರದಲ್ಲಿದ್ದ ಅಂಚೆ ಕಛೇರಿಗೆ ದಿನವೂ ಹೋಗಬೇಕಾಗುತ್ತಿತ್ತು. ಮರಳಿ ಬರುತ್ತಿದ್ದ ಬರಹಗಳು ಬೇರೆಯವರ ಕೈಗೆ ಸಿಗದಂತೆ ನೋಡಿಕೊಳ್ಳಲು. ಹೀಗೆ ನಿತ್ಯವೂ ಅಂಚೆ ಕಛೇರಿಗೆ ಹೋಗುವುದು, ಮರಳಿ ಬರುವುದು - ಇದು ನನಗೆ ನಾಚಿಕೆ ಎನ್ನಿಸತೊಡಗಿತು. ಹೀಗಾಗಿ ಉಚಿತವಾಗಿ ಪುಸ್ತಕ ಸೂಚಿಯನ್ನು ಕಳುಹಿಸುತ್ತಿದ್ದ ಪುಸ್ತಕ ಪ್ರಕಾಶರಿಗೆ ಕಾರ್ಡ್ ಬರೆಯುತ್ತಿದ್ದೆ. ಮೊದ ಮೊದಲು ಪ್ರತಿ ಭಾನುವಾರ ಹನ್ನೆರಡು ಮೈಲಿ ದೂರ ನಡೆದು ಹೋಗಿ ಓದಲು ಪುಸ್ತಕಗಳನ್ನು ಕೊಂಡು ತರುತ್ತಿದ್ದೆ.

ಯಾವಾಗಲಾದರೂ ಅಲ್ಲೊಂದು ಇಲ್ಲೊಂದು ಬರಹ ಪ್ರಕಟವಾದರೂ ಯಾವುದೇ ಸಂಭಾವನೆ ಇಲ್ಲ. ಆ ಸಂಚಿಕೆಯ ಒಂದು ಪ್ರತಿಯೂ ಬರುತ್ತಿರಲಿಲ್ಲ. ಆದರೂ ಮುದ್ರಿತ ಅಕ್ಷರಗಳಲ್ಲಿ ನನ್ನ ಬರಹಗಳನ್ನು ಕಂಡಾಗ ಒಂದು ಬಗೆಯ ಪ್ರೇರಣೆ ಪಡೆದುಕೊಳ್ಳುತ್ತಿದ್ದೆ. ಆದರೆ ಮನೆಯ ಮಂದಿಗೆ ನನ್ನ ಬರವಣಿಗೆಯ ಬಗೆಗೆ ಯಾವುದೇ ಆಸಕ್ತಿ ಇರಲಿಲ್ಲ.

ಬಿ.ಎಸ್‌ಸಿ. ಪಾಸ್ ಮಾಡಿ ಉದ್ಯೋಗವಿಲ್ಲದೆ ಖಾಲಿ ಜೇಬಿನಲ್ಲಿ ಮನೆಯಿಂದ ಹೊರಬಿದ್ದೆ. ಒಂದು ದಿನ ಮನೆಯವರೆಲ್ಲರ ಮುಂದೆ ತಂದೆ ಏನೆಂದು ಹೇಳಿದರು ಗೊತ್ತೆ 'ಇವನು ನನ್ನ ಚಿಕ್ಕಮಗ, ಶ್ರದ್ಧೆ-ಭಕ್ತಿ ಏನೊಂದೂ ಇಲ್ಲ, ಯಾವುದೇ ಕೆಲಸಕ್ಕೂ ಇಲ್ಲ, ಒಂದು ಕೆಲಸ ಇವನು ಮಾಡ್ತಾನೆ- ಹಾದಿ ಬೀದಿಯಲ್ಲಿ ತಿರುಗಾಡುವವರ ತಲೆ-ಬುಡವಿಲ್ಲದ ಕತೆಗಳನ್ನು ಬರೆಯುವುದು, ಬಿಳಿ ಕಾಗದವನ್ನು ಕಪ್ಪು ಮಾಡುವುದು'. ಹೊರಗಿನಿಂದ ಬಂದ ಕೆಲವು ನೆಂಟರು ಸಹ ಅಲ್ಲಿದ್ದರು. ತಟ್ಟೆಗೆ ಬಡಿಸಿದ್ದ ಊಟವನ್ನು ಅರ್ಧದಲ್ಲೇ ಬಿಟ್ಟು ಎದ್ದಿದ್ದೆ ಅಂದು. ಮಾರನೆ ದಿನ ಅರ್ಧಂಬರ್ಧ ಬಣ್ಣ ಎದ್ದಿದ್ದ ಟ್ರಂಕ್ ತೆಗೆದುಕೊಂಡು ಬಸ್ ಸ್ಟಾಂಡ್ ಕಡೆ ಹೊರಟಿದ್ದೆ. ಬಸ್‌ಸ್ಟಾಂಡ್‌ನಲ್ಲಿ ನನಗೆ ಪರಿಚಿತನಾಗಿದ್ದ ಕೂಲಿಯೊಬ್ಬನಿಂದ ಎರಡು ರೂಪಾಯಿ ಸಾಲ ತೆಗೆದುಕೊಂಡು ನನ್ನ ಯಾತ್ರೆಯನ್ನು ಆರಂಭಿಸಿದ್ದೆ...

ಯಾವುದೇ ಖಾಯಂ ನೌಕರಿ ಇಲ್ಲ. ಯಾವುದೋ ಒಂದು ಟ್ಯುಟೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ, ಮೂರು ದಿನ ಗ್ರಾಮ ಸೇವಕನ ಕೆಲಸವನ್ನೂ ನಿರ್ವಹಿಸಿದೆ. ಕೆಲವು ತಿಂಗಳುಗಳಿಗೆ ಸೀಮಿತವಾಗಿದ್ದ ಈ ಕೆಲಸಗಳನ್ನು ಮಾಡುತ್ತಲೇ ಬರೆವಣಿಗೆಯನ್ನೂ ಮುಂದುವರಿಸಿದೆ. ಇದರಿಂದ

ಸ್ವಲ್ಪ ಸಮಯಕ್ಕಾದರೂ ಸರಿ, ಬದುಕಿನ, ಕಹಿಯಿಂದ ಬಿಡುಗಡೆ ಪಡೆಯುತ್ತಿದ್ದೆ.

ಇಂದು ಪುಸ್ತಕಗಳಿಂದ ಹಣ ಬರುತ್ತಿದೆ. ನಾನು ಇಷ್ಟಪಟ್ಟಂತಹ ಕೆಲಸ ಸಿಕ್ಕಿದೆ. ಆದರೂ ನಾನು ಸಂತೋಷದಿಂದ ಇದ್ದೀನೇನು ? ಇಲ್ಲ, ನನ್ನ ಆಂತರ್ಯದಲ್ಲಿ ಸಾವಿರಾರು ಕಹಿಗಳಿವೆ. ಪ್ರಪಂಚದ ಕಹಿಗಳು, ನೋವುಗಳು ನನ್ನ ಮನಸ್ಸಿನಲ್ಲಿ ಹೆಪ್ಪುಗಟ್ಟಿವೆ. ನನ್ನ ಕೋಪ-ತಾಪ. ವಿರೋಧದಿಂದ ಏನೂ ಆಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ನನ್ನ ಪೀಳಿಗೆಯವರಿಗೂ ಇದುಗೊತ್ತಿದೆ. ಅಲ್ಸರ್‌ನಿಂದ, ಲಿವರ್ ಡಿಸೀಸ್ ನಿಂದ ಕೆಲವು ಜನ ಆತ್ಮಾಹುತಿ ಮಾಡಿಕೊಳ್ಳುತ್ತಾರೆ. ಬದುಕಬೇಕೆಂಬ ಆಸೆ ಹೊತ್ತಿರುವ ನಾನು ಆತ್ಮಹತ್ಯ ಮಾಡಿಕೊಳ್ಳಲಾರೆ. ನನ್ನ ಕಹಿ ಮತ್ತು ಅಲ್ಸರ್ ಅನ್ನು ಹೊತ್ತು ಸಾಹಿತ್ಯವೆಂಬ ಚಿಕ್ಕ ಪ್ರಪಂಚದಲ್ಲಿ ನಾನು ಕಾಲದ ಕೈದಿಯಂತೆ ಬದುಕುತ್ತಿದ್ದೇನೆ.

ಹಲವು ವರ್ಷಗಳಿಂದ ನಾನು ಕತೆಗಳನ್ನು ಬರೆಯುತ್ತಿದ್ದೇನೆ. ಇದುವರೆಗೆ ಎಷ್ಟು ಕತೆಗಳನ್ನು ಬರೆದಿದ್ದೇನೆ ಎಂದು ನನಗೆ ಖಚಿತವಾಗಿ ತಿಳಿದಿಲ್ಲ. ಏಕೆಂದರೆ ಅನೇಕ ವರ್ಷಗಳಲ್ಲಿ ಹಲವು ಕತೆಗಳು ಕಳೆದುಹೋಗಿವೆ. ಮೊದಲೆಲ್ಲ ಮಾಸ ಪತ್ರಿಕೆಗಳ ಸಂಪಾದಕರ ಕಸದ ಬುಟ್ಟಿಗಳಲ್ಲಿ. ಪ್ರಕಟವಾದುವುಗಳಲ್ಲಿ ಹಲವು ಕಾಣದಾಗಿವೆ. ಪ್ರಸಿದ್ಧವಲ್ಲದ ಕೆಲವು ಮಾಸಪತ್ರಿಕೆಗಳಲ್ಲಾದ್ದರಿಂದ ಆಗಿರಬಹುದು. ಅವುಗಳನ್ನೆಲ್ಲ ಮತ್ತೆ ಹುಡುಕಿ ಸಂಗ್ರಹಿಸಲಾಗಲಿಲ್ಲ.

ಮೊದಲು ಪ್ರಕಟವಾದುದು ನನ್ನದೊಂದು ಲೇಖನ. ಪ್ರಾಚೀನ ಭಾರತದ ರತ್ನ ವ್ಯಾಪಾರದ ಬಗೆಗೆ. ಇದು 1947ರಲ್ಲಿ. ಲೇಖನಗಳನ್ನು ಬರೆದು ನೋಡಿದೆ. ಕವಿತೆ ಬರೆದು ನೋಡಿದೆ. ಕತೆ ಬರೆದು ನೋಡಿದೆ. 1950ರ ಆರಂಭದ ದಿನಗಳಲ್ಲಿ ನನಗೆ ಪ್ರಿಯವಾದ ಅಥವಾ ಬರೆಯಲು ಸ್ವಾರಸ್ಯಕರವಾದ ಸಾಹಿತ್ಯ ಪ್ರಕಾರ ಸಣ್ಣಕತೆ ಎಂದು ತೀರ್ಮಾನಿಸಿದೆ.

ಹೌದು. ಸಣ್ಣ ಕತೆಯೊಡನೆ ನನಗೆ ಪ್ರತ್ಯೇಕವಾದ ಒಂದು ಪಕ್ಷಪಾತವಿದೆ. ಕವಿತೆಯಂತೆ ಪೂರ್ಣತೆಯೆಡೆಗೆ ತಲುಪಿಸುವ, ಅಲ್ಲವಾದರೆ ಪೂರ್ಣತೆಯನ್ನು ಲಕ್ಷ್ಯವಿರಿಸಿ ಪ್ರವಹಿಸುವ ಒಂದು ಸಾಹಿತ್ಯ ಪ್ರಕಾರ. ಕಾದಂಬರಿಯಲ್ಲಿ ಕೆಲವೊಮ್ಮೆ ಕಾವ್ಯ ಸೌಂದರ್ಯವಿಲ್ಲದ ಅನೇಕ ಭಾಗಗಳನ್ನು ಡೊಕ್ಯುಮೆಂಟೇಶನ್‌ಗಾಗಿ ಬರೆಯಬೇಕಾಗುತ್ತದೆ. ಕಾದಂಬರಿಯ ವಿಸ್ತೃತವಾದ ಕ್ಯಾನ್‌ವಾಸಿನಲ್ಲಿ ಹಲವನ್ನು ಅಳವಡಿಸಲು ಸ್ವಾತಂತ್ರ್ಯವಿದೆ. ಸಣ್ಣಕತೆಗೆ ವಾಸ್ತು ಶಿಲ್ಪ ಸೃಷ್ಟಿಯೆಂಬ ತ್ರಿಮಾನಗಳ ಒಂದು ಸುಂದರ ರೂಪವನ್ನು ಕೊಡುವುದು ಸಾಧ್ಯ. ಸಣ್ಣಕತೆಯಲ್ಲಿ ಒಂದು ಪದ, ಕೆಲವೊಮ್ಮೆ ಒಂದು ಮಾತು ಅಧಿಕವಾಗಿರಬಹುದು. ಕಾದಂಬರಿಗಳಲ್ಲಿ ಪುಟಗಳು, ಕೆಲವೊಮಮ್ಮೆ ಅಧ್ಯಾಯಗಳೇ ಅಧಿಕವಾದರೂ ಸಮಗ್ರ ದೃಷ್ಟಿಯಲ್ಲ ಕಾದಂಬರಿಯ ಶಿಲ್ಪಕ್ಕೆ ಅಷ್ಟಾಗಿ ಬಾಧಿಸಿತೆಂದು ಹೇಳಲು ಬರುವುದಿಲ್ಲ. ಲಯವಿಲ್ಲದ ಅಲೆಗಳು ಹಾಗೂ ಸುಳಿಗಳಿಂದಾದ ಅಸ್ಪಷ್ಟವೇ ಬದುಕು. ಲಯಭಂಗದಿಂದ ಲಯವನ್ನು ಸೇರುವ ಒಂದು ಸಾಹಸ ಮಾತ್ರ ಸಾಹಿತಿಯದು. ಪೂರ್ಣತೆಯೇ ಲಕ್ಷ್ಯ. ಆದರೆ ಲಕ್ಷ್ಯವನ್ನು ಸೇರುವುದು ಎಂಬ ಒಂದು ಸ್ಥಿತಿಯಲ್ಲ. ದಿಗಂತವೆಂದು ಭಾವಿಸಿದ ದೂರಕ್ಕೆ ತಲುಪಿದಾಗ ಅದು ಮತ್ತೊಮ್ಮೆ ದೂರವಿರುತ್ತದೆ. ಬಳಿಕ ಅದಕ್ಕೂ ಹೆಚ್ಚು ದೂರದಲ್ಲಿರುತ್ತದೆ. ಆದರೆ ಈ ಪ್ರಯಾಣ ಎಂಬುದು ಅದರ ಎಲ್ಲಾ ಸಂಕೀರ್ಣತೆಗಳನ್ನು, ಸಮಸ್ಯೆಗಳನ್ನು ಜಯಾಪಜಯಗಳನ್ನು ಇರಿಸಿಕೊಂಡೇ ಸಂತೃಪ್ತಿ ನೀಡುವ ಒಂದು ಅನುಭೂತಿ. ಅದುವೇ ಬರೆಹಗಾರನನ್ನು ಧೃತಿಗೆಡಿಸದೆ ಮುನ್ನಡೆಸುವ ಶಕ್ತಿ.

ನನ್ನ ಸಾಹಿತ್ಯ ಜೀವನದಲ್ಲಿ ನಾನು ಹೆಚ್ಚು ಋಣಿಯಾಗಿರುವುದು ಕುಡಲೂರಿಗೆ. ವೇಲಾಯುಧಣ್ಣ ಗೋವಿಂದಕುಟ್ಟಿಯಣ್ಣ ಪಗಡೆ ಆಟಗಾರನಾದ ಕೊಂದುಣ್ಣಿಮಾವ, ಕಿವಿ ತುಂಡರಿಸಿದ ಮೀನಾಕ್ಷಿ ಅಕ್ಕ ಇವರೆಲ್ಲರ ಊರಾದ ಕುಡಲೂರಿಗೆ ಅಪ್ಪ, ಅಮ್ಮ, ಅಣ್ಣ ಬಂಧುಗಳು ಪರಿಚಿತರು,

ನೆರೆಯುವರು-ಇವರೆಲ್ಲರೂ ನನಗೆ ಪ್ರಿಯರಾದ ಕಥಾಪಾತ್ರಗಳು. ನನ್ನ ಪುಟ್ಟ ಅನುಭವ ಕಕ್ಷೆಯಲ್ಲಿ ಬಂದ ಸ್ತ್ರೀ, ಪುರುಷರ ಕತೆಗಳೇ ನನ್ನ ಸಾಹಿತ್ಯದ ಹೆಚ್ಚಿನ ಭಾಗಗಳು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ನನ್ನವೇ ಕತೆಗಳು. ಒಂದು ತಮಾಷೆಯೆಂಬಂತೆ ನನಗೆ ಆಗಾಗ ನೆನಪಾಗುವುದಿದೆ. ಅಮ್ಮ ಬದುಕಿದ್ದಿದ್ದರೆ; ಅಪ್ಪನ ಮನೆಯಿಂದ ಬಂದ ಶಂಕುಣ್ಣಿಯಣ್ಣನನ್ನು ಸತ್ಕರಿಸಲು ನನ್ನನ್ನು ಉಪವಾಸ ಮಲಗಿಸಿದ ಕತೆಯನ್ನು ಓದಿದರೆ ಏನನ್ನಿಸುತ್ತಿತ್ತು.

ವರ್ಷಗಳ ಬಳಿಕ ಒಂದು ಕಥಾಪಾತ್ರ, ಒಂದು ಘಟನೆ, ಒಂದು ವಾತಾವರಣ ತಕ್ಷಣ ಮನಸ್ಸಿಗೆ ಬರುವಾಗ ಇನ್ನೊಂದು ಸೃಷ್ಟಿಯ ನೋವಿನ ಆರಂಭ ಈ ನಿಮಿಷವೆಂದು ತಿಳಿಯುವಾಗ-ಆ ವೇಳೆಗೆ ವಿವರಿಸಲಾಗದ ಒಂದು ತೆರನ ಸಾರ್ಥಕ ಭಾವನೆಯುಂಟಾಗಿತ್ತದೆ. ಆ ಸಾರ್ಥಕತೆಗಾಗಿ ನಿತಾಂತವಾದ ಅಸ್ವಸ್ಥತೆಯನ್ನು ಹೊತ್ತುಕೊಂಡು ನಡೆಯುವಾಗ ಬರೆಹಗಾರ ನಿರೀಕ್ಷೆಯಿಂದ ಕಾದಿರುತ್ತಾನೆ.

ಉಗಿಬಂಡಿಯ ಎಂಜಿನುಗಳ ಶಬ್ದಕ್ಕೆ ಅದುರುತ್ತಿರುವ ಒಂದು ಹಳೆಯ ಮಹಡಿಯ ವರಾಂಡದಲ್ಲಿ ಕುಳಿತಿರುವಾಗ ಹುಚ್ಚ ಮೇಲಾಯುಧಣ್ಣ ಚಿಕ್ಕಂದಿನಲ್ಲಿ ಮನೆಗೆ ಓಡಿ ಬಂದ ದೃಶ್ಯವನ್ನು ತಕ್ಷಣ ನೆನಪಿಸಿಕೊಂಡಾಗ ಆದ ಆಹ್ಲಾದವನ್ನು ನಾನೀಗಲೂ ಮೆಲುಕು ಹಾಕುವುದಿದೆ. ಬಡಗಣ ಮನೆಯಿಂದ ತಪ್ಪಿಸಿಕೊಂಡು ಬಂದು 'ಮಾಳ್ವಕ್ಕ ನನಗೆ ಒಂದಿಷ್ಟು ಅನ್ನ ಕೊಡಿ' ಎಂದು ಅಮ್ಮನಲ್ಲಿ ಹೇಳುತ್ತಾ ಕಾಲದೀಪದ ಬೆಳಕಿರುವ ಜಗಲಿಗೆ ಬಂದ ದೃಶ್ಯ. ನನ್ನ ಕತೆಗಳಿಗಿಂತಲೂ ನನಗೆ ಪ್ರಿಯವಾದುದು ನನ್ನ ಕತೆಗಳ ಕತೆಗಳೇ. ಅದೆಲ್ಲವನ್ನು ಇಲ್ಲಿ ವಿಸ್ತರಿಸುವುದಿಲ್ಲ.

ನಾನು ಹೇಳುವುದಿಷ್ಟು: ಕುಡಲೂರು ಎಂಬ ನನ್ನ ಪುಟ್ಟ ಪ್ರಪಂಚದಿಂದ ಬೇರಾಗಿ ನಿಲ್ಲಲು ನನಗೆ ಸಾಧ್ಯವಾಗದು. ಅದರ ನಾಲ್ಕು ಮೇರೆಗಳಾಚೆ ದಾಟುವುದಿಲ್ಲವೇ ಎಂದು ಕೇಳಬಹುದು. ಇಲ್ಲ, ವಿಭಿನ್ನವಾದ ಭೂ ಪ್ರದೇಶಗಳಲ್ಲಿ ನಾನು ಅಲೆದಾಡಿದ್ದಿದೆ. ಹಲವು ಬಾರಿ. ಆದರೆ ಮತ್ತೆ ಮತ್ತೆ ನಾನು ಇಲ್ಲಿಗೇ ಹಿಂತಿರುಗಿ ಬರುತ್ತೇನೆ. ಇದೊಂದು ಮಿತಿಯೇ ಆಗಿರಬಹುದು. ಆದರೆ ಅರಿಯದ ಅದ್ಭುತಗಳನ್ನು ಗರ್ಭದಲ್ಲಿ ಸೇರಿಸಿಕೊಂಡಿರುವ ಅಗಾಧ ಸಮುದ್ರಕ್ಕಿಂತ ಅರಿಯುವ ನನ್ನ ನಿಳಾನದಿಯೇ ನನಗೆ ಪ್ರಿಯ.

ಕೃತಜ್ಞತೆಗಳು. ನನ್ನ ಓದುಗರಿಗೆ, ನನ್ನ ಊರಿಗೆ

---

*ವಾಸುದೇವನ್ ನಾಯರ್ ಅವರ ಕತೆಗಳು ಪುಸ್ತಕದ ಪ್ರಸ್ತಾವನೆ.

ಅನು : ಮೋಹನ್ ಕುಂಟಾರ್



ಪುಸ್ತಕ ಪರಿಚಯ

ಪುಸ್ತಕ : ಕಥನ
ಲೇ : ಮೊಗಳ್ಳಿ ಗಣೇಶ್
ಪುಟ :
ಬೆಲೆ : ರೂ. 150 (ಸಾದಾ ಪ್ರತಿ) ,
ರೂ. 200 (ಉತ್ತಮ ಪ್ರತಿ)
ಪ್ರಕಾಶಕರು : ಸಿ.ವಿ.ಜಿ. ಪಬ್ಲಿಕೇಷನ್ಸ್

ಕನ್ನಡದ ಪ್ರಮುಖ ಕಥೆಗಾರರ ಸಾಲಿನಲ್ಲಿ ಕುಂತ ಮತ್ತೊಂದು ಹೆಸರು ಮೊಗಳ್ಳಿ ಗಣೇಶ್.

'ಬುಗುರಿ' 'ಅತ್ತೆ' 'ದೇಸಿ' ಕೃತಿಗಳಿಂದ ಈಗಾಗಲೇ ಪ್ರಸಿದ್ಧವಾಗಿರುವ ಮೊಗಳ್ಳಿಯವರ 'ಕಥನ' ಕೂಡ ವಿಶಿಷ್ಟ ಕೃತಿಯಾಗಿದೆ. ವಿಶಿಷ್ಟ ಯಾಕೆಂದರೆ ಇದೊಂದು ಪ್ರಬಂಧ ಕಥನ. ಪ್ರಬಂಧ ಕಾವ್ಯ. ಅವರೇ ಹೇಳುವಂತೆ , ಇವನ್ನು ಶುದ್ಧಾಂಗವಾಗಿ ಕಥೆ ಎಂದೊ, ಪ್ರಬಂಧವೆಂದೊ ಹರಟೆ, ಲಹರಿ ಎಂದೋ ಹೇಳಲಾರೆ. ಹಾಗೆ ನೋಡಿದರೆ, ಎಲ್ಲಬರಹದ ಕ್ರಿಯೆಯೂ ವ್ಯಕ್ತಿನಿಷ್ಠ ಅನುಭವದಿಂದ ವಿಕಾಸ ಗೊಂಡು ಸಾಮಾಜಿಕವಾಗಿ ಬಹುರೂಪಿ ಸಂವೇದನೆಗಳಿಗೆ ಒಳಗಾಗುವಂಥವು. ಆದ್ದರಿಂದ ಇದೊಂದು ಏಕಕಾಲಕ್ಕೆ ಪ್ರಬಂಧ ಕಥನವೂ ಹೌದು. ಪ್ರಭಂಧ ಕಾವ್ಯವೂ ಹೌದು.

ಈ ಕೃತಿ ಒಟ್ಟು 24 ಕಥನಗಳನ್ನೊಳಗೊಂಡಿದೆ. ಅಂತರಂಗದ ತೊಳಲಾಟಗಳು, ಬಹಿರಂಗದ ಹುಡುಕಾಟಗಳು ಇಲ್ಲಿವೆ. ಕಣ್ಣಿಗೆ ಕಂಡ ಸತ್ಯಗಳು ಅನುಭವದ ಮೂಸೆಯಲ್ಲಿ ಕರಗಿ, ಪಕ್ವವಾಗಿ ಕಥನಗಳಾಗಿ ಹೊರ ಹೊಮ್ಮಿದೆ. ಅಂಥ ಅನುಭವಗಳೊಂದಿಗೆ ಓದುಗರೂ ಬೆರತುಬಿಡುವಂತಿದೆ. ಒಮ್ಮೆ ಓದಲು ಪುಸ್ತಕವನ್ನು ಕೈಗೆತ್ತಿಕೊಂಡರೆ, ಮಧ್ಯೆ ಬದಿಗಿರಿಸಲು ಮನಸ್ಸಾಗದಂಥ ಭಾಷೆಯ ಆಪ್ತತೆ ಇದೆ.

ಕೂಲಿ ಸಿಗದ ಸಮಯದಲ್ಲೆಲ್ಲಾ ಬಾಳೆಗೊನೆ ಹಾಲು ಮೂಳನ್ನೆಲ್ಲ ತನ್ನ ಚಾಣಾಕ್ಷತನದಿಂದ ಕದ್ದು ತನಗೇನು ಗೊತ್ತಿಲ್ಲದವನಂತಿದ್ದು ಬಿಡುತ್ತಿದ್ದ ಜೋಗಿ , ಕೊನೆಗೊಮ್ಮೆ ಅನಿವಾರ್ಯವಾಗಿ ಗೌಡರ ಅಲಾರಂ ಗಡಿಯಾರ ಕದ್ದು, ಕದ್ದ ಮಾಲೇ ಕಳ್ಳನನ್ನು ಅದರ ಮಾಲಿಕನ ಮುಂದೆಯೇ ಹಿಡಿದುಕೊಟ್ಟು ರಗಳೆಯಾಗಿ, ಕೊನೆಗೆ ಆ ಗಡಿಯಾರವನ್ನು ಅದರೊಡನೆಯನಿಗೆ ಜೋಗಿ ಕೊಟ್ಟ ಮೇಲೆ ಜನರ ಬಾಯಲ್ಲಿ ಗಂಟೆ ಜೋಗಿಯಾಗುತ್ತಾನೆ. ಮತ್ತೆಂದೂ ಏನೂ ಕದಿಯಲಾರದವನಾಗಿ ಊರನ್ನೇ ಬಿಟ್ಟು ಬಿಡುತ್ತಾನೆ. ಇಡೀ ಕಥನ ತಮಾಷೆಯಾಗಿ ಸಾಗಿದರೂ, ಈ ಕಾಲದ ಮಾಯೆಯಲ್ಲಿ ಯಾವುದು ತಾನೆ ಸುಲಭವಾಗಿ ಅರಿವಿಗೆ ದಕ್ಕುತ್ತದೆ. ಎಂಬ ಮಾತು ಇಡೀ ಗಂಟೆ ಜೋಗಿ ಕಥನದಲ್ಲಿ ಮತ್ತು ಅದರಾಚೆಯೂ ಮಾರ್ದನಿಸುತ್ತದೆ.

'ಉರ್ದು ಶಾಲೆ ಮತ್ತು ನಾನು' ಬಾಲ್ಯದ ಸುಂದರ ನೆನೆಪುಗಳ ಮಾಲೆಯಾದರೆ, ಸಾವಿನ ಮುಂದೆ ಬಿಚ್ಚಿಕೊಳ್ಳುವ ಸಣ್ಣತನಗಳು, ವ್ಯಕ್ತಿಯನ್ನು ಕಾಡುವ ಒಬ್ಬಂಟಿತನ , ಆರ್ತನಾದಕ್ಕೆ ಕಿವಿಗೊಡುವ ಸುತ್ತಲ ಪ್ರಕೃತಿ, ಹಾದಿ ಬದಿಯ ಯಾವುದೋ ಒಂದು ಮರ, ಯಾರದೋ ಒಂದು ಪ್ರೀತಿಯ ಕಣ ಏನೆಲ್ಲವನ್ನೂ ರೂಪಿಸಿ ಬಿಡುತ್ತವೆಂಬುದನ್ನು ತುತ್ತಿನ ಮರ ಹೇಳುತ್ತದೆ. ಹೊಂಗೆ ಮರವಂತೂ, ಏಕಾಂತ, ದುಃಖ, ಖಿನ್ನತೆ, ಒಂಟಿತನ, ಕಾಡಿದಾಗಲೆಲ್ಲ ನೆನಪಾಗುತ್ತದೆ. ಲೇಖಕರು ಬಾಲ್ಯದಲ್ಲಿ ಅಪ್ಪಿಕೊಳ್ಳುತ್ತಿದ್ದ ಹೊಂಗೆ ಮರ ಅದರೊಂದಿಗಿನ ಆಪ್ತ ಸಂಬಂಧದ ಚಿತ್ರಣ ನೋಡಿ. ಅಪ್ಪನ

ಹೊಡೆತದಿಂದ ತಪ್ಪಿಸಿ ಕೊಳ್ಳಲು ಮರವೇರಿ ಕುಳಿತಾಗ, ಇಡೀ ಹೊಲಗೇರಿ ಹರಿದ ಹಳೆಯ ಬಟ್ಟೆಯಂತೆ ತೂತು ತೂತಾಗಿ ಕಂಡದ್ದು. ಈ ದರಿದ್ರ ದೇಶದ ಅಲಕ್ಷಿತರ, ತಿರಸ್ಕರಿಸಲ್ಪಟ್ಟವರ ಪರಿಗೆ ಸರಿಸಲ್ಪಟ್ಟವರ ಮೈ ಚರ್ಮವ ಸಿಲಿದು ಊರಗಲದ ಹಾಸಿ ತಮಟೆ ನಗಾರಿ ಮಾಡಲು ಒಣಗಿಸಲು ಇಟ್ಟಿದ್ದಾರೆಂಬಂತೆ ಕಾಣುತ್ತಿದ್ದವು ಎಂಬ ಮಾತುಗಳು ಯಾರ ಮನಸ್ಸನ್ನು ತಟ್ಟುವುದಿಲ್ಲ ? ಇಂದಿಗೂ ಶಾಪವೆಂಬಂತೆ ಉಳಿದು ಬಿಟ್ಟಿರುವ ಹೊಲಗೇರಿಗಳ ದುಸ್ಥಿತಿಯನ್ನು ಬಿಚ್ಚಿಡುವ ಚಿತ್ರ ಕಣ್ಣಿಗೆ ಕಟ್ಟುವಂತಿದೆ.

ಗಂಗೋತ್ರಿಯ ಸುಂದರ ಕ್ಯಾಂಪಸ್ಸಿನಲ್ಲೆಲ್ಲಾ ಅಲೆದಾಡುತ್ತಾ ಶಿಕ್ಷಣಕ್ಕೂ ನೈತಿಕತೆಗೂ ಸಂಬಂಧವಿಲ್ಲವೆಂದು ಚಿಂತಿಸುವ ಮನಸ್ಸು, 'ಕನ್ನೆಯ ಸ್ನೇಹ' ನೆನಪು, ಒಡೆದ ಪ್ರೇಮದ ನೆನಪು, ಬಯಕೆಗಳೊಂದಿಗೆ ಸಾಗುವ, ಹಾಗೂ ಅದರೊಂದಿಗೆ ಸೃಜನಶೀಲ ಬರಹಗಾರನೊಬ್ಬನ ಅಂತರಂಗದ ತಲ್ಲಣಗಳನ್ನು ಬಿಚ್ಚಿಡುವುದು 'ಮಾನವ', ಮನುಷ್ಯನ ಕ್ರೌರ್ಯವನ್ನು ಬಿಚ್ಚಿಡುವ ಈ ಲೇಖನ ಕಥನ ಪ್ರೀತಿ ದೋರಿ, ಸಾಂತ್ವಾನವನ್ನು ನೀಡಿದವರನ್ನು ಸಂದೇಹಿಸುವಂತೆ ಮಾಡಿಬಿಡುವ ಬದುಕಿನ ಕ್ರೌರ್ಯ ಲೇಖಕರೊಂದಿಗೆ ಓದುಗರನ್ನು ದಂಗು ಬರಿಸಿ ಬಿಡುತ್ತದೆ.

'ಆಹಾ ಜೀವವೇ' ಕತೆಯ 'ಮೊದಲು', 'ನಾಯಿಪಾಡು', ಒಂದು ಹಳೆಯ 'ನೆನಪು' ಇವು ದೇವನೂರರ ಕತೆಗಳನ್ನು ನೆನಪಿಸುತ್ತದೆ. ಇಲ್ಲಿ ದೇವನೂರರ ಕತೆಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ಅನ್ಯಾಯದ ವಿರುದ್ಧ ನೇರ ಪ್ರತಿಭಟನೆಯಿದೆಯಾದರೂ ವ್ಯವಸ್ಥೆಯನ್ನು ಅನಿವಾರ್ಯವಾಗಿ ಒಪ್ಪಿಕೊಂಡು ಬಿಡಬೇಕಾಗುವ ಕ್ರೌರ್ಯವಿದ್ದೇ ಇದೆ.

ಗಂಡು - ಹೆಣ್ಣಿನ ಪ್ರೀತಿಯೊಳಗಿನ ತಳಮಳ, ಒದ್ದಾಟ, ಅನುಮಾನ, ಗೊಂದಲಗಳನ್ನು ಚಿತ್ರಿಸುತ್ತಲೇ ಪರಸ್ಪರ ಸಂಬಂಧಗಳ ಅಸ್ತಿತ್ವದ ನೈಜತೆಯ ಪ್ರಶ್ನೆಯನ್ನು 'ಹರೆಯ ಉರಿವ ಹೊತ್ತು' ಎತ್ತಿದರೆ, ಪ್ರೀತಿಯ ಸ್ವಗತದ ಹಾಡೆಂಬಂತೆ ಕೇಳಿಸುವುದು 'ಪ್ರೀತಿಯ ಬೆನ್ನೇರಿ ಬಂತು ಜೀವನ'ದಲ್ಲಿ; ಪ್ರೀತಿಯ ತೀವ್ರತೆ ಅಪಾರವಾದಾಗ ಅದು ಮಾನವೀಯ ಸಮಾಜದ ವ್ಯಾಪ್ತಿಗೆ ಬಂದಾಗ ಪ್ರೀತಿಯ ಗುಬ್ಬಿ ಬಂದೂಕದ ನಳಿಕೆಯಲ್ಲಿ ಗೂಡು ಕಟ್ಟಿ ಹಾಡಲಿ ಎಂದು ಬಯಸುತ್ತಾ ರಕ್ತ, ಹಿಂಸೆ, ಯುದ್ಧ ಕೊಲೆ, ಸುಲಿಗೆಯಂತಹ ಶತ್ರುಗಳ ಸಾಮ್ರಾಜ್ಯದಲ್ಲಿ ಎಂದೆಂದೂ ಪ್ರೀತಿಯ ನಿರಂತರತೆಯ ಸಂಕೇತವಾಗಿ ಜಗತ್ತಿನ ಪ್ರತಿಯೊಬ್ಬ ಪ್ರಜೆಗೂ ಇದು ನೆನಪಿರಲಿ ಎಂಬಂತೆ ತಾಜಮಹಲುಗಳು ಹುಟ್ಟುತ್ತವೆ' ಎಂಬುದು ಪರಸ್ಪರ ಪ್ರೀತಿ ಮತ್ತು ಶಾಂತಿ ಇಂದಿನ ಬದುಕಿಗೆ ಅನಿವಾರ್ಯವೆಂಬುದನ್ನು ಒತ್ತಿ ಹೇಳುತ್ತದೆ. (ಮೊಗಳ್ಳಿಯವರ ಒಟ್ಟು ಚಿಂತನೆ / ಒಲವು ಕೂಡ ಇದೇ ಆಗಿದೆ.)

ಇಲ್ಲಿನ 'ಮಾದಾರಿಯ ಕತೆ'ಯಂತೂ ಎಲ್ಲರೆದೆಯಾಳಕ್ಕಿಳಿದು ಹಾದಿ ಬದಿಯಲ್ಲಿ ಬದುಕುವವರ ಬದುಕಿನ ಪಾಡು, ಅವರಲ್ಲಿನ ಮಾನವೀಯತೆ, ಅಸಹಾಯಕತೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ, ಗದ್ಗದಿತರಾಗುವಂತೆ ಮಾಡುತ್ತದೆ.

'ಪ್ರತಿಭೆಯ ಸ್ನೇಹ' ಎ.ಕೆ ರಾಮಾನುಜಂ ಅವರೊಡನೆ ಒಡನಾಡಿದ ನೆನಪು, 'ಪ್ರೀತಿಯ ಅಲೆಗಳಿಗೆ ಕೊನೆಯಲ್ಲಿ' ಜಯಂತ ಕಾಯ್ಕಿಣಿಯವರ ಆದರದ ಪ್ರೀತಿ, ಅವರೊಂದಿಗೆ ನಡೆದ ಸಾಹಿತ್ಯದ ಸೂಕ್ಷ್ಮತೆಗಳೆಲ್ಲದರ ಬಗೆಗಿನ ಚರ್ಚೆಯ ನೆನಪು ಎಂದಿಗೂ ಪ್ರಸ್ತುತವೆನಿಸುತ್ತದೆ. ಹಾಗೆಯೇ ಸಾಹಿತ್ಯದ ಚಟುವಟಿಕೆಗಳಿಗೆ, ಅದರೊಂದಿಗಿನ ಮಾತುಕತೆಗಳಿಗೆ ನಾವೆಷ್ಟೇ ಜೋತುಬಿದ್ದರೂ ಕೊನೆಗೂ ಮುಖ್ಯವಾಗುವುದು ನಮ್ಮನ್ನಂಟಿಕೊಂಡ ನಮ್ಮ ಕುಟುಂಬ/ಬದುಕಿಗೇ ಎಂಬ ಸತ್ಯವನ್ನು ಕಂಡರಿಸುತ್ತದೆ.

ಮನದೊಳಗಿನ ತಣ್ಣಗಿನ ಮೌನ, ಮೌನದೊಳಗಿನ ನೆನಪು , ಮನುಷ್ಯನನ್ನು ದಣಿವಿಗೆ ನೂಕುವ ಪರಿ, ಬದುಕೊಂದು ನಿರಂತರ ಚದುರಂಗದಾಟವೆಂಬುದನ್ನು ಪ್ರತಿಮಿಸುವುದು 'ದಣಿವು'. 'ಮೈ ಮುಚ್ಚುವ ಶೃಂಗಾರ', 'ಸೂರ್ಯ ಬಿತ್ತುವ ಕನಸು', 'ಆ ಕೋಲಾಟ, ಹರಟೆ ಕಟ್ಟೆ ,' ವೈಚಾರಿಕ ಲೇಖನಗಳು, 'ಜಗತ್ತಿನುದ್ದಕ್ಕೂ ಕಂಡು ಬರುವ ವೈವಿಧ್ಯಮಯ ಉಡುಪಿನ ಶೈಲಿಗಳು ಹೇಗೇ ಇದ್ದರೂ ಮಾನವನ ಆಳ ಪ್ರಜ್ಞೆಯಲ್ಲಿ ಅವನ್ನು ತನ್ನನ್ನು ದೈಹಿಕವಾಗಿ ಶೃಂಗಾರದಿ ಮುಚ್ಚಿಕೊಳ್ಳುತ್ತಾ ಮಾನಸಿಕವಾಗಿಯೂ ದೇಹದ ಅಂತರಂಗ ಪ್ರಿಯನೇ ಆಗಿರುತ್ತಾನೆ' ಎಂಬುದನ್ನು ಮೈಮುಚ್ಚುವ ಶೃಂಗಾರ ಪ್ರತಿಪಾದಿಸಿದರೆ, 'ಸೂರ್ಯ ಬಿತ್ತುವ ಕನಸು' ಬುಡಕಟ್ಟು ಜನಾಂಗದವರು , ಜನಪದರ ಕಾಣುವ ವಿಶಿಷ್ಟ ಬಗೆಯ ಕನಸುಗಳನ್ನು ಕುರಿತು ವಿಶ್ಲೇಷಿಸುತ್ತದೆ. ಜನಪದರ ವಿಶಿಷ್ಟ ಕಲೆ ಕೋಲಾಟವನ್ನು ನೆನಪಿಸಿಕೊಳ್ಳುತ್ತಲೇ ಹರಟೆ ಕಟ್ಟೆಯಾಗಿರುತ್ತಿದ್ದ ಅರಳಿ ಮರ-ಕಟ್ಟೆ ಭಾರತೀಯ ಸಂಸ್ಕೃತಿಯಲ್ಲಿ ಹೇಗೆ ವಿಶಿಷ್ಟವಾಗಿರುವುದೆಂಬುದನ್ನು ತಿಳಿಯಪಡಿಸುವ ಲೇಖನ-'ಆ ಕೋಲಾಟ, ಹರಟೆ ಕಟ್ಟೆ'.

ಪ್ರವಾಸಿ ಕಂಡ ಇತಿಹಾಸ ಎಚ್.ಎಲ್. ನಾಗೇಗೌಡರು ಸಂಪಾದಿಸಿರುವ ಪ್ರವಾಸಿ ಕಂಡ ಇಂಡಿಯಾದ ಸಂಪುಟಗಳನ್ನು ಪರಿಚಯಿಸುವ ಲೇಖನ. ಈ ಲೇಖನವನ್ನು ಓದಿದವರಿಗೆ ಆ ಸಂಪುಟಗಳನ್ನು ಓದಲೇಬೇಕೆನಿಸುವುದು ಈ ಲೇಖನದ ವೈಶಿಷ್ಟ್ಯ

ಒಳ್ಳೆಯ ಕತೆಗಳಾಗಿ ಮೂಡಿರುವ ಮ್ಯಾರೇಜ್ ಮ್ಯೂಸಿಯಂ ಮತ್ತು ಆ ಊರ ಬಯಲಾಟಗಳು ಅನುವಾದಗಳಂತಿವೆ.

ಒಟ್ಟಾರೆ ನೆನಪುಗಳು ಪಿಸು ನುಡಿಯಾಗುತ್ತವೆ, ಸ್ವಗತದ ಕತೆಯಾಗುತ್ತವೆ, ಹಾಡಾಗುತ್ತವೆ. ಈ ಸ್ವಗತದ ಕತೆಗಳು , ಹಾಡುಗಳು, ತಮ್ಮ ಭಾಷೆಯ ಸರಳತೆ, ಸೂಕ್ಷ್ಮ ಹಾಗೂ ಸೃಜನ ಶೀಲ ಸಂವೇದನೆಯಿಂದ ಕೂಡಿದ್ದಾಗ ಅವು ಓದುಗರದೂ ಆಗಿ, ಅವರನ್ನು ಬಹುಕಾಲ ಕಾಡಿಸುತ್ತವೆ. ಇವೆಲ್ಲವೂ ಮೊಗಳ್ಳಿಯವರ ಕಥನ ದಲ್ಲಿದೆ.

■ ಗೀತಾ ಡಿ.ಸಿ.





ಮಮ್ತಾಜಳ ಮಹಲು (ಕವನ ಸಂಕಲನ)

ಲೇ : ಕೆ. ಷರೀಫಾ

ಪುಟ : 72

ಬೆಲೆ : ರೂ. 35

ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು

ಕೆ. ಷರೀಫಾ ಅವರ ಮಮ್ತಾಜಳ ಮಹಲು ಕವನ ಸಂಕಲನದಲ್ಲಿನ ಅನೇಕ ಕವನಗಳು ಹೊಸ ಆದರ್ಶದ, ಆಲೋಚನೆಯ ವಿಭಿನ್ನ ತಿರುವನ್ನು ಹೊಂದಿವೆ. ಪ್ರಶ್ನೆಗಳನ್ನು ಕೇಳುವ ಹಿನ್ನೆಲೆಯಲ್ಲಿ ದಿಟ್ಟ ಎದೆಗಾರಿಕೆಯು ಕಾಣುವುದು, ಮತ್ತೊಂದು ಮಗ್ಗಲಿನಲ್ಲಿ ಉತ್ತರದ ಬಗೆಗೆ ಓದುಗರರಲ್ಲಿ ಆಲೇಚನೆ ಮೂಡಿಸುವ ಪ್ರಯತ್ನವಿರುವಂತೆ ಭಾಸವಾಗುತ್ತದೆ.


ಸಮಾಜದಲ್ಲಿನ ಭೂತ ಹಾಗೂ ವರ್ತಮಾನ ಕಾಲದ ಘಟನಾವಳಿಗಳು ಹಿಂದಿನಿಂದ ಇಂದೀಗೂ ತಮ್ಮ ಕಲೆಯ ಛಾಪನ್ನು ಅಳಿಸಲಾರದಂತೆ ಗಟ್ಟಿಯಾಗಿ ತಳವೂರಿ ನಿಲ್ಲುವುದನ್ನು ಎಲ್ಲ ಕವನಗಳ ಹಿನ್ನೆಲೆಯಲ್ಲಿ ಮುಖ್ಯ ವಸ್ತುವನ್ನಾಗಿ ಸ್ವೀಕರಿಸಿದ್ದಾರೆ. ತತ್ಕಾಲೀನ ಸಮಸ್ಯೆಗಳು, ಬದುಕಿನ ಏರುಪೇರುಗಳ ನಡುವೆ ಆಸೆ, ಅದರಿಂದ ದೊರೆಯಬಹುದಾದ 'ಫಲ, ಕನಸು - ವಾಸ್ತವ್ಯಗಳ ನಡುವೆ ಅನ್ವೇಷಣೆಯ ಹಾದಿ, ಇಲ್ಲಿಯ ಕವನಗಳ ಹೆಜ್ಜೆ ಗುರುತುಗಳೆನ್ನ ಬಹುದು.


ನೆರಳು, ಆತ್ಮ ಮತ್ತು ಸಾಕ್ಷಿಭವ್ಯತೆ, ನರಳುತ್ತಿರುವ ಅಸ್ತಿತ್ವ, ಮೊದಲಾದ ಪದ್ಯಗಳು, ವೈಯಕ್ತಿಕ ಆಸ್ತಿತ್ವವನ್ನು ಕುರಿತ ಆಲೋಚನೆಯ ಜೀವಂತ ಅಭಿವ್ಯಕ್ತಿ. ಧರ್ಮ, ಜಾತಿಗಳ ಬೇಧವಿಲ್ಲದೆ ಆದಿಯಿಂದ ಸಮಾಜ ಹೆಣ್ಣನ್ನು ಕಂಡಿರಿಸಿರುವ ರೀತಿಯನ್ನು ಕವನಗಳ ಸಾಲಿನಲ್ಲಿ ಕಡೆದಿಟ್ಟಿರುವ ಕಲಾಕೃತಿ ಇದಾಗಿದೆ.

ಸ್ತ್ರೀ ಪರವಾದ ಚಿಂತನೆ, ಹೋರಾಟ, ಕಾಳಜಿ, ಸ್ವತಃ ಸ್ತ್ರೀ ಯಿಂದಲೇ ಮಾಡಬೇಕಾದ ಹೊಸ ಕ್ರಾಂತಿ, ಇವೆಲ್ಲದ್ದಕ್ಕಾಗಿ ಅಗತ್ಯವಿರುವ ಮಾನಸಿಕ ಸಿದ್ಧತೆ, ಆತ್ಮಸ್ಥೈರ್ಯವನ್ನು ಇಲ್ಲಿನ ಪದ ಪುಂಜಗಳು ಆಕರ್ಷಕ ರೀತಿಯಲ್ಲಿ ಒದಗಿಸಿ ಕೊಡುತ್ತವೆ.

'ಮಾನವರಾಗಿ' ಎಂಬ ಕವಿತೆ ಸಮಸ್ತ ಸೃಷ್ಟಿಯ ಜನನಿಯದ ಹೆಣ್ಣನ್ನು ಶೋಷಿಸುವ ಮೌಢ್ಯರಲ್ಲಿ ಮಾನವೀಯತೆಯ ಅರಿವನ್ನು ಮೂಡಿಸುವ ಸರಳ ಸುಂದರ ಪ್ರಯತ್ನ. ಒಟ್ಟಂದದಲ್ಲಿ ಒಮ್ಮತವಾಗಿ ಸ್ತ್ರೀ ವಾದದ ಪರಿಕಲ್ಪನೆಗೆ ತನ್ನದೇ ಆದ ಪ್ರಬಲ ಪೌಷ್ಟಿಕತೆಯನ್ನು ಈ ಕವನ ಸಂಕಲನ ಒದಗಿಸಿ ಕೊಟ್ಟಿದೆ ಎನ್ನಬಹುದು.

■ ಅನುಪಮ





ಬೊಗಸೆಯಲ್ಲಿ ಮಳೆ

ಲೇ : ಜಯಂತ ಕಾಯ್ಕಿಣಿ
ಪುಟ : 304,
ಬೆಲೆ : 100/-
ಪ್ರ : ಅಭಿನವ ಬೆಂಗಳೂರು

ಅಂಕಣ ಬರಹಗಳು ಯಾವತ್ತಿಗೂ ಅವಸರದ ಹೆರಿಗೆಗಳೇ. ಪತ್ರಿಕೆಯೊಂದರ ನಿಯಮಿತೆಯ ದಾವಂತದಲ್ಲಿ, ಪುಟಗಳ ಮಿತಿಯಲ್ಲಿ ಹಾಗೂ ಸ್ಫೂರ್ತಿಆವೇಶಗಳು ಎಂಬ ಸಾಹಿತಿಗಳ ಯಾವ ಸೋಮಾರಿ ಸಬೂಬುಗಳನ್ನೂ ಅದು ಕೇಳದೆ ಹುಟ್ಟಲೇ ಬೇಕಾದ ಅನಿವಾರ್ಯ ಶಿಶು. ಎರಡು ರೀತಿಯ ಅಂಕಣ ಬರಹಗಾರರನ್ನು ಮುಖ್ಯವಾಗಿ ಗಮನಿಸಬಹುದು. ಒಂದು ಹಿಂದಿನಿಂದ ನಡೆದು ಬಂದ ಎಚ್ಚೆಸ್ಕೆ, ಹಾಮಾನಾ, ಎಲ್ ಎಸ್ ಎಸ್ ಅಂಥವರ ಆಯಾ ಕಾಲದ ಅಗತ್ಯಕ್ಕೆ ತುರ್ತಿಗೆ ತಕ್ಕನಾಗಿ ಯಾವ ವ್ಯಕ್ತಿ ವಿಷಯದ ಬಗೆಗಾದರೂ ಶಿಸ್ತಿನಿಂದ ಶ್ರದ್ಧೆಯಿಂದ ಬರೆಯುವ ಒಂದು ರೀತಿ. ಅದು ಬಹಳ ಸಲ ಅಕ್ಷರ ಕವಾಯತಿನಂತೆ ಕಂಡರೂ ಅಂಥಾದ್ದೊಂದು ಶಿಸ್ತು ಮತ್ತು ವ್ಯಾಪ್ತಿ ಅಗತ್ಯ ಎನ್ನುವಲ್ಲಿ ಎರಡು ಮಾತಿಲ್ಲ. ಮತ್ತೊಂದು ಲಂಕೇಶ್ ಬರೆದ ಮಾದರಿಯ ಸ್ವಯಂಭೂ ಬರವಣಗೆ. ತಾನು ತನ್ನ ಬಗ್ಗೆ ಹೇಳುತ್ತಾ ಉಳಿದ ಸಂಗತಿಗಳನ್ನು ಚರ್ಚಿಸುವಂಥದ್ದು. ಲಂಕೇಶರಂಥಾ ನಿಗಿನಿಗಿಸುವ ಪ್ರತಿಭಾವಂತಕೂಡಾ ಅಂಥದ್ದೊಂದು ಸಂಯಮ ಸಾಧಿಸುವಲ್ಲಿ ಅನೇಕ ಕಡೆ ಎಡವಿದ್ದು ಕಾಣಬರುತ್ತದೆ. ತಾನು ಬರೆಯುವುದರಲ್ಲೆಲ್ಲಾ ತಾನೇ ಆವರಿಸಿಕೊಂಡ ಬಿಡುವ ರೋಗ ಲಂಕೇಶರ ನಂತರ ಅನೇಕರು ಹಾಸ್ಯಮಯವಾಗಿ ಅನುಕರಿಸಲು ಯತ್ನಿಸಿ ಸೋತಿದ್ದಾರೆ.

ಜಯಂತ ಕಾಯ್ಕಿಣಿಯವರ ಬೊಗಸೆಯ ಮಳೆ ಎದುರಿಗಿಟ್ಟುಕೊಂಡು ಇಷ್ಟೆಲ್ಲಾ ವಿಚಾರಗಳನ್ನ ಮೇಲೆ ಚರ್ಚಿಸುವ ಅಗತ್ಯ ಯಾಕೆ ಬಿತ್ತೆಂದರೆ ಈ ಬರಹ ಇಂಥಾ ಎರಡೂ ಗುಣಗಳನ್ನು ಮೀರಿದ ಕಾರಣಕ್ಕೆ. ಅವರೇ ಹೇಳಿರುವ ಹಾಗೆ 'ನಾನು' ಎಂಬ ಶಬ್ಧವನ್ನು ಬಳಸದೇ ಬರೆಯುವ ವ್ರತವೊಂದನ್ನು ಹಿಡಿದ ಜಯಂತ್ ಅಂಕಣ ಬರಹಗಳು ಹೀಗೆ ಅನೇಕ ಸಣ್ಣ ಸಣ್ಣ ಮಾನವೀಯ ಹಾಗೂ ಆಪ್ತ ಸಂಗತಿಗಳ ಬಗ್ಗೆ ಇರಬಹುದು ಮತ್ತು ಇರಬೇಕು ಎನ್ನುವುದರತ್ತ ಗಮನ ಸೆಳೆದಿದ್ದಾರೆ. ಸವೆದ ರಾಜಮಾರ್ಗಗಳ ಬದಲು ಕಾಲುದಾರಿ. ತೋರಿಕೆಯ ವಿದ್ವತ್ತು ಮತ್ತು ಆತ್ಮರತಿಗಳ ಅತಿಗೆ ತಲುಪದೆ ಮಧ್ಯಮ ವರ್ಗದ ಅನೇಕ ನೋವು ನಿಟ್ಟುಸಿರು ಸಣ್ಣ ಸಣ್ಣ ಸಂತೋಷಗಳು, ಹಿಪಾಕ್ರಿಸಿಗಳು, ಅಮಾನುಷ-ಮಾನವೀಯ ಘಟನೆಗಳ ಸುತ್ತ ಈ ಅಂಕಣದ ಬರಹಗಳು ಸ್ಪಂದಿಸಿದೆ. ರಥ ಬೀದಿಯ ಬಸ್‌ಸ್ಟಾಂಡ್, 'ಹಿಂಬಾಗಿಲು ಎಂಬ ನಿಶ್ಯಬ್ಧ ಕೋಶ' 'ಹಾಡಿದಷ್ಟೂ ರಾತ್ರಿ ಸಣ್ಣದಾಗುತ್ತಿತ್ತು' ರೇಡಿಯೋ ಎಂಬ ರಗಳೆಯಿಲ್ಲದ ಮನುಷ್ಯನ ಮಿತ್ರನನ್ನು ಕುರಿತು. ಬದುಕಿನ ಆಪ್ತವಾಗಬಲ್ಲ ತುಂಟತನ ವಿನೋದ, ವಿಷಾದ ಮತ್ತು ಅಗಾಧವಾದ ಕುತೂಹಲಗಳನ್ನು ಇಟ್ಟುಕೊಂಡ ಇವರ ಬರಹಗಳಲ್ಲಿ ಭಾವುಕತೆ ಪ್ರಧಾನವಾಗಿ ಕಂಡರೂ ಅದು ಎಲ್ಲೂ ತನ್ನ ಮಿತಿಯನ್ನು ಮೀರುವುದಿಲ್ಲ.

ನದಿಯೊಳಗಿನ ಬೊಗಸೆ ನೀರನ್ನು ಎಲ್ಲಿಂದ ಬೇಕಾದರೂ ಎತ್ತಿ ಕುಡಿದಂತೆ 300 ಪುಟಗಳ ಈ ಪುಸ್ತಕದ ಯಾವ ಪುಟದಿಂದಲಾದರೂ ಒಂದು ಗುಕ್ಕು ಓದಬಹುದಾದ ಓಮತ್ತರೀ ಅನುಭವಿಸಬಹುದಾದ ಚೆರಗಿದೆ, ನಮ್ಮ ತನವಿದೆ; ಯಾವ ವಿವರಗಳೂ ಓದುಗನನ್ನು ಗೋಜಲಿಗೆ ಅಪರಿಚಿತತೆಗೆ ಈಡು ಮಾಡದೆ ಅರೆ, ಇದು ನನ್ನದೇ ಅಂತ ಅನುಭವಿಸುವಂತೆ ತಾನೂ ಗಮನಿಸದಿದ್ದ ಸಣ್ಣ ಸಂಗತಿ ಥಕ್ಕನೆ ದಕ್ಕಿದಂತೆ ಮಿನುಗಿಸುತ್ತದೆ. ಒಂದು ಒಳ್ಳೆಯ ಪುಸ್ತಕದ ಸಾರ್ಥಕ ಓದಿಗೆ ಇನ್ನೇನು ಬೇಕು.



ಟೈಂಪಾಸ್ - ಪ್ರತಿಮಾಬೇಡಿ ಆತ್ಮ ಚರಿತ್ರೆ

ಅನು : ರವಿಬೆಳಗೆರೆ
ಪುಟ : 300,
ಬೆಲೆ : ರೂ. 100.00
ಪ್ರ : ಭಾವನಾ ಪ್ರಕಾಶನ, ಬೆಂಗಳೂರು

ಕನ್ನಡದ ಮಟ್ಟಿಗೆ ಇದೊಂದು ವಿಲಕ್ಷಣ ಆತ್ಮಕತೆಯೊಂದರ ಸಮರ್ಥ ಅನುವಾದ. ರವಿ ಬೆಳಗೆರೆಯ ಶಕ್ತಿ ಇರುವುದು ಕೃತಿಯೊಂದರ ಜೊತೆಯಲ್ಲಿ ತಾನೂ ಕರಗಿ ಹೋಗುವಲ್ಲಿ. ಪ್ರೊತಿಮಾ ಬೇಡಿಯ ಬಂಡುಕೋರತನ, ಅವಳ ಸ್ವೇಚ್ಛಾ ಪ್ರವೃತ್ತಿಯ ಜೊತೆಜೊತೆಗೂ ಅವಳ ಗಾಢವಾಗುವ ಹೆಣ್ಣುತನ ತಾಯ್ತನಗಳು, ಅದರ ಬೆನ್ನಿಗೇ ಹುಟ್ಟುವ ವಾಂಛೆಗಳು ಅದರ ಪೂರೈಕೆಯ ನೆಪದಲ್ಲಿ ಹುಟ್ಟಿಕೊಳ್ಳುವ ಸಂಬಂಧಗಳು ಮತ್ತು ಕೆಲ ಕಾಲದ ನಂತರ ಅದೇ ಸಂಬಂಧಗಳು ಹಳಸಲಾಗಿ ಬಂಧನವಾಗಿ ಮತ್ತೆ ಹೊಸದಕ್ಕೆ ತುಡಿಯುವುದು, ಅಷ್ಟೊಂದು ಗಾಢವಾದ ಮತ್ತು ಅಷ್ಟೊಂದು ತೀವ್ರವಾಗಿ ಬದುಕಿದ ಹೆಣ್ಣೊಬ್ಬಳ ಜೀವನ ಚರಿತ್ರೆ ನಮ್ಮನ್ನ ಕಲಕಿ ಬಿಡುತ್ತದೆ. ಗಾಢವಾಗಿ ಆವರಿಸಿಕೊಳ್ಳುತ್ತದೆ. ಬರೀ ಈ ವಾಂಛೆಗಳ ದೇಹ ಮನಸ್ಸುಗಳ ಅಗತ್ಯ ಪೂರೈಕೆಯಷ್ಟೇ ಆಗಿದ್ದರೆ ಈ ಆತ್ಮಕಥನಕ್ಕೆ ಯಾವ ವೈಶಿಷ್ಟ್ಯವೂ ಇರುತ್ತಿರಲಿಲ್ಲ ಆದರೆ ಪ್ರೊತಿಮಾ ಬೇಡಿ ತಾನು ನೃತ್ಯ ಕಲಾವಿದೆಯಾಗಿ ತನ್ನ ಬದುಕೊಂದನ್ನ ಎರಡು ಮಕ್ಕಳಾದ, ನಂತರ ರೂಪಿಸಿಕೊಂಡು ನೃತ್ಯಕ್ಕೆ ಸಮರ್ಪಿಸಿಕೊಂಡು ತೀವ್ರತರವಾಗಿ ಬದುಕಿದ್ದು ಒಂದು ವಿಸ್ಮಯ.

ನಮ್ಮ ಬಹುಮಟ್ಟಿಗಿನ ಅನುವಾದಗಳು ಹೊರಗಿನ ಶಾಬ್ದಿಕ ಚೌಕಟ್ಟು ಮತ್ತು ಅದರಾಚೆಗಿನ ಕೃತಿಯೊಂದರ ಭಾವದ ಯಥಾವತ್ ನಿರೂಪಣೆಯಷ್ಟಕ್ಕೆ ನಿಂತು ಬಿಡುತ್ತದೆ. ಆದರೆ ರವಿ ಬೆಳಗೆರೆಯ ಅದ್ಭುತವಾದ ಭಾಷೆಯ ಬೀಸು ಈ ಜೀವನ ಚರಿತ್ರೆಯ ಆತ್ಮವನ್ನು ಅದರ ಚಂಚಲತೆಯನ್ನ ತೆರೆದಿಡುತ್ತದೆ.

ರವಿಬೆಳಗೆರೆಯ ಅನುವಾದಗಳ ಆಯ್ಕೆಯ ಹಿಂದಿರುವ ಉದ್ದೇಶ. ಒಂದು ವಿಲಕ್ಷಣವಾದ ಅಥವಾ ಅಪರೂಪವಾದ ಬೆಚ್ಚಿ ಬೀಳಿಸಬಲ್ಲ ಕತೆಯೊಂದನ್ನು ರಂಜನೀಯವಾಗಿ ಓದುಗರಿಗೆ ರೂಪಿಸಿಕೊಡುವುದಾಗಿದೆ. ಅವರ ವಿಶಾಲವಾದ ಓದುಗ ವಲಯಕ್ಕೂ ಇಂಥಾ ಭಿನ್ನವಾದ ಬರಹಗಳ ಬಗ್ಗೆ ಇರುವ ನಿರೀಕ್ಷೆ ಮತ್ತು ಆಶಯಗಳನ್ನ ಅವರು ಭಗ್ನಗೊಳಿಸಲು ಸಾಧ್ಯವಿಲ್ಲ. ಕನ್ನಡದ ಇತರ ಲೇಖಕರ ಅನುವಾದಗಳು (ಉದಾ.ಗೆ ತೇಜಸ್ವಿ) ಜೊತೆಗೆ ಹೋಲಿಸುವಾಗ ರವಿ ಬೆಳಗೆರೆಯ ಪಕ್ಕಾ ರಂಜನೆಯ ಕಮರ್ಶಿಯಲ್ ಉದ್ದೇಶ ನಿಚ್ಚಳವಾಗುತ್ತದೆ. ಅವರ ಹಿಮಾಲಯನ್ ಬ್ಲಂಡರ್, ಕನ್ನಡಕ್ಕೆ ಅಪರೂಪವಾದ ಅಗತ್ಯವಾಗಿದ್ದ ಅನುವಾದ. ಆದರೆ ಖುಷವಂತ್ ಸಿಂಗರ ಕಂಪೆನಿ ಆಫ್ ವಿಮೆನ್‌ನಂಥಾ ವಿಕೃತ ಲೈಂಗಿಕ ವಸ್ತುವಿನ ಕಾದಂಬರಿಯನ್ನೂ ಮನತುಂಬಿ ಮೈ ಮರೆತು ಅನುವಾದಿಸಿದ್ದು ಕಾಣಬರುತ್ತದೆ.

ತನ್ನದೇ ಓದುಗರ ವಲಯವೊಂದನ್ನು ನಿರ್ಮಿಸಿಕೊಂಡಿರುವ ರವಿ ಬೆಳಗೆರೆಯ ಸಾಹಿತ್ಯ ಯಾತ್ರೆಯ ಆಯ್ಕೆಗಳು ಕುತೂಹಲಕರವಾಗಿದೆ ಮಡಿವಂತ ಸಾಹಿತ್ಯ ವಿಮರ್ಶೆ ರೆವ್ಯೂಗಳು ತಮ್ಮದೇ ಭಾವಿಗಳೊಳಗೆ ಮುಳುಗಿಕೊಂಡಿವೆ. ಹೊಸ ಗಾಳಿ ಬೆಳಕು ಅದರ ಕುರುಡುಗಣ್ಣಿಗೆ ಕಾಣುವುದಿಲ್ಲ.

ಈ ಸಂಚಯದ ಲೇಖಕರು

ಡಿ.ಎಸ್. ಶ್ರೀನಿವಾಸ ಪ್ರಸಾದ್ : ದ್ವಿತೀಯ ಎಂ.ಎ. ಸ್ನಾತಕೋತ್ತರ ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು-560 020.

ಸಿ.ವಿ. ಶೇಷಾದ್ರಿ,ಹೊಳವನಹಳ್ಳಿ : 114/1259 ಉಪ್ಪಾರಬೀದಿ ಕೊರಟಗೆರೆ-572129, ತುಮಕೂರು ಜಿಲ್ಲೆ

ಚಿದಂಬರ : C/o ಬಸವಣ್ಣೆಪ್ಪ ಕಂಬಾರ ಅಂಚೆ ಘೋಡಗೇರಿ ತಾ. ಹುಕ್ಕೇರಿ, ಜಿ.ಬೆಳಗಾವಿ.

ಡಾ॥ ಹೆಚ್.ಎಸ್.ವೆಂಕಟೇಶಮೂರ್ತಿ : 'ಸಂಕಲ್ಪ', ನಂ. 30, ಪುಷ್ಪಗಿರಿನಗರ, ಹೊಸಕೆರೆಹಳ್ಳಿ, ಬನಶಂಕರಿ ಬೆಂಗಳೂರು - 560 085

ಬಿ.ಎಸ್. ಜಯಪ್ರಕಾಶನಾರಾಯಣ : ಉಪಸಂಪಾದಕ, ಪ್ರಜಾವಾಣಿ ಎಂ.ಜಿ.ರಸ್ತೆ ಬೆಂಗಳೂರು - 560 001.

ಜಿ.ಪಿ. ಬಸವರಾಜು : ಉಪಸಂಪಾದಕರು, 'ಪ್ರಜಾವಾಣಿ' ಎಂ.ಜಿ. ರಸ್ತೆ, ಬೆಂಗಳೂರು - 560 001.

ಚಿ.ಶ್ರೀನಿವಾಸರಾಜು : 21 (8) ಬೆಳಂಜೀವಿ, ಹಳೇ ಈಜು ಕೊಳದ ರಸ್ತೆ ಕೋದಂಡ ರಾಮಪುರ ಮಲ್ಲೇಶ್ವರಂ, ಬೆಂಗಳೂರು - 3

ಡಿ.ಸಿ. ಗೀತಾ : ಉಪನ್ಯಾಸಕರು, ನ್ಯಾಷನಲ್ ಪ್ರಥಮ ದರ್ಜೆ ಕಾಲೇಜು, ಭೂಪಸಂದ್ರ ಹೆಬ್ಬಾಳ ಅಂಚೆ, ಬೆಂಗಳೂರು - 560 094

PRB DEC L 309 / 94-95



SANCHAYA
Edited, Printed & Published
by D.V. Prahlad
100, II Main, VIth Block
IIIrd Stage IIIrd phase
Banashankari
Bangalore - 560 085